ಪ್ರಕೀರ್ಣಕ ೧೧

ಅಮೃತಪಾನ ಮಾಡಿದವನು ಮತ್ತೆಂದೂ ಅದನ್ನು ಮರೆಯಲಾರ. ಅದನ್ನು ಮತ್ತೆ ಮತ್ತೆ ಆಸ್ವಾದಿಸಲು ಹಾತೊರೆಯುತ್ತಾನೆ. ಆಚಾರ್ಯ ಶ್ರೀಯವರ ಪುಣ್ಯಮಯ ಜೀವನವೂ ಅಂತಹದ್ದೇ. ಅವರ ವಾಣಿ ಅಮೃತ ಪೀಯೂಷ! ಯಾರೇ ಅವರ ಸಂಪರ್ಕಕ್ಕೆ ಬಂದರೆ ತೀರಿತು. ಅವರಿಂದ ಜೀವನವಿಡೀ ದೂರ ಸರಿಯಲಾರದ ಚುಂಬಕಶಕ್ತಿಯಾಗಿ ಬಿಡುತ್ತಿದ್ದರವರು. ಅವರ ವಾಣಿಯನ್ನೊಮ್ಮೆ ಆಲಿಸಿದರೆ ತೀರಿತು. ಅದು ಸದಾ ಕಿವಿಯಲ್ಲಿ ಮೃದು ಮಧುರವಾಗಿ ಗುಂಯ್ ಗುಡುತ್ತಿತ್ತು. ಅವರ ಜೀವನ ಶಾಂತಿಯ ಶೀತಲಧಾರೆ! ಸಾಹಿತಿ, ಕಲಾಕಾರ, ಲೇಖಕ ಯಾರೇ ಅವರ ಹತ್ತಿರ ಬಂದರೂ, ಅವರ ಮೇರು ತುಲ್ಯ ವ್ಯಕ್ತಿತ್ವಕ್ಕೆ ಮಂತ್ರಮುಗ್ಧರಾಗಿ ಬಿಡುತ್ತಿದ್ದರು.

ಅವರ ತಪಃಪೂತ ಜೀವನ ವಿಲಕ್ಷಣವಾಗಿತ್ತು. ಮಾಯಾಮಯ ಪ್ರಪಂಚದ ತುಚ್ಛ ಭೋಗಗಳಿಂದ ದೂರ ಸರಿದ ಶ್ರೇಷ್ಠ ಸಂಯಮದ ಮಹಾ ಸಾಧಕರನ್ನು ಈ ಭೋಗಮಗ್ನ ಪ್ರಪಂಚದಲ್ಲಿ ಕಾಣುವುದು ಪುಣ್ಯದ ಮಾತಾದೀತು.

೧೯೫೨ರಲ್ಲಿ ದಹಿಗಾಂನಲ್ಲಿ ಅವರು ವಿರಾಜಮಾನರಾಗಿದ್ದರು. ಒಂದು ದಿನ ಅಲ್ಲಿಯ ಮಂದಿರದಿಂದ ಇನ್ನೊಂದು ಕಡೆ ಹೋಗುವಾಗ ಏಣಿಯಿಂದ ಕಾಲು ಜಾರಿ ಕೆಳಗೆ ಬಿದ್ದು ಬಿಟ್ಟರು. ಅಂದು ಅವರ ಪ್ರಾಣವೇ ಹೋಗಬೇಕಾಗಿತ್ತು. ದೈವಯೋಗದಿಂದ ಪಾರಾದರು. ಒಂದು ಪಾದದಲ್ಲಿ ದೊಡ್ಡ ಗಾಯವಾಯಿತು.. ಸುಮಾರು ಒಂದುವರೆ ಅಂಗುಲದಷ್ಟು ದೊಡ್ಡಗಾಯ. ಅದಕ್ಕೆ ಬಟ್ಟೆಯ ಪಟ್ಟಿಯನ್ನು ಕಟ್ಟಲು ನಿರಾಕರಿಸಿದರು. ಸಾಧಾರಣ ನಿರ್ದೋಷ ಔಷಧಿಯನ್ನು ಮಾತ್ರ ಶ್ರಾವಕರು ಹಚ್ಚುತ್ತಿದ್ದರು ಮಾಂಸ, ಚರ್ಬಿ ಇರುವ ಯಾವುದೇ ಔಷಧಿ ದೂರವಿಟ್ಟಿದ್ದರು.

ಉದಾತ್ತ ವ್ಯಕ್ತಿತ್ವ

ಒಂದು ದಿನ ಒಬ್ಬ ಆಚಾರ್ಯ ಶ್ರೀಯವರಿಂದ ಮಾಡಲ್ಪಟ್ಟ ಅನೇಕ ಉಪಕಾರಗಳನ್ನು ಸ್ಮರಿಸಿ ಅವರನ್ನು ಬಹಳವಾಗಿ ಪ್ರಶಂಸಿಸಿದ. ಆಗ ಅವರು ನುಡಿದ

ನಿರ್ಲಿಪ್ತ ನುಡಿ ಕೇಳಿದವರಿಗೆ ಮೇರು ತುಲ್ಯ ವ್ಯಕ್ತಿತ್ವದ ಸನ್ನಿಧಿಯ ಭಾಸವಾಗ ತೊಡಗಿತು.

"ನಮಗೆ ಈ ಸ್ತುತಿಯಿಂದ ಸ್ವಲ್ಪವೂ ಹರ್ಷವಾಗುವುದಿಲ್ಲ. ನಿಂದೆಯಿಂದ ವಿಷಾದವೂ ಆಗುವುದಿಲ್ಲ. ನಮ್ಮ ದೃಷ್ಟಿಯಲ್ಲಿ ಸ್ತುತಿ ನಿಂದೆಗಳಿಗೆ ಯಾವ ಮೂಲ್ಯವೂ ಇಲ್ಲ. ನೀನು ನಮ್ಮ ಮೂರ್ತಿಯನ್ನು ಮಾಡಿಸಿ ಪೂಜಿಸು. ಆದರಿಂದ ನಮಗೆ ಯಾವ ಹಿತ ಆದೀತು? ನಮ್ಮಾತ್ಮ ಏಕಾಂಗಿ. ಸುಖ ದುಃಖ ಭೋಗಿಸುವವನು ಅವನೊಬ್ಬನೇ. ಬಾಹ್ಯದ ಸ್ತುತಿ ನಿಂದೆಗಳಿಂದ ನಮಗೆ ಯಾವ ಸಹಾಯವೂ ಆಗುವುದಿಲ್ಲ. ಜಿನೇಂದ್ರ ಭಗವಾನರೂ ನಮಗೆ ಸಹಾಯಕರಾಗಲಾರರು. ಆತ್ಮ ಹೇಗೆ ಕಾರ್ಯತತ್ಪರನಾಗುತ್ತಾನೋ ಹಾಗೆ ಭೋಗಿಸುತ್ತಾನೆ. ಸಮಸ್ತ ಜಗತ್ತು ಕ್ಷಣಬಂಗುರವಾಗಿದೆ. ದೊಡ್ಡ ದೊಡ್ಡ ಋದ್ಧಿಧಾರಿ ಮುನಿಶ್ವರರೂ ಈ ಜಗತ್ತಿನಲ್ಲಿ ಉಳಿದಿಲ್ಲ. ಹೀಗಿರುವಾಗ ನಾವು ಯಾವ ಮೂಲೆಯ ಸೊಪ್ಪು ?"

ಇದರ ಮೇಲೆ ನನ್ನ ಚಿಕ್ಕ ತಮ್ಮ ಹೇಳಿದ.

"ಮಹಾರಾಜ್ !ನಿಮ್ಮ ಗುಣಗೌರವದಿಂದ ಭವ್ಯಜೀವಿಗಳಿಗೆ ಪುಣ್ಯ ಬಂಧವಾಗುತ್ತದೆ. ಆದ್ದರಿಂದ ಅದು ನಿರುಪಯೋಗಿ ಎಂದು ಹೇಗೆ ಹೇಳುತ್ತೀರಿ ?"

ಅವರೆಂದರು "ನಮ್ಮ ದೃಷ್ಟಿಯಿದಲ್ಲಿ ಪಾಪಪುಣ್ಯಗಳೆರಡೂ ಸಮಾನವಾಗಿವೆ. ಅವರೆಡೂ ಬೇಡಿಗಳ ಸಮಾನವಾಗಿವೆ. ಸ್ತುತಿ ನಿಂದೆಗಳಿಂದ ನಮಗೇನಾಗಬೇಕಾಗಿದೆ ? ಈ ಉತ್ಸವ ನಿಮಗೆ ಬಹಳ ಮಹತ್ಪೂರ್ಣವಾಗಿ ಕಾಣುತ್ತಿರಬಹುದು. ನೀವು ಧರ್ಮದ ಪ್ರಭಾವನೆ ಮಾಡಿ. ಆದರಿಂದ ನಮಗೇನು ? ನಾವು ಇಚ್ಛಿಸುವುದೇನೆಂದರೆ ಜನಗಳ ಸ್ತುತಿಯು ನಮ್ಮ ಕಿವಿಗಳವರೆಗೆ ಬಂದು ಮುಟ್ಟಲೇಬಾರದು. ನಾವು ನಿಂದಕ ಮತ್ತು ವಂದಕರನ್ನು ಸಮಾನವಾಗಿ ನೋಡುತ್ತೇವೆ" ಹೀಗೆ ಹೇಳುವಾಗ ಅವರ ಮುಖಮಂಡಲವು ವೈರಾಗ್ಯದ ಕಳೆಯಿಂದ ತುಂಬಿತ್ತು. ಅವರ ಈ ಮಾತು ಕೇಳಿ ಎಲ್ಲರೂ ಅಪಾರವಾಗಿ ಹಿಗ್ಗಿದರು.

ಆಚಾರ್ಯ ಶ್ರೀಯುವರು ೧೨ ಜೂನ್ ೧೯೫೨ರಲ್ಲಿ ಒಮ್ಮೆ ಹೀರಕ್ ಜಯಂತಿಯಲ್ಲಿ ಮಾತನಾಡುತ್ತಾ ಹೀಗೆ ಹೇಳಿದರು."ಧರ್ಮ ಅರ್ಥ ಕಾಮ ಮತ್ತು ಮೋಕ್ಷ ಇವು ಪುರುಷಾರ್ಥಗಳಾಗಿವೆ. ಇವುಗಳಲ್ಲಿ ಮೋಕ್ಷವೇ ಶ್ರೇಷ್ಠವಾದುದು. ಧರ್ಮದ ಆರಾಧನೆಯಿಂದಲೇ ಉಳಿದ ಅರ್ಥ ಕಾಮಾದಿಗಳು ಪ್ರಾಪ್ತವಾಗುತ್ತವೆ. ಆದ್ದರಿಂದ ಧರ್ಮಾರಾಧನೆ ಮಾಡುವುದು ಎಲ್ಲರ ಕರ್ತವ್ಯ"

ಜಿನವಾಣಿಯ ಬಗ್ಗೆ ವ್ಯಾಖ್ಯಾನ

ಆಚಾರ್ಯ ಉಮಾಸ್ವಾಮಿಗಳು ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳನ್ನು ಮೋಕ್ಷ ಮಾರ್ಗ ಎಂದು ಹೇಳಿದ್ದರು. ಕೇವಲ ಸಮ್ಯಕ್ತದಿಂದಲೇ ಮೋಕ್ಷ ಆಗದು. ಜಿನವಾಣಿಯಲ್ಲಿ ಶ್ರದ್ಧೆ ಇಡುವುದು ಸಮ್ಯಕ್ತ. ಜಿನವಾಣಿಯ ಒಂದು ವ್ಯಾಖ್ಯಾನದಿಂದಲೂ ಜೀವದ ಕಲ್ಯಾಣವಾಗುವಾಗ ಸಂಪೂರ್ಣ ಅಧ್ಯಯನದಿಂದ ಏನಾಗದು ? ಈ ಪಂಚಮಕಾಲದಲ್ಲಿ ಜಿನಭಗವಾನರಿಲ್ಲ. ಮತ್ತೆ ಯಾರನ್ನು ಅವಲಂಬಿಸುವುದು ? ಅವರ ವಾಣಿ ಹೊರತು ಅವಲಂಬನೆ ಯಾವುದೂ ಇಲ್ಲ. ಆದರ ಹೊರತು ಕಲ್ಯಾಣಕಾರಿಯಾದುದು ಯಾವುದೂ ಇಲ್ಲ. ಜಿನೇಂದ್ರ ವಾಣಿಯೇ ಪೂರ್ಣ ಸತ್ಯ"

"ಭಗವಂತನ ವಾಣಿ ಯಾವ ಪ್ರಕಾರ ಇದೆಯೆಂದರೆ ಜಿನ ಮಂದಿರವಿರದಿದ್ದರೆ ಶ್ರಾವಕರೂ ಇರರು, ಶ್ರಾವಕರಿಲ್ಲದಿದ್ದರೆ ಮುನಿಗಳೂ ಇರಲಾರರು. ಮುನಿಗಳು ಇರದಿದ್ದರೆ ಜೈನ ಧರ್ಮವೂ ಇರುವುದಿಲ್ಲ. ಈ ದೃಷ್ಟಿಯಿಂದ ಧರ್ಮಕ್ಕೆ ಆಧಾರ ಸ್ತಂಭವಾದ ಜಿನ ಮಂದಿರಗಳ ಪವಿತ್ರತೆಯ ರಕ್ಷಣಾರ್ಥ ನಾವು ಪ್ರಯತ್ನ ಪಡಬೇಕು. ನಾವು ಜಿನವಾಣಿಯ ಆಜ್ಞೆಯನ್ನು ಪಾಲಿಸಬೇಕು.

"ಈಗ ಜಿನ ವಾಣಿಯ ಲೋಪವಾಗುವುದಿಲ್ಲವೆಂದು ಭಗವಂತರು ಹೇಳಿದ್ದ ಆ ಮಾತು ಎಂದು ಸುಳ್ಳಾಗುವುದಿಲ್ಲ. ಯಾವ ಮಾತನ್ನು ಆದಿನಾಥರು ಹೇಳಿದ್ದರೋ ಅದನ್ನೇ ಮಹಾವೀರರೂ ಹೇಳಿದರು. ಕೋಟಾಕೋಟಿ ಸಾಗರೋಪಮ ಕಾಲ ಕಳೆದು ಹೋದ ಮೇಲೂ ತೀರ್ಥಂಕರರ ವಾಣಿಯಲ್ಲಿಯಾವ ವ್ಯತ್ಯಾಸವೂ ಆಗಿಲ್ಲ. ಮತ್ತು ಭಗವಾನ್ ಮಹಾವೀರರು ಮೋಕ್ಷಕ್ಕೆ ಹೋದ ಈ ೨೫೦೦ ವರ್ಷಗಳಲ್ಲೂ ಯಾವ ಅಂತರವಾಗಿಲ್ಲ. ಈ ಮಾತನ್ನೂ ದೃಢ ವಿಶ್ವಾಸದಿಂದ ನಂಬತಕ್ಕದ್ದು.

ಪಂಚ ಪಾಪ ತ್ಯಾಗ

ಅವರು ಹೇಳಿದರು "ಜೀವವು ಪಂಚ ಪಾಪಗಳನ್ನು ತ್ಯಜಿಸಬೇಕೆಂದು ಶಾಸ್ತ್ರದಲ್ಲಿ ಹೇಳಿದೆ. ಪ್ರತಿ ಜೀವ ದೇವಗತಿಗೆ ಹೋಗುತ್ತದೆ. ಆದ್ದರಿಂದ ಪಾಪಾ ತ್ಯಾಗ ಮಾಡಬೇಕು. ಎಲ್ಲರೂ ಸಮ್ಯಕ್ತ ಧಾರಣೆ ಮಾಡಬೇಕು. ಹಿಂಸಾದಿ ದೋಷಗಳನ್ನು ದೂರ ಮಾಡಬೇಕು. ಜ್ಞಾನಾಭ್ಯಾಸ ಮತ್ತು ಶುಭಾಚರಣೆಯಲ್ಲಿ ದೃಢ ಶ್ರದ್ಧೆ ಬೆಳೆಸಿಕೊಳ್ಳಬೇಕು.

ಮಾರ್ಧವ ಪರಿಣಾಮ

ಈ ಬಗ್ಗೆ ಅವರು ಹೇಳಿದರು

"ನಾವು ಗೃಹವಾಸ ತ್ಯಜಿಸಿ ದೀಕ್ಷೆ ಸ್ವೀಕರಿಸಿ ಸುಮಾರು ೪೦ ವರ್ಷಗಳಾಗಿ ಹೋದವು. ನೀವು ನಮ್ಮಲ್ಲಿ ಯಾವ ಅತಿಶಯ ಕಂಡು ಪ್ರಶಂಸಿಸುತ್ತಿದ್ದೀರಿ. ನಾವು ಕೇವಲಿಯೋ ಋದ್ಧಾಧರಿಯೋ ಇನ್ನಾವುದೇ ಪ್ರಭವಶಾಲಿ ಮುನಿಯೋ ಆಗಿಲ್ಲ. ಎರಡೂವರೆ ದ್ವೀಪದಲ್ಲಿರುವ ಸಮಸ್ತ ಸಾಧುಗಳಲ್ಲಿ ನಮ್ಮದು ಕೊನೆಯ ಅಂಕ. ನಮ್ಮ ಜಯಂತಿಯಿಂದ ಲಾಭವೇನು ?"

ದಯಾಧರ್ಮ

ಮತ್ತೆ ಹಿಳಿದರು

ಧರ್ಮದ ರಕ್ಷಣೆಯನ್ನು ನೀವು ಮಾಡಿದರೆ ಅದು ನಿಯಮವಾಗಿ ನಿಮ್ಮ ರಕ್ಷಣೆ ಮಾಡುತ್ತದೆ. ಧರ್ಮದ ಮೂಲ ದಯೆ. ಈ ಧರ್ಮದಿಂದ ಕೇವಲ ಮೋಕ್ಷವಷ್ಟೆ ಅಲ್ಲ; ಅದಕ್ಕೆ ಮುನ್ನ ಅರ್ಥ ಕಾಮಗಳೂ ಸಿಗುತ್ತವೆ. ಆದರೆ ಜನ ಮೋಕ್ಷವನ್ನು ಬಿಟ್ಟು ಅರ್ಥ ಕಾಮಗಳನ್ನೇ ಹಿಡಿದುಕೊಳ್ಳುತ್ತಾರೆ. ಇಂದಿನ ಕಾಲದಲ್ಲಿ ಜನಗಳಲ್ಲಿ ಬಹಳ ಗಡಿ ಬಿಡಿ ಇದೆ. ಅಶಾಂತಿ ಇದೆ. ದನಧಾನ್ಯಗಳ ಕಷ್ಟ ಬಹಳವಿದೆ. ಸಂಕಟಗಳಿಗೆ ಸೀಮೆಯೇ ಇಲ್ಲ. ಇದಕ್ಕೆ ಕಾರಣಗಳೇನು ? ಒಂದು ವೇಳೆ ಜನಗಳು ದಯಾಧರ್ಮದ ರಕ್ಷಣೆ ಮಾಡಿದರೆ ಆ ಧರ್ಮ ಜನಗಳನ್ನು ನಾನಾ ಸಂಕಟಗಳಿಂದ ಪಾರು ಮಾಡಬಲ್ಲದು. ಅಹಿಂಸಾ ಧರ್ಮದಲ್ಲಿ ಶ್ರದ್ಧೆ ಇಟ್ಟು ಗಾಂಧಿ ಲೋಕದಲ್ಲಿ ಸಫಲತೆ ಪಡೆದರು"

ಜಿನವಾಣಿ ದೀಪದ ಶಿಖೆಯಂತೆ

"ಜಿನವಾಣಿಯಲ್ಲಿ ಶ್ರದ್ಧೆ ಇಡಿ. ಅದು ದೀಪದ ಶಿಖೆ ಇದ್ದಂತೆ. ಮೋಹಾಂಧಕಾರದ ಕಾಳರಾತ್ರಿಯಲ್ಲಿ ಜಿನವಾಣಿ ದೀಪವನ್ನು ಜೊತೆಯಲ್ಲಿ ಇಟ್ಟುಕೊಳ್ಳಲು ಎಂದೂ ಮರೆಯಬೇಡಿ. ಜಿನನಾಮ ಸ್ಮರಿಸುತ್ತಾ ಶ್ವಾನವೂ ಸ್ವರ್ಗಕ್ಕೇರಿತು. ಕೇವಲಿ ಭಗವಾನರು ಸೂರ್ಯ ಸಮಾನ. ಅವರ ವಾಣಿ ದೀಪದ ಸಮಾನ. ಆ ವಾಣಿಯನ್ನು ಸಾಕ್ಷಾತ್ ಜಿನೇಂದ್ರರ ಸಮಾನ ಆದರ ಮಾಡಬೇಕು. ಜಿನವಾಣಿಯಲ್ಲಿ ಅಪಾರ ಶಕ್ತಿ

ಇದೆ. ಅದರಲ್ಲಿ ದೃಢ ವಿಶ್ವಾಸವಿಲ್ಲದಿರುವುದೆ ಅಸಫಲತೆಗೆ ಕಾರಣ"

ಪಂಚಮ ಕಾಲ ಬಾಲ್ಯ ಕಾ॥

ಅವರು ತಮ್ಮ ಚಿಂತನೆಯನ್ನು ಮತ್ತೆ ಮುಂದುವರೆಸಿದರು "ಈಗಿನ್ನೂ ಪಂಚಮಕಾಲದ ಬಾಲ್ಯಕಾಲ. ಆದ್ದರಿಂದ ಜಿನಧರ್ಮದ ಲೋಪ ಉಂಟಾಗುವುದಿಲ್ಲ. ಭಗವಂತನ ವಾಣಿ ಔಷಧಿಗೆ ಸಮಾನವಾಗಿದೆ. ಪಾಪ ತ್ಯಾಗ ಆ ಔಷಧಿಗೆ ಪತ್ಯವಿದ್ದಂತೆ ! ಜನಗಳು ಧರ್ಮವನ್ನೇನೋ ತಿಳಿಯಬಲ್ಲರು. ಆದರೆ ಯಾರೂ ಅದರಲ್ಲಿ ಶ್ರದ್ಧೆ ಇಡುವುದಿಲ್ಲ. ಹಿಂಸೆಯೇ ಮಹಾ ಪಾಪ. ಅಹಿಂಸೆಯೇ ಧರ್ಮದ ಪ್ರಾಣ ಮತ್ತು ಸರ್ವಸ್ವ. ರಾಜ್ಯಾಂಗದ ಶಾಸನವೂ ಈ ಧರ್ಮದ ಅಸ್ತಿತ್ವ ಮರೆಯುವಂತಿಲ್ಲ. ಅಹಿಂಸಾ ಧರ್ಮದಿಂದಲೇ ಲೋಕದಲ್ಲಿ ಸಫಲತೆ ಉಂಟಾಗುತ್ತದೆ."

ಅಹಿಂಸಾ ಧರ್ಮದ ಪ್ರಧಾನತೆ

"ಶ್ರಾವಕರ ಅಷ್ಟಮೂಲಗುಣಗಳಲ್ಲಿ ಅಹಿಂಸಾ ದೃಷ್ಟಿ ಇದೆ. ಮುನಿಗಳ ಮೂಲ ಮತ್ತು ಉತ್ತರ ಗುಣಗಳಲ್ಲೂ ಅಹಿಂಸೆಯ ದೃಷ್ಟಿ ಇದೆ. ಜೀವ ಮತ್ತು ಪುದ್ಗಲಗಳು ಪೂರ್ಣವಾಗಿ ಭಿನ್ನ ಭಿನ್ನವಾಗಿವೆ. ಈ ತತ್ವದಲ್ಲಿ ಶ್ರದ್ಧೆ ಇಡಿ. ತತ್ವಾರ್ಥ ಶ್ರದ್ಧೆಯು ಸಮ್ಯಕ್ತದ ಬಾಹ್ಯ ಚಿನ್ಹೆ. ಪ್ರಶಮ ಸಂವೇಗ ನಿರ್ವೇಗ, ಅನುಕಂಪ ಮತ್ತು ಅಸ್ತಿಕ್ಯ ಗುಣಗಳೂ ಬಾಹ್ಯ ಚಿನ್ಹೆಗಳು. ಒಂದು ವೇಳೆ ನಿನಗೆ ನಿನ್ನ ಕಲ್ಯಾಣದಲ್ಲಿ ಆಸಕ್ತಿ ಇದ್ದರೆ ಜಿನವಾಣಿ ಹಾಗೂ ನಿಸ್ನಾತ್ಮನಲ್ಲಿ ಶ್ರದ್ಧೆ ಇಡು."

ಬದುಕು ನಶ್ವರ

ಅವರು ತಮ್ಮ ಉಪದೇಶದ ಕೊನೆಯಲ್ಲಿ ಬಹಳ ಸ್ವಾರಸ್ಯಕರ ಮಾತು ಹೇಳಿದರು.

"ಜಗತ್ತಿನ ಎಲ್ಲಾ ಪದಾರ್ಥಗಳೂ ನಾಶಶೀಲವಾಗಿವೆ. ಈಗ ರಾಮನಿಲ್ಲ. ಕೃಷ್ಣನಿಲ್ಲ. ಭರತನೂ ಇಲ್ಲ. ಅದೇ ರೀತಿ ಬೇರೆಯವರೂ (ಮುಂದೆ) ಇರುವುದಿಲ್ಲ. ಈ ಶರೀರ ಬಿಟ್ಟು ಅನ್ಯ ಶರೀರ ಧಾರಣೆ ಮಾಡಬೇಕಾಗುತ್ತದೆ. ಆದ್ದರಿಂದ ಮುಂದಿನ ಗೃಹದ ಬಗ್ಗೆ ಈಗಲೇ ನೀವೇಕೆ ಯೋಚಿಸುತ್ತಿಲ್ಲ. ನಾವು ಹೇಳುವುದಿಷ್ಟೆ. ಅಹಿಂಸಾ

ಮಾರ್ಗದಲ್ಲಿ ನಡೆಯಿರಿ. ಆದರಿಂದ ನಿಮ್ಮ ಕಲ್ಯಾಣವಾದೀತು''

ಲೋಣಂದಾದಲ್ಲಿ ಚಾತುರ್ಮಾಸವಿತ್ತು ನಾನು ನನ್ನ ತಮ್ಮನೊಡನೆ ಅವರ ಸೇವೆಗಾಗಿ ಹೋದೆ. ವಿಚಾರ ಅವರ ಜೇಷ್ಠ ಬಂಧು ವರ್ಧಮಾನ ಸಾಗರರತ್ತ ತಿರುಗಿತು. ವರ್ಧಮಾನ ಸಾಗರರು ಎಲ್ಲಿ ಚಾತುರ್ಮಾಸ ಮಾಡುತ್ತಿದ್ದಾರೆಂದು ಕೇಳಿದೆ. ನನಗೆ ಗೊತ್ತಿಲ್ಲವೆಂದರು. ಅವರು ಕೊಲ್ಹಾಪುರದ ಯಾವುದೋ ಗ್ರಾಮದಲ್ಲಿದ್ದಾರೆಂದು ಮತ್ತಾರೋ ಹೇಳಿದರು. ಆಗ ಅವರ ಮುಖದಲ್ಲಿ ಯಾವುದೋ ಅಲೌಕಿಕ ತತ್ವದ ತರ್ಕ ಮೂಡುತ್ತಿದ್ದಂತೆ ಕಂಡಿತು. "ಮುನಿನಾಂ ಅಲೌಕಿಕ ವೃತ್ತಿಃ'' ಎಂದು ಶಾಸ್ತ್ರದಲ್ಲಿ ವರ್ಣಿಸಿದೆ. ಆ ಮಾತು ಶಾಂತಿಸಾಗರರನ್ನು ನೋಡಿಯೇ ಹೇಳಿರಬೇಕೆನ್ನಿಸಿತು. ಜಗತ್ತಿನ ನಾನಾ ಜಂಜಾಟದ ವಿಚಾರ ತಿಳಿದುಕೊಳ್ಳುವ ಭಾವ ಅವರಲ್ಲಿ ಇರಲೇ ಇಲ್ಲ. ಆದರಿಂದ ಆತ್ಮನಿಗೆ ಏನೂ ಪ್ರಯೋಜನವಿಲ್ಲ. ಪರಿಗ್ರಹಗಳನ್ನು ತ್ಯಾಗ ಮಾಡಿದ ಅವರು ಪರಿಗ್ರಹಗಳ ವಿಚಾರವನ್ನು ಮಾತಾಡುತ್ತಿರಲಿಲ್ಲ. ಆತ್ಮ ವೈಭವವನ್ನೂ ನೋಡುವ ಹಾಗೂ ಸ್ವಾನುಭೂತಿಯ ರಸಗಂಗೆಯಲ್ಲಿ ಮುಳಿಗೇಳುವ ರಸಋಷಿಗೆ ಬಾಹ್ಯ ವಿಚಾರಗಳು ನಿಸ್ಸಾರವಾಗಿ ತೋರುತ್ತವೆ.

ಅವರು ಜಗತ್ತಿನ ಜಂಜಾಟದಿಂದ ದೂರ ಬಹುದೂರವಿದ್ದರು. ಶರೀರವಷ್ಟೇ ದಿಗಂಬರವಾಗಿರಲಿಲ್ಲ, ಮನಸ್ಸೂ ಕೂಡಾ ! ಕೇವಲ ಬಾಹ್ಯ ನಗ್ನತೆ ಒಂದು ವೇಷವಷ್ಟೆ. ಅವರೇ ಹೀಗೆ ಹೇಳಿದ್ದರು "ಕೇವಲ ನಗ್ನತೆಗೆ ಯಾವ ಮಹತ್ವವಿದೆ ? ಕೋತಿಯೂ ನಗ್ನವಾಗಿರುತ್ತದೆ. ಪಶುಗಳೂ ನಗ್ನವಾಗಿರುತ್ತವೆ. ಆದರೆ ಮನುಷ್ಯ ನಗ್ನತೆಯೊಡನೆ ವಿಶೇಷ ಗುಣ ಮಂಡಿತನಾಗಿರುತ್ತಾನೆ. ಆದ್ದರಿಂದ ಜಗತ್ಪೂಜ್ಯನಾಗುತ್ತಾನೆ.''

ಸಕಲ ಸುಖದಾಯಿನಿ

ಜೈನ ಧರ್ಮದ ಬಗ್ಗೆ ಕೆಲವು ಅಭಿಪ್ರಾಯ ಹೇಳಿದರು.

"ಈ ಧರ್ಮ ಅತ್ಯಂತ ನಿರುಪದ್ರವಿ. ಆದರಲ್ಲಿ ಒಂದು ಇಂದ್ರಿಯದಿಂದ ಹಿಡಿದು ಪಚೇಂದ್ರಿಯ ಜೀವದವರೆಗೆ ಸರ್ವ ಸಮತೆ ಮತ್ತು ದಯಾ ಭಾವವಿದೆ. ಅನ್ಯರಿಗೆ ಕಷ್ಟಕೊಡದಿರುವುದೇ ಈ ಧರ್ಮದ ಲಕ್ಷಣ. ಧರ್ಮದ ಪಾಲನೆ ಅತ್ಯಂತ ಕಷ್ಟವೆಂದು ಜನಗಳು ಹೇಳುತ್ತಾ, ಇದು ಶುದ್ಧ ತಪ್ಪು. ಕಷ್ಟವೆಂದು ಹೇಳಿ ಧರ್ಮವನ್ನು ಪೂರ್ಣ ಕೈಬಿಡಬೇಕಾಗಿಲ್ಲ. ಪೂರ್ಣ ರೂಪದಲ್ಲಿ ಆಗದಿದ್ದರೆ ಶಕ್ತಿ ಇದ್ದಷ್ಟು ಆಚರಿಸಬಹುದು.

ಸ್ವಚ್ಛಂದ ವೃತ್ತಿ ಶ್ರೇಯಸ್ಕರವಲ್ಲ. ಶಕ್ತಿಯನ್ನು ಮರೆಮಾಚದೆ ಶಕ್ತಿ ಇದ್ದಷ್ಟು ಪ್ರತಿಯೊಬ್ಬರೂ ಆಚರಿಸಬೇಕು.''

ಮುನಿಧರ್ಮದ ಪ್ರಸ್ತಾಪ ಮಾಡುತ್ತಾ ಹೀಗೆ ಹೇಳಿದರು.

"ಮುನಿಧರ್ಮ ಮಕ್ಕಳಾಟವಲ್ಲ. ಅದು ಅತ್ಯಂತ ಕಠಿಣವಾದುದು. ಧಾರಣೆ ಮಾಡಿದ ಮುನಿಧರ್ಮ ಪಾಲಿಸುವುದು ಅಸಂಭವವಾಗಿ ತೋರಿದಾಗ ಸಮಾಧಿ ಸ್ವೀಕರಿಸಬೇಕು. ಮುನಿಧರ್ಮದ ಮೂಲ ಲಕ್ಷಣ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ. ಸಂಪೂರ್ಣ ಆಸೆಗಳ ಪರಿತ್ಯಾಗ, ಅದಕ್ಕಾಗಿ ನಿತ್ಯಭಾವನೆಗಳನ್ನು ಸದಾ ಚಿಂತನೆ ಮಾಡುತ್ತಿರಬೇಕು. ದೊಡ್ಡದೊಡ್ಡ ಚಕ್ರವರ್ತಿಗಳೇ ಷಟ್ಖಂಡ ಭೂಮಂಡಲವನ್ನು ಇಲ್ಲಿಯೇ ಬಿಟ್ಟು ಹೋಗಿರುವಾಗ ಸಾಮಾನ್ಯ ಮಾನವನ ಬೆಲೆ ಎಷ್ಟು ? ರಾಜ್ಯ ವಿಸ್ತಾರದಿಂದ ಲಾಭವೆಷ್ಟು.

ಮುನಿಧರ್ಮದ ಉದ್ದೇಶ ಏನೆಂದು ವಿವರಿಸತೊಡಗಿದರು.

"ಕರ್ಮ ನಿರ್ಜರೆಯೇ ಮುನಿಧರ್ಮದ ಧ್ಯೇಯ. ಗೃಹಸ್ಥಾವಸ್ಥೆಯಲ್ಲಿ ಸದಾ ಕರ್ಮ ಬಂಧವಾಗುತ್ತದೆ. ಆದ್ದರಿಂದ ಕರ್ಮ ನಿರ್ಜರೆಗೆ ತ್ಯಾಗ ಜೀವನ ಅತ್ಯಾವಶ್ಯಕವಾಗಿದೆ. ಹೊಟ್ಟೆ ಪಾಡಿಗಾಗಿ ಮುನಿವೇಶ ಹಾಕುತ್ತಾರೆಂದು ಕೆಲವರು ತಿಳಿದುಕೊಂಡಿದ್ದಾರೆ. ಕೇವಲ ವೇಷ ಧಾರಣೆಯಿಂದ ಕರ್ಮ ನಿರ್ಜರೆಯಾಗಬಹುದೇ ? ಕರ್ಮನಿರ್ಜರೆಗೆ ಅಂತರಂಗ ಶುದ್ಧಿ ಇರಬೇಕು.''

"ಪರಿಗ್ರಹಗಳನ್ನು ತ್ಯಾಗ ಮಾಡಿ ದಿಗಂಬರ ವೃತ್ತಿ ಧಾರಣೆ ಮಾಡುವುದು ಈ ಕಾರಣದಿಂದ ಅತ್ಯಾವಶ್ಯ. ಏಕೆಂದರೆ ಪರಿಗ್ರಹದಿಂದ ಆರಂಭವೂ, ಆರಂಭದಿಂದ ಜೀವ ಘಾತವೂ ಆಗುತ್ತದೆ. ಸಂಪೂರ್ಣ ಅಹಿಂಸಾ ಧರ್ಮದ ರಕ್ಷಣೆಯಾಗುವುದಿಲ್ಲ. ಪರಿಗ್ರಹತ್ಯಾಗ ಮಾಡಲೇ ಬೇಕು. ಪರಿಗ್ರಹಗಳ ಮೇಲಿನ ಮಮತ್ವ ತ್ಯಾಗ ದಿಗಂಬರತ್ವದ ಹೊರತು ಆಗದು. ಮಮತ್ವರಹಿತ ದಿಗಂಬರತ್ವ ಇಲ್ಲದೆ ಮೋಕ್ಷ ಪ್ರಾಪ್ತಿಯಾಗದು. ಇದು ನಿಶ್ಚಿತ. ನಗ್ನತೆ ಎನ್ನುವುದು ಬಾಲಕನಂತೆ ನಿರ್ವಿಕಾರವಾಗಿರಬೇಕು.''

ಅಪರಿವರ್ತನೀಯ

ಬದಲಾದ ಪರಿಸ್ಥಿತಿಗೆ ತಕ್ಕಂತೆ ಧರ್ಮವನ್ನು ಸೂಕ್ತವಾಗಿ ಮಾರ್ಪಡಿಸಿ

ಕೊಳ್ಳಬೇಕು ಎನ್ನುವರಿಗೆ ಹೀಗೆ ಹೇಳುತ್ತಾರೆ.

"ಔಷಧಿಯನ್ನು ಬದಲಾಯಿಸುವುದರಿಂದ ಹೇಗೆ ರೋಗ ನಿವಾರಣೆ ಆಗುವುದಿಲ್ಲವೋ ಹಾಗೆ ಜಿನವಾಣಿ ಉಲ್ಲಂಘಿಸುವುದರಿಂದ ಭವರೋಗ ನಿವಾರಣೆ ಆಗುವುದಿಲ್ಲ. ನೇರ ಮಾರ್ಗ ಬಿಟ್ಟು ವಕ್ರಮಾರ್ಗದಲ್ಲಿ ಹೋಗುವವನಿಗೆ ತನ್ನ ಇಚ್ಛಿತ ಸ್ಥಳ ಸಿಗದು. ಅದೇ ರೀತಿ ಮೋಕ್ಷಕ್ಕೆ ಅಹಿಂಸಾ ಧರ್ಮವನ್ನು ಅಂಗೀಕರಿಸಬೇಕು. ಅಹಿಂಸಾ ಜೀವನ ವ್ಯತೀತ ಮಾಡಲು ಮುನಿ ಪದದ ಹೊರತು ಅನ್ಯ ಮಾರ್ಗವೇ ಇಲ್ಲ.

ಜಿನವಾಣಿ ನಮ್ಮ ಪ್ರಾಣ

ಆಚಾರ್ಯ ಶ್ರೀಯವರು ಆಗಾಗ್ಗೆ ಹೇಳುತ್ತಿದ್ದರು.

"ಜಿನವಾಣಿ ನಮ್ಮ ಪ್ರಾಣ" ಎಂದು ಆಗಾಗ ಹೇಳುತ್ತಿದ್ದರು. ಅದರ ಬಗ್ಗೆ ಅವರಿಗೆ ಆದರ ಭಾವವಿತ್ತು, ಮಹಾಶ್ರದ್ಧೆ ತುಂಬಿತ್ತು, ವರ್ಣನಾತೀತ ಅನುರಾಗ ತುಂಬಿತ್ತು. ಧವಲಾದಿಗ್ರಂಥಗಳ ಬಗ್ಗೆ ಹೀಗೆ ಹೇಳತೊಡಗಿದರು. "ಭಗವಂತನ ವಾಣಿಯೇ ಆಗಿರುವುದರಿಂದ ಈ ಗ್ರಂಥಗಳು ನಮ್ಮ ಜೀವನವೇ ಆಗಿವೆ. ಇವುಗಳ ರಕ್ಷಣೆ ಎಂದರೆ ನಮ್ಮ ಪ್ರಾಣಗಳ ರಕ್ಷಣೆ ಎಂದು ತಿಳಿಯಿರಿ. ನಮಗೆ ಜಿನವಾಣಿಯ ರಕ್ಷಣೆಯ ಬಗ್ಗೆ ಎಷ್ಟು ಚಿಂತೆ ಇರುವುದೆಂಬುದನ್ನು ನೀವೇನು ಬಲ್ಲಿರಿ. ಶ್ರುತ ರಕ್ಷಣೆ ಮಾಡಿ ಧರಸೇನ ಸ್ವಾಮಿ ಮಹಾನ್ ಉಪಕಾರ ಮಾಡಿದರು. ಅವರ ಉಪಕಾರವನ್ನು ಹೇಗೆ ಮರೆಯುವುದು ? ಈ ಕಾರಣದಿಂದಲೇ ಪಲ್‌ಟನ್ ಮಂದಿರದಲ್ಲಿ ಅವರ ಮೂರ್ತಿಯನ್ನು ವಿರಾಜಮಾನ ಮಾಡಿಸಿದ್ದೇವೆ" ಇಷ್ಟು ಹೇಳುತ್ತಾ ಮತ್ತೊಮ್ಮೆ ಉತ್ಕಂಠಿತರಾಗಿ ಹೇಳತೊಡಗಿದರು.

"ಎಲೆ ತಮ್ಮಾ! ಈ ಜಿನವಾಣಿ ನಮ್ಮ ಪ್ರಾಣ"

ಧರ್ಮ ಈಗೊಂದು ಗೊಡ್ಡು ನಂಬಿಕೆ. ಕೈಲಾಗದವರ ಕುಂಟು ನೆಪ ಎನ್ನುವರಿಗೆ ಈ ಮಾತು ಹೇಳಿದರು.

"ಈಗಲೂ ಧರ್ಮದಲ್ಲಿ ಅಪಾರ ಶಕ್ತಿ ಇದೆ. ನಿಮ್ಮ ಭಾವದಲ್ಲಿ ಅದನ್ನು ದೃಢತೆಯಿಂದ ಧಾರಣೆ ಮಾಡುವ ಶಕ್ತಿ ಬೇಕಾಗಿದೆ. ಪರಿಣಾಮದಲ್ಲಿ ಚಂಚಲತೆ ಉಂಟಾದರೆ ಏನೂ ಆಗದೂ. ಭಗವಂತನ ಭಕ್ತಿಯಿಂದ ಭಕ್ತನೂ

ಭಗವಂತನಾಗುತ್ತಾನೆ."

ದುರ್ಮಾರ್ಗಿಗಳ ಬಗ್ಗೆ ಈ ರೀತಿ ಸ್ಪಷ್ಟವಾದ ಮಾತುಗಳನ್ನು ಹೇಳಿದರು. "ಮರ್ಯಾದೆ ಆಚೆ ಅನ್ಯಾಯ ಪೂರ್ವಕ ಪ್ರವೃತ್ತಿ ಇಟ್ಟುಕೊಳ್ಳಬಾರದು. ಹಾಗೊಮ್ಮೆ ಇಟ್ಟುಕೊಂಡರೆ ತಮ್ಮ ದುಷ್ಕರ್ಮದ ಫಲ ಅನುಭವಿಸಲೇ ಬೇಕು. ಅನಾಚಾರಿಯ ಪತನ ನಿಶ್ಚಿತ" ತಮ್ಮ ಬಗ್ಗೆ ಹೀಗೆ ಹೇಳಿದರು. ನಮಗೆ ನಮ್ಮ ಆತ್ಮನ ಹೊರತು ಪರಪದಾರ್ಥಗಳ ಚಿಂತನೆ ಇಲ್ಲ. ಊರು ಸುಟ್ಟರೆ ಹನುಮಪ್ಪನದೇನು ಹೋಗುತ್ತದೆ. ಊರಹೊರಗಿನ ಹನುಮಪ್ಪನ ಹಾಗೆ ಸಂಸಾರದಲ್ಲಿ ಇದ್ದೂ ಇಲ್ಲದಂತೆ ಇದ್ದೇವೆ. ಅದೇ ರೀತಿ ಸಂಸಾರದಲ್ಲಿ ಏನಾದರೇನು ? ಅದರಿಂದ ನಮಗೇನು ಭಯ ? ನಾವು ಯಾರಿಗೂ ಭಯಪಡುವುದಿಲ್ಲ. ಕೇವಲಿ ಜಿನೇಂದ್ರ ವಾಣಿಗಷ್ಟೇ ನಮ್ಮ ಭಯ !

ಧರ್ಮ ಸರಳವಾದುದೇ

ನನ್ನ ತಮ್ಮ ಅಭಿನಂದನ ಕುಮಾರ್ ಒಂದು ಪ್ರಶ್ನೆ ಹಾಕಿದ.

ಶ್ರವಣ ಬೆಳಗೊಳದಿಂದ ಬರುವಾಗ ಒಬ್ಬ ಶ್ವೇತಾಂಬರ ಸಾಧು ಭೇಟಿಯಾದರು. ಈ ಜೈನ ಧರ್ಮ ಬಹಳ ಸರಳವಾದುದು. ಪ್ರತಿಯೊಬ್ಬರೂ ಕಠಿಣತೆ ಇಲ್ಲದೆ ಆಚರಿಸಬಹುದು ಎಂದರು. ಇದಕ್ಕುತ್ತರ ಹೀಗೆ ಹೇಳಿದರು

"ಅರೇ ಈ ಧರ್ಮ ಸರಳವಾದುದಲ್ಲ. ಅದನ್ನು ಪೂರ್ಣರೂಪದಿಂದ ಆಚರಿಸುವುದು ಅತ್ಯಂತ ಕಠಿಣ. ಪೂರಾ ಪಾಲನೆ ಮಾಡಲು ಶಕ್ತಿ ಇಲ್ಲದಿದ್ದರೆ, ಶಕ್ತಿ ಇದ್ದಷ್ಟು ಪಾಲಿಸು. ದೃಢತಾ ಪೂರ್ವಕಪಾಲಿಸಿದರೆ ನಿನ್ನ ಕಲ್ಯಾಣವಾಗುತ್ತದೆ. ಎಷ್ಟೋ ಜೀವಿಗಳು ಅಲ್ಪ ಪ್ರಮಾಣದಲ್ಲೇ ಸ್ವೀಕರಿಸಿ ದೃಢತೆಯಿಂದ ಆಚರಿಸಿ ಆತ್ಮ ಕಲ್ಯಾಣ ಮಾಡಿಕೊಂಡಿವೆ ಈ ದೃಷ್ಟಿಯಿಂದ ಸರಳವೂ ಹೌದು"

ಶಕ್ತಿ ಇದ್ದಷ್ಟು ಆಚರಣೆ ಮಾಡಿ ಎಂದು ಆಚಾರ್ಯರು ಹೇಳಿದ್ದಾರೆ. ಈ ಕಾರಣದಿಂದಲೇ ಗೃಹಸ್ಥ ಧರ್ಮ, ಮುನಿಧರ್ಮ ಎಂದು ಎರಡು ವಿಭಾಗ ಮಾಡಿರುವುದು. ಶಕ್ತಿ ಇಲ್ಲದವರಿಗೆ ಗೃಹಸ್ಥ ಧರ್ಮ ಹೇಳಿದರು. ಶಕ್ತಿ ಇದ್ದವರಿಗೆ ಮುನಿಧರ್ಮ ಹೇಳಿದರು. ಗೃಹಸ್ಥ ಧರ್ಮವನ್ನೂ ೧೧ ವಿಭಾಗ ಮಾಡಿ ಹೇಳಿದರು. ಆ ಹನ್ನೊಂದು ವಿಭಾಗಗಳನ್ನೂ ಒಟ್ಟಿಗೆ ಪಾಲಿಸಬೇಕೆಂದೇನೂ ಇಲ್ಲ. ಶಕ್ತಿ ಇದ್ದಷ್ಟು ಒಂದೊಂದಾಗಿ ಪಾಲಿಸುತ್ತಾ ಹೋಗಬಹುದು. ಈ ರೀತಿ ಪಾಲಿಸುವುದರಿಂದ ಸರಳವೂ ಆಗುತ್ತದೆ. ಶಕ್ತಿ ಇದ್ದವರು ಮುನಿಧರ್ಮ ಸ್ವೀಕರಿಸಿ ಬೇಗ ಕರ್ಮಕ್ಷಯ

ಮಾಡಿಕೊಳ್ಳುತ್ತಾರೆ. ಅದು ಕಠಿಣ ಹಾಗೂ ಶೀಘ್ರ ಮಾರ್ಗ. ಗೃಹಸ್ಥ ಧರ್ಮ ಸರಳ ಹಾಗೂ ನಿಧಾನ ಮಾರ್ಗ.

ಅವರು ತಮ್ಮ ಅನುಭವ ಹೇಳಿದರು.

"ನಾವು ಕ್ಷುಲಕ ಅವಸ್ಥೆಯಲ್ಲೇ ಕೇಶಲೋಚನ ಮಾಡಿಕೊಳ್ಳುತ್ತಿದ್ದೆವು. ಅದಕ್ಕೆ ಮೊದಲು ಮಾಡಿಕೊಳ್ಳಬಾರದು."

ದೃಢ ವಿಶ್ವಾಸ ಮತ್ತು ಶ್ರದ್ಧೆ ಕಠಿಣವಾಗಿ ಕಂಡದ್ದನ್ನು ಸುಲಭವನ್ನಾಗಿ ಮಾಡುತ್ತದೆ. ತ್ಯಾಗಿಗಳು ಧರ್ಮಾಚರಣೆ ಸುಲಭವೆಂದು ಹೇಳುವುದು ತಮ್ಮ ಸಾಮರ್ಥ್ಯದ ಮಟ್ಟದಿಂದ ಮಾತ್ರ. ನಮಗೂ ಸುಲಭ ಅನ್ನಿಸಬೇಕಾದರೆ ಅವರ ಮಟ್ಟಕ್ಕೆ ಏರಬೇಕಾಗುತ್ತದೆ. ನಮ್ಮ ನಮ್ಮ ಸಾಮರ್ಥ್ಯಕ್ಕೆ ತಕ್ಕಷ್ಟು ಮಾತ್ರ ನಮಗೆ ಸುಲಭ. ಸುಲಭ ಸಾಧ್ಯವಾದುದದನ್ನು ಆಚರಿಸುತ್ತಾ ಮೇಲೇರಿ ಕಷ್ಟ ಸಾಧ್ಯವಾದುದನ್ನು ಸಲಭ ಸಾಧ್ಯ ಮಾಡಿಕೊಳ್ಳುವ ಮಾರ್ಗವೇ ಜೈನಧರ್ಮ.

ಅನ್ಯ ತಪಸ್ವಿ ಮುನಿಗಳ ಬಗ್ಗೆ

"ಸಿದ್ಧಪ್ಪ ಸ್ವಾಮಿ ಎನ್ನುವ ನಿಗ್ರಂಥ ಸ್ವಾಮಿಗಳೊಬ್ಬರಿದ್ದರು. ಅವರು ಸದಾ ಣಮೋ ಅರಹಂತಾಣಂ, ಣಮೋಸಿದಾಣಂ" ಎಂದು ಜಪ ಮಾಡತ್ತಿದ್ದರು. ದಕ್ಷಿಣದ ಗುಡಿಬಂಡೆ ಎನ್ನುವ ಗ್ರಾಮದಲ್ಲೊಬ್ಬ ಮುನಿಗಳಿದ್ದರು. ಅವರ ಹೆಸರು ಚಂದ್ರಸಾಗರರು. ಅವರು ಸಮೀಪದ ಗುಹೆಯಲ್ಲಿತಪಸಸು ಮಾಡುತ್ತಿದ್ದರು. ಅದರಲ್ಲಿ ನಿಲ್ಲಲು ಕೂತುಕೊಳ್ಳಲು ಮಾತ್ರ ಸ್ಥಳವಿತ್ತು. ಅರವು ೭ವರ್ಷ ನಿದ್ರಾ ವಿಜಯ ತಪಸ್ಸು ಮಾಡುತ್ತಿದ್ದರು. ಅವರು ಜಮೀನು ಮೇಲೆ ಮಲಗುತ್ತಲೇ ಇರಲಿಲ್. ಅವರ ಆಹಾರವೂ ಅತ್ಯಲ್ಪ. ಅದೂ ಎಂಟು ದಿನಕ್ಕೊಮ್ಮೆ."

ನಾವೂ ಮೊದಲು ಅಷ್ಟಮಿ ಮತ್ತು ಚತುರ್ದಶಿಗಳಲ್ಲಿ ನಿದ್ರೆ ಮಾಡುತ್ತಿರಲಿಲ್ಲ.

ಬಾಹುಬಲಿ ಬಗ್ಗೆ ಅವರ ದೃಷ್ಟಿ

ಅವರ ಬಾಹ್ಯದೃಷ್ಟಿ ವಿಲಕ್ಷಣವಾಗಿತ್ತು. ಜಗತ್ತನ್ನು ಸಾಕ್ಷೀಭೂತವಾಗಿ ನೋಡುತ್ತಿದ್ದರು. ತನ್ನೆದುರಿರುವ ಸರ್ವ ಪದಾರ್ಥಗಳನ್ನು ಯಥಾವತ್ತಾಗಿ ಪ್ರತಿಫಲಿಸಿಯೂ ನಿರ್ವಿಕಾರವಾಗಿ ಇರುವ ಕನ್ನಡಿಯಂತಿತ್ತು ಅವರ

ಮನೋವ್ಯಾಪಾರ. ಅವರೇನೋ ಸೌಂದರ್ಯೋಪಾಸಕರಾಗಿದ್ದರು. ಆದರೆ ಅದು ಆತ್ಮಿಕ ಸೌಂದರ್ಯವಾಗಿತ್ತು. ಭೌತಿಕ ಸೌಂದರ್ಯವಾಗಿರಲಿಲ್ಲ. ಆತ್ಮನ ಅವಿನಶ್ವರ ಅನಂತ ಸೌಂದರ್ಯದಲ್ಲಿ ಮುಳುಗಿದವರಿಗೆ ಭೌತಿಕ ಸೌಂದರ್ಯ ರಾಹುಗ್ರಸ್ಥ ಚಂದ್ರನಂತೆ ಕಳಾಹೀನವಾಗಿ ಕಾಣುತ್ತದೆ. ರಸ ಉದುರಿದ ಹುಲ್ಲು ಕಡ್ಡಿಯಂತೆ ನಿಸ್ತೇಜವಾಗಿ ಕಾಣುತ್ತದೆ. ಅವರು ಬಾಹ್ಯದಲ್ಲಿ ಯಾವುದನ್ನೇ ನೋಡಲಿ, ಏನನ್ನೇ ಕೇಳಲಿ ಸಮಚಿತ್ತರಾಗಿರುತ್ತಿದ್ದರು. ಸ್ಥಿತಪ್ರಜ್ಞರಾಗಿರುತ್ತಿದ್ದರು. ಅವರ ಮನಸ್ಸು ರಾಗ-ದ್ವೇಷಗಳ ಸೆಳೆತಕ್ಕೆ ಸಿಕ್ಕಿ ಉತ್ಕರ್ಷ ಅಪಕರ್ಷಗಳ ತೆರೆ ಮಾಲೆಗಳನ್ನು ಹೊಂದದೆ ಶಾಂತ ಸರೋವರದಂತಿತ್ತು. ಹೇಳುವುದನ್ನು ಚೆನ್ನಾಗಿ ಪರ್ಯಾಲೋಚಿಸಿ ಹೇಳುತ್ತಿದ್ದರು. ಸತ್ಯವಾದುದನ್ನೇ ಹೇಳುತ್ತಿದ್ದರು. ಒಮ್ಮೆ ನಾನು ಅವರನ್ನು ಕೇಳಿದೆ.

"ಮಹರಾಜ್! ನೀವು ಗೋಮಟೇಶ್ವರ ಸ್ವಾಮಿಯ ಮೂರ್ತಿ ನೋಡಿದ್ದೀರಿ. ಆಗ ನಿಮ್ಮ ಅಂತರಂಗದಲ್ಲಿ ಉತ್ಪನ್ನವಾಗಿರುವ ಉಜ್ವಲ ಭಾವನೆಗಳನ್ನು ಕೇಳುವ ಪ್ರಭಲ ಇಚ್ಛೆ ನನಗಾಗಿದೆ."

ಈ ಪ್ರಶ್ನೆ ಹಾಕಿದ ಮೇಲೆ ಎಲ್ಲರೂ ಉತ್ತೇಜಿತರಾಗಿ ಹೋಗಿದ್ದರು. ಆ ಮಹಾ ವಿಭೂತಿ ಪುರುಷ ಆ ಮಹಾಕಾಯ ಮೂರ್ತಿಯ ಬಗ್ಗೆ ಏನು ಹೇಳುವರೋ ಎನ್ನುವ ಕುತೂಹಲ ಕೆರಳಿ ಕೇಳಲು ಕೂತರು. ಅವರ ಬಾಯಲ್ಲಿ ಆ ಉತ್ತುಂಗನಭಶ್ಚುಂಬಿ ಮೂರ್ತಿಯ ಬಗ್ಗೆ ಕುತೂಹಲಕಾರಿ ರಸಭಾವ ಉಕ್ಕಬಹುದೆಂದು ಕೊಂಡರು! ಇನ್ನು ಕೆಲವುರ ಬಕ್ತಿಯ ಬಾರದಿಂದ ಅವರ ಮಾತುಗಳು ಕಟ್ಟಿಹೋಗಬಹುದು ಎಂದು ಭಾವಿಸಿದರು. ಈ ರೀತಿ ಅಲ್ಲಿ ಕೂತಿದ್ದವರು ನಾನಾ ಭಾವನೆಗಳ ಗುಂಗಿನಲ್ಲಿ ಇದ್ದಾಗಲೇ ಅವರು ಹೇಳಲಾರಂಭಿಸಿದರು.

"ಬಾಹುಬಲಿಸ್ವಾಮಿಯ ಬಿಂಬ ಬಹಳ ದೊಡ್ಡದೇನೋ ಇದೆ ನಿಜ. ಆದರೆ ಅದು ನಮಗೆ ಅನ್ಯ ಬಿಂಬಗಳ ಸಮಾನವಾಗಿಯೇ ಕಂಡಿತು ನಾವಾದರೋ ಜಿನೇಂದ್ರನ ಗುಣಗಳನ್ನು ಮಾತ್ರ ಚಿಂತಿಸುತ್ತೇವೆ. ಆದ್ದರಿಂದ ದೊಡ್ಡ ಚಿಕ್ಕ ಬಿಬಂಗಳಲ್ಲಿ ಯಾವ ಅಂತರವಿದೆ?"

ಈ ಉತ್ತರ ಕೇಳಿ ಎಲ್ಲರೂ ತಬ್ಬಿಬ್ಬಾಗಿ ಹೋದರು. ಅವರ ಬಾಯಿಂದ ಆ ಬೃಹದಾಕಾರದ ಮೂರ್ತಿಯ ಬಗ್ಗೆ ಮಹಾ ಉದ್ಗಾರವೇ ಹೊರಡಬಹುದೆಂದು ಅಂದುಕೊಂಡಿದ್ದರು. ಬಾಹುಬಲಿಯ ದರ್ಶನದಿಂದ ಪುಲಕಿತರಾಗಿ ಭಾವಾವೇಶದಿಂದ ಅಪೂರ್ವ ವಿಚಾರ ತಿಳಿಸಬಹುದು ಎಂದುಕೊಂಡಿದ್ದರು. ಅದೆಲ್ಲವೂ ಹುಸಿಯಾಗಿತ್ತು. ಬಾಹುಬಲಿಯ ಆ ಉತ್ತುಂಗ ನಭಶ್ಚುಂಬಿ ಜಿನಬಿಂಬವನ್ನು ಅನ್ಯ ಚಿಕ್ಕ ಬಿಂಬಗಳ

ಸಮಾನವಾಗಿಯೇ ಕಂಡು ಜಿನಗುಣ ಸಂಪತ್ತಿನಲ್ಲಿ ಮಾತ್ರ ಮೈ ಮರೆವ ಹಂಸಕಲೋಪಾಸಕ ಪರಮಹಂಸ ಮುನಿಯ ಬಾಯಿಂದ ಹೊರಟ ಶರಧಿ ಗಂಭೀರ ವಾಣಿಯಿಂದ ಎಲ್ಲಾ ಕುತೂಹಲ, ಕಾತುರ, ಆಶ್ಚರ್ಯದಲ್ಲಿ ಪರ್ಯಾವಾಸನವಾಗಿ ಹೋದವು.

ರಾಗಿಗಳೇನು ಬಲ್ಲರು ವೀತರಾಗಿಗಳ ಆಳವನ್ನು ?

ಇದಾದನಂತರ ಲೋಣಂದಾ ಪರ್ಯೂಷಣ ಪರ್ವದಲ್ಲಿ ಆಚಾರ್ಯ ಶ್ರೀಯವರ ಸನ್ನಿಧಿಗೆ ತಲ್ಪಿದೆ. ಅಲ್ಲಿ ನಿತ್ಯ ಶಾಸ್ತ್ರ ಓದುತ್ತಿದ್ದೆ, ಅದರ ನಡುನಡುವೆಯೇ ಮಾರ್ಮಿಕ ಪ್ರಶ್ನೆಗಳಿಗೆ ಅನೇಕ ಸುಂದರ ಸಮಾಧಾನ ಹೇಳುತ್ತಾ ಶ್ರೋತೃಗಳನ್ನು ಕೃತಾರ್ಥಗೊಳಿಸುತ್ತಿದ್ದರು. ನಡುನಡುವೆ ಅವರ ಅನೇಕ ವ್ಯಕ್ತಿಗತ ಅನುಭವಗಳನ್ನು ಹೇಳುತ್ತಿದ್ದರು.

ಒಮ್ಮೆ ಕಷಾಯದ ಬಗ್ಗೆ ಮಾತು ಹೊರಳಿತು. ಅವರು ಹೇಳಲಾರಭಿಸಿದರು.

"ಕಷಾಯಗಳನ್ನು ದೂರ ಮಾಡಿ ಮಾತಾಡುವುದಾದರೆ ಸತ್ಯವಾದುದನ್ನೇ ಹೇಳುವಿರಿ. ಕ್ರೋಧಾದಿಕಷಾಯಗಳನ್ನು ತ್ಯಜಿಸಿದಾಗಲೇ ನಿಮಗೆ ಸತ್ಯದ ದರ್ಶನ ವಾದೀತು" ಅವರು ಹೇಳಿದ ಮಾತು ಅಕ್ಷರಶಃ ಸತ್ಯವಿತ್ತು. ಮಾನವನ ಸಮಸ್ತವಿಕಾರಗಳಿಗೆ ಕಷಾಯಗಳೇ ಕಾರಣ. ಅವುಗಳನ್ನು ತ್ಯಜಿಸಿದಾಗ ಮಾನವ ನೈಜಭಾವದಿಂದ ವ್ಯವಹರಿಸುತ್ತಾನೆ. ಕಷಾಯಗಳು ಒಂದು ರೀತಿಯಲ್ಲಿ ಸುರಾಪಾನವಿದ್ದಂತೆ !

ಒಮ್ಮೆ ಉಪವಾಸದ ಬಗ್ಗೆಯೂ ಒಳ್ಳೆಯ ವಿಚಾರ ಹೇಳಿದರು

"ಎಲ್ಲಿಯವರೆಗೆ ಧರ್ಮಧ್ಯಾನವಿದೆ ಅಲ್ಲಿಯವರೆಗೆ ಉಪವಾಸ ಒಳ್ಳೆಯದು. ಆರ್ತ ರೌದ್ರ ಧ್ಯಾನದಿಂದ ಕೂಡಿದ ಉಪವಾಸ ಅಹಿತಕಾರಿ"

ಜನಗಳಲ್ಲಿ ಅವರಿಗೆ ಮರುಕವಿತ್ತು. ಅವರು ತಮ್ಮ ಮರುಕ ಹೀಗೆ ವ್ಯಕ್ತ ಮಾಡುತ್ತಿದ್ದರು.

ಒಮ್ಮೆ "ನಮಗೆ ಸಂಪನ್ನ ಮತ್ತು ಸುಖೀಜೀವಿಗಳ ಬಗ್ಗೆ ಮರುಕ ಹುಟ್ಟುತ್ತದೆ" ಎಂದರು.

ನನಗೆ ಅರ್ಥವಾಗಲಿಲ್ಲ. ಸುಖಿಯಾಗಿರುವವರ ಬಗ್ಗೆ ಏಕೆ ಮರುಕಬೇಕು

ಅಂದುಕೊಂಡೆ. ದುಃಖಿ ಜೀವಿಗಳ ಬಗ್ಗೆ ಆದರೆ ಒಪ್ಪಬಹುದು. ಅವರಲ್ಲಿ ಮತ್ತೆ ಪ್ರಶ್ನೆ ಹಾಕಿದೆ.

"ಮಹರಾಜ್ ! ಸಂಪನ್ನ ಸುಖೀ ಜೀವಿಗಳ ಬಗ್ಗೆ ಏಕೆ ಮರುಕ ಬರುತ್ತದೆ ನಿಮಗೆ ?"

ಆಗ ಅವರು ಹೇಳಿದರು

ಆ ಜನ ಪುಣ್ಯೋದಯದಿಂದ ಸುಖಿ ಸಂಪನ್ನರಾಗಿದ್ದಾರೆ. ಆದರೆ ಭೋಗೋಪಭೋಗಗಳಲ್ಲಿ ಮುಳುಗಿ ಹೋಗಿ ಪುನರ್ಭವದ ಕಲ್ಯಾಣ ಮರೆತು ಬಿಟ್ಟಿದ್ದಾರೆ".

ಅವರ ಮಾತು ನಿಜವೆಂದು ತೋರುತ್ತದೆ. ಸುಖಿ ಸಂಪನ್ನ ಜೀವಿಗಳು ಭೋಗದಲ್ಲೇ ಒಂದೊಂದು ಕ್ಷಣವನ್ನು ಕಳೆದುಬಿಡುತ್ತವೆ. ಭೋಗ ಲಾಲಸೆಯ ಕಾರಣ ಪಾಪಗಳಿಸಿ ಆ ಜೀವಿಗಳು ದುರ್ಗತಿಗೆ ಹೋಗುತ್ತವೆ. ಆತ್ಮ ಜಾಗೃತಿ ಇಲ್ಲದ ಶ್ರೀಮಂತಿಕೆಯೂ ಭಾರಿ ಅನರ್ಥಕಾರಿ ಆಗುತ್ತದೆ. ಎಲ್ಲರೂ ಶ್ರೀಮಂತಿಕೆ ಮತ್ತು ಭೋಗ ವಿಲಾಸಕ್ಕೆ ಹಾತೊರೆಯುತ್ತಾರೆ. ಶ್ರೀಮಂತರನ್ನು ನೋಡಿ ಕರುಬುತ್ತಾರೆ. ಆತ್ಮ ಹಿತದ ದೃಷ್ಟಿಯಿಂದ ನೋಡಿದಾಗ ಶ್ರೀಮಂತಿಕೆಯೂ ಬಡತನದಷ್ಟೇ ಘಾತಕಾರಿ. ಒಂದು ವ್ಯತ್ಯಾಸವೇನೆಂದರೆ ಶೀಮಂತ ಈ ಭವದಲ್ಲಿ ಯಥೇಚ್ಛ ಭೋಗ ಭೋಗಿಸುತ್ತಾನೆ. ಆದರೆ ಬಡವ ದುಃಖ ಭೋಗಿಸುತ್ತಾನೆ. ಆತ್ಮ ಜಾಗೃತಿ ಇದರ ಕಾರಣ ಇಬ್ಬರೂ ಪಾಪ ಸಂಗ್ರಹಿಸಿ ದುರ್ಗತಿಗೆ ಹೋಗುತ್ತಾರೆ. ಆತ್ಮ ಕಲ್ಯಾಣ ಬಯಸುವ ಜೀವಕ್ಕೆ ಶೀಮಂತಿಕೆ ಹಿತಕಾರಿಯೂ ಅಲ್ಲಬ ಬಡತನ ಅಹಿತಕಾರಿಯೂ ಅಲ್ಲ. ಆತ್ಮ ಕಲ್ಯಾಣಕ್ಕೆ ಬಡತನ ಶ್ರೀಮಂತಿಕೆಗಳ ಹಂಗಿಲ್ಲ. ಆತ್ಮ ಹಿತಕ್ಕೆ ಬೇಕಾಗಿರುವುದು ಆತ್ಮ ಜಾಗೃತಿ ಮಾತ್ರ ಬಡತನ ಆತ್ಮ ಜಾಗೃತಿಯನ್ನೇನೂ ಹಾಳು ಮಾಡಲಾರದು. ಶ್ರೀಮಂತಿಕೆ ಅದನ್ನೇನೂ ವೃದ್ಧಿ ಮಾಡದು. ಆತ್ಮಕಲ್ಯಾಣ ಮಾಡಿಕೊಳ್ಳುವ ಜಾಗತ್ಯಭಾವ ಬರದಿದ್ದರೆ ಶ್ರೀಮಂತನೇನು ಬಡವನೇನು ಎಲ್ಲರ ಬಾಳೂ ಹಾಳೇ ಹಾಳು ! ಸಂಸ್ಕಾರವಿದ್ದ ಜೀವಕ್ಕೆ ಬಡತನದಲ್ಲೂ, ಶ್ರೀಮಂತಿಕೆಯಲ್ಲೂ ವೈರಾಗ್ಯ ಹುಟ್ಟುತ್ತದೆ. ಸಂಸ್ಕಾರವಿಲ್ಲದ ಜೀವ ಏನು ಮಾಡಿದರೂ ಸರಿದಾರಿಗೆ ಬರುವುದಿಲ್ಲ. ಕರಿಶಿಲೆಯಲ್ಲಿ ಮೂರ್ತಿ ಮಾಡಬಹುದು. ಸುಣ್ಣ ಕಲ್ಲಿನಲ್ಲಿ ಮಾಡಲು ಬರುವುದೇ ?

ಅವರು ಮತ್ತೆ ಹೇಳತೊಡಗಿದರು.

"ಎಲ್ಲಿಯವರೆಗೆ ಜೀವ ಸಂಯಮ ಮತ್ತು ತ್ಯಾಗಕ್ಕೆ ಶರಣಾಗುವುದಿಲ್ಲವೋ ಅಲ್ಲಿಯವರೆಗೆ ಅದರ ಭವಿಷ್ಯ ಸುಖದಾಯಕವಾಗದು. ಆದ್ದರಿಂದ ನಾವು ನಮ್ಮ ಭಕ್ತರನ್ನು ಅಸಂಯಮದ ಜ್ವಾಲಾಮುಖಿಯಿಂದ ಹೊರತೆಗೆದು ಸಂಯಮ ಮಾರ್ಗಕ್ಕೆ ಹಚ್ಚುತ್ತಿದ್ದೇವೆ. ನಾವು ನಮ್ಮ ದೊಡ್ಡ ಅಣ್ಣ ದೇವಗೊಂಡ (ವರ್ಧಮಾನಸಾಗರರು)ರನ್ನು ಕುಟುಂಬದ ಜಾಲದಿಂದ ಬಿಡಿಸಿ ದಿಗಂಬರ ಮುನಿ ಮಾಡಿದವು. ಚಿಕ್ಕ ತಮ್ಮ ಕುಮಗೊಂಡನಿಗೆ ಬ್ರಹ್ಮಚರ್ಯ ಮಾತ್ರ ಕೊಟ್ಟಿದ್ದೆವುತ ಮುನಿಯಾಗುವ ಮುನ್ನವೇ ಮರಣ ಹೊದಿದ"

ಮನೆಗೆ ಬೆಂಕಿ ಬಿದ್ದಾಗ ಸಿಕ್ಕಷ್ಟು ವಸ್ತುಗಳನ್ನು ಹೊರ ತೆಗೆಯಲು ಪ್ರಯತ್ನ ಮಾಡುವಂತೆ ಅವರು ಸಿಕ್ಕಷ್ಟು ಜೀವಿಗಳನ್ನು ಸಂಸಾರದ ಬೇಗೆಯಿಂದ ಬಿಡಿಸಿ ಸಂಯಮ ಮಾರ್ಗಕ್ಕೆ ತಂದು ಬಿಡುತ್ತಿದ್ದರು. ಕಾಲ ದೋಷದಿಂದ ಮುಚ್ಚಿ ಹೋಗಿದ್ದ ಮುಕ್ತಿ ಮಾರ್ಗವನ್ನು ಸ್ವಚ್ಛಗೊಳಿಸಿ ಶಕ್ತಿದುಂಬಿದ್ದರು.

ಉಪವಾಸದ ಲಾಭ

ಉಪವಾಸದಿಂದ ಏನು ಲಾಭ ಎನ್ನುವುದನ್ನು ಸ್ವಂತ ಅನುಭವದಿಂದ ಹೇಳಿದರು.

"ಮದೋನ್ಮತ್ತ ಆನೆಯನ್ನು ಹಿಡಿಯಲು ಹೆಣ್ಣಾನೆಯ ಆಕರ್ಷಣೆ ಒಡ್ಡಿ ಖೆಡ್ಡಾದಲ್ಲಿ ಬೀಳಿಸುತ್ತಾರೆ. ಬಹಳ ದಿವಸ ಹಸಿವೆಯಲ್ಲಿಡುತ್ತಾರೆ. ಅದರಿಂದ ಅದರ ಮದ ಅಡಗುತ್ತದೆ. ಅಂಕುಶದಿಂದ ಅಧೀನಕ್ಕೆ ಬರುತ್ತದೆ. ಅದೇ ರೀತಿ ಉಪವಾಸದಿಂದ ಇಂದ್ರಿಯ ಮತ್ತು ಮನಸ್ಸಿನ ಮದ ಅಡಗುತ್ತದೆ. ಪಾಪ ವಾಸನೆಯಿಂದ ದೂರಾಗಿ ಆತ್ಮನ ಆದೇಶಾನುಸಾರ ಕಲ್ಯಾಣ ಮಾರ್ಗದಲ್ಲಿ ನಡೆಯುತ್ತವೆ.

"ಸಂಯಮದ ಲಕ್ಷ್ಯ ಇಂದ್ರಿಯ ಮತ್ತು ಮನಸ್ಸಿನ ಮೇಲೆ ವಿಜಯ ಸಾಧಿಸುವುದು. ಸಂಯಮದ ಧ್ಯೇಯ ಚಿರಸಂಚಿತ ಕರ್ಮಗಳನ್ನು ನಾಶಮಾಡುವುದು. ತಪಸ್ಸು ಕ್ರಮ ಕ್ಷಯಕ್ಕೆ ಕೊಡುವ ಔಷಧಿ"

ಆಗ ನಾನು ಕೇಳಿದೆ

"ಮಹರಾಜ್ ! ಈ ಔಷಧಿ ಬಹಳ ಕಹಿಯಾಗಿದೆಯಲ್ಲ"

ಅವರು : "ಒಳ್ಳೆಯ ಔಷಧಿ ಕಹಿಯಾಗಿಯೇ ಇರುತ್ತದೆ. ರೋಗಿಗೆ ಸಕ್ಕರೆ

ತುಪ್ಪ ಹಾಕಿ ಕೊಡುವರೇನು? ಕಹಿ ಔಷಧಿಯಿಂದಲೇ ರೋಗ ನಿವಾರಣೆ ಆಗಬಲ್ಲದು. ಅದೇ ರೀತಿ ಆತ್ಮನ ರೋಗಕ್ಕೆ ತಪವೇ ತಕ್ಕ ಔಷಧಿ. ಈ ಔಷಧ ಪಾನದಿಂದ ಮಿಥ್ಯಾದೃಷ್ಟಿ ಮುನಿಯೂ ನವಗ್ರೈವೇಯಕದವರೆಗೂ ಹೋಗಬಲ್ಲ."

ಶರೀರದ ಮೇಲೆ ಒಮ್ಮೆಗೇ ಹೆಚ್ಚು ಹೊರೆ ಹಾಕಬಾರದು. ಸ್ವಲ್ಪ ಸ್ವಲ್ಪವೇ ಒತ್ತಡ ಹೆಚ್ಚಿಸುತ್ತಾ ಹೋಗಬೇಕು. ಉಪವಾಸ ಮತ್ತು ತಪವನ್ನು ಸ್ವಲ್ಪ ಸ್ವಲ್ಪವೇ ಹೆಚ್ಚಿಸುತ್ತಾ ಹೋಗಬೇಕು. ಆಗ ಆತ್ಮಶಕ್ತಿ ಬೆಳೆಯುತ್ತಾ ಹೋಗುತ್ತದೆ. ಆತ್ಮನಿಗೆ ಪೀಡೆಯೂ ಆಗುವುದಿಲ್ಲ. ನಾವು ಈ ಮಾತನ್ನು ನಮ್ಮ ಅನುಭವದಿಂದಲೇ ಹೇಳುತ್ತಿದ್ದೇವೆ.

ಅಪೂರ್ವ ಅನುಭವ

ಮೋಹವಿಷ್ಟ ಜೀವಿಗಳಿಗೆ ಒಂದು ಸುಂದರ ಕಿವಿ ಮಾತು ಹೇಳಿದರು.

ನಾವು ನಮ್ಮ ಗ್ರಾಮದ ದೇವಗಂಗಾ ದೂದಗಂಗಾ ನದಿಯಲ್ಲಿ ಈಜುತ್ತಿದ್ದಾಗ ನೀರಿನ ಮಧ್ಯದಲ್ಲಿ ಅಧಿಕ ವೇಗವಿದ್ದುದರಿಂದ ಶಾಂತವಾಗಿ ತೇಲಿ ಹೋಗುತ್ತಿದ್ದೆವು. ನಂತರ ಈಜಿ ದಡ ಸೇರುತ್ತಿದ್ದೆವು. ಅದೇ ರೀತಿ ಕರ್ಮದ ತೀವ್ರೋದಯವಿದ್ದಾಗ ಸ್ವಲ್ಪಕಾಲ ಶಾಂತವಾಗಿದ್ದು, ಮಂದೋದಯವಾದಾಗ ಪುರುಷಾರ್ಥದಿಂದ ಸಂಯಮ ಪಾಲನೆ ಮಾಡಬೇಕು. ಆಗ ಸಂಸಾರದ ಸಕಲ ಸಂಕಟಗಳಿಂದ ಪಾರಾಗಬಹುದು"

ಇದೊಂದು ಅತ್ಯಂತ ಬಹುಮೂಲ್ಯ ಅನುಭವೋಕ್ತಿ.

ಶಾಸ್ತ್ರವೇ ಸಮುದ್ರ ಜೀವವೇ ಮೀನು

ಪ್ರಸಂಗವಶಾತ್ ಶಾಸ್ತ್ರದ ಬಗ್ಗೆ ಸುಂದರ ಹೋಲಿಕೆ ಕೊಟ್ಟರು.

"ಶಾಸ್ತ್ರದಲ್ಲಿ ಅವೆಷ್ಟು ಸುಂದರ ವಿಚಾರಗಳು ವರ್ಣಿಸಿವೆಯೆಂದರೆ ಅದರ ವರ್ಣನೆ ಮಾಡಲು ಸಾಧ್ಯವಿಲ್ಲ. ಶಾಸ್ತ್ರ ಜಲಧಿ ಇದ್ದಂತೆ! ಜೀವವೇ ಮೀನು! ಅದರಲ್ಲಿ ಜೀವ ಎಷ್ಟು ಸಂಚರಿಸಿದರೂ ಸ್ವಲ್ಪವೇ ಇರುತ್ತದೆ.

ರೋಗಿಗೆ ಮಾರ್ಗದರ್ಶನ

"ಯಾರು ಶರೀರದ ರೋಗಕ್ಕೆ ಹೆದರಿ ಸಂಯಮದಿಂದ ದೂರ ಓಡುತ್ತಾರೋ ಅಂತವರು ರೋಗಕ್ಕೆ ಹದೆರದೆ ಸಂಯಮ ಧಾರಣೆ ಮಾಡಬೇಕು"

ತಮ್ಮ ಕಣ್ಣಲ್ಲಿ ಉಂಟಾದ ರೋಗದ ಬಗ್ಗೆ ಹೇಳತೊಡಗಿದರು.

"ತನ್ನ ಅಪೂರ್ವ ಸೌಂದರ್ಯದಿಂದ ದೇವತೆಗಳನ್ನೂ ಚಕಿತಗೊಳಿಸುತ್ತಿದ್ದ ಸನತ್ಕುಮಾರ ಚಕ್ರವರ್ತಿ ಯಾವಾಗ ಮುನಿದೀಕ್ಷೆ ತೆಗೆದುಕೊಂಡನೋ ಆಗ ನಾನಾ ರೋಗಗಳು ಅವನ ಶರೀರವನ್ನ ಜರ್ಝರಿತಗೊಳಿಸಿದವು. ಏಳು ನೂರು ಬಗೆಯ ರೋಗಗಳು ಅವನ ಶರೀರದಲ್ಲಿ ಮನೆ ಮಾಡಿದವು. ಆದಕ್ಕೆ ಹೋಲಿಸಿದರೆ ನಮ್ಮ ಕಣ್ಣಿನ ರೋಗ ಯಾವ ಲೆಕ್ಕದ್ದು ? ರೋಗಕ್ಕೆ ಹೆದರುವುದಾದರೆ ಯಾವ ವ್ರತಪಾಲನೆ ಮಾಡಲು ಸಾಧ್ಯ ? ರೋಗಿಯಾಗಿದ್ದರೂ ವ್ರತಗಳಲ್ಲಿ ಶಿಥಿಲತೆ ತಂದುಕೊಳ್ಳಬಾರದು. ಈ ಮಾತನ್ನು ಮರೆಯಬಾರದು."

"ಸಾಯುವ ಸ್ವಲ್ಪ ಸಮಯಕ್ಕೆ ಪೂರ್ವದಲ್ಲಿ ಒಬ್ಬ ಸಾಧುವಿಗೆ ರೋಗ ಹುಟ್ಟಿತು. ಕೆಲವರು ಸೇರಿ ಆ ಸಾಧುವನ್ನು ಶಿಥಿಲಾಚಾರಿಯನ್ನಾಗಿ ಮಾಡಿದರು. ಎಷ್ಟೋ ಕಾಲ ಸಾಧಿಸಿದ ಸಂಯಮ ನಿಧಿ ನಷ್ಟವಾಗಿ ಹೋಗಿತ್ತು. ಸಂಯಮ ಪಾಲಿಸುವಾಗ ಮೃತ್ಯುವೂ ಅಮೃತ ಕುಂಬವಾಗುತ್ತದೆ. ಸಂಯಮವಿಲ್ಲದಾಗ ವಿಷಕುಂಬವಾಗುತ್ತದೆ.

ಆತ್ಮನ ಯಥಾರ್ಥ ದರ್ಶನ

ಸಾಮಾಯಿಕದ ಬಗ್ಗೆ ಕೆಲವು ಒಳ್ಳೆ ವಿಚಾರ ತಿಳಿಸಿದರು. ಒಂದು ದಿನ ಒಬ್ಬ ವಕೀಲ ಶ್ರೀಯವರ ದರ್ಶನ ಪಡೆದು ಹೇಳತೊಡಗಿದ.

"ಮಹರಾಜ್ ! ನನಗೀಗ ಆತ್ಮ ಕಾಣಿಸುತ್ತಿದ್ದಾನೆ. ಮತ್ತಿನ್ನೇನು ಮಾಡುವುದಿದೆ"

ಈ ಬೋಳೆ ಸ್ವಭಾವದ ವಕೀಲನ ಮೇಲೆ ಪೂಜ್ಯಶ್ರೀಯವರಿಗೆ ಕನಿಕರ ಬಂದಿತು. ಅವರು ಹೇಳತೊಡಗಿದರು.

"ಈಗ ನೀವು ಮಾಂಸ ಮದ್ಯ ಮತ್ತು ಮಧುವನ್ನು ತ್ಯಾಗ ಮಾಡಬೇಕು. ಅದರಿಂದ ನಿಮ್ಮ ಆತ್ಮ ಇನ್ನೂ ಚೆನ್ನಾಗಿ ಕಾಣಿಸುತ್ತಾನೆ" ಎಂದರು.

ತಮ್ಮ ಮಾತಿನ ಅಂತರ್ಯ ವಿಶ್ಲೇಷಿಸುತ್ತಾ ಹೀಗೆ ಹೇಳಿದರು.

"ಪಾಪ ತ್ಯಾಗ ಮಾಡುವುದರಿಂದ ಈ ಜೀವ ದೇವಗತಿಯಲ್ಲಿ ಹುಟ್ಟಿ ತೀರ್ಥಂಕರರು, ಅಕೃತಿಮ ಜಿನ ಮಂದಿರಗಳು ಇತ್ಯಾಗಿಗಳ ದರ್ಶನ ಮಾಡಿ ಸಮ್ಯಕ್ತ ಪ್ರಾಪ್ತಿ ಮಾಡಿಕೊಳ್ಳುತ್ತದೆ. ಆಗ ಆತ್ಮನ ಯಥಾರ್ಥ ದರ್ಶನವಾಗುತ್ತದೆ."

ಅಪೂರ್ವ ಸ್ಥಿರತೆ

ಒಮ್ಮೆ ಮುಕ್ತಾಗಿರಿ ಕ್ಷೇತ್ರಕ್ಕೆ ಇಂದೂರಿನ ಮಾರ್ಗವಾಗಿ ಹೋಗುತ್ತಿದ್ದರು. ರಸ್ತೆ ಬಿಸಿಲಿಗೆ ಬೆಂಕಿಯಂತೆ ಕಾದಿತ್ತು. ಇಡೀ ಪರ್ವತ ಹಾಗೂ ಆದರ ಸುತ್ತ ಮುತ್ತ ಪ್ರದೇಶದಿಂದ ಉಗಿ ಹಾಯುತ್ತಿತ್ತು. ಆಗ ನೇಮಿಸಾಗರರಿಗೆ ಉಷ್ಣಮೂರ್ಛೆ (Sun stroke) ಹೊಡೆಯಿತು. ಸ್ಥಿತಿ ಚಿಂತಾಜನಕವಾಗಿತ್ತು. ಹೆಚ್ಚು ಕಾಲ ಉಳಿಯಲಾರರೆಂದು ಶ್ರಾವಕರು ಹೆದರಿ ಹೋದರು. ಆ ಜಲ ಸೂನ್ಯ ಪ್ರದೇಶದಲ್ಲಿ ಬಾಯಾರಿಕೆಯಿಂದ ಬಾಯಿ ಒಣಗಿ ಕಮಂಡಲು ನೀರನ್ನೂ ಕುಡಿದು ಮುಗಿಸಿ ಬಿಟ್ಟಿದ್ದರು. ಸಂಧ್ಯಾ ಸಮಯಕ್ಕೆ ಮೆಲ್ಲನೆ ನೇಮಿಸಾಗರರ ಸ್ಥಿತಿ ಸುಧಾರಿಸಿತು. ಅಲ್ಲಿಯವರೆಗೂ ಅವರಿಗೆ ಅಂತಹ ಸ್ಥಿತಿ ಬಂದೇ ಇರಲಿಲ್ಲ. ಅಂತಹ ಭೀಷಣ ಸ್ಥಿತಿಯಲ್ಲೂ ಅವರ ದೃಢತೆ ಎಳ್ಳಷ್ಟೂ ಕುಗ್ಗಿರಲಿಲ್ಲ. ಕಠಿಣ ಪ್ರಸಂಗದಲ್ಲೂ ವಜ್ರದ ಧಾರೆಯಂತೆ ಅವರು ಅತ್ಯಂತ ಕಠಿಣವಾಗಿ ಬಿಡುತ್ತಿದ್ದರು.

ಪಾರಾಮಾರ್ಥದೃಷ್ಟಿ

ನಿತ್ಯ ತತ್ವ ದರ್ಶನದಿಂದ ಅವರ ಆತ್ಮ ಅತ್ಯಂತ ಸುಸಂಸ್ಕೃತವಾಗಿತ್ತು. ಪರಮಾರ್ಥಿಕ ದೃಷ್ಟಿಯಿಂದ ಅವರಗಿಗೆ ಚತುರ್ಗತಿಗಳು ಒಂದೇ ಆಗಿದ್ದವು.

"ನಮಗೆ ನಾಲ್ಕು ಗತಿಗಳೂ ಸಮಾನವಾಗಿದೆ. ನಮ್ಮ ಕರ್ಮ ಹೇಗಿದೆಯೋ ಹಾಗೆ ಮುಂದಿನ ಗತಿ ಆದೀತು. ನರಕಗತಿಯ ದುಃಖ ಶರೀರದವರೆಗೆ ಸೀಮಿತ. ನಮಗೆ ನರಕದಲ್ಲಿ ಹುಟ್ಟಲೂ ಭಯವಿಲ್ಲ. ಅಲ್ಲಿ ನಮಾತ್ಮನಿಗೆ ಏನಾದೀತು ? ಶರೀರ ಮತ್ತು ಆತ್ಮ ಒಂದೇ ಅಲ್ಲ."

ಪೂರ್ವದಲ್ಲಿ ಮುನಿ

ನನ್ನ ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತಾ ತಾವು ಹತ್ತು ಹದಿನೈದು ಮುನಿಗಳನ್ನು ದರ್ಶನ ಮಾಡಿದ್ದಾಗಿ ತಿಳಿಸಿದರು. ಆಗ ಮುನಿಗಳ ಚಾರಿತ್ರ ನಿರ್ದೋಷವಾಗಿರಲಿಲ್ಲ. ಉಪಾಧ್ಯಾಯನ ಮೂಲಕ ನಿಗದಿ ಮಾಡಿದ ಮನೆಯಲ್ಲಿ ತ್ಯಾಗಿಗಳಿಗೆ ಆಹಾರ ಆಗುತ್ತಿತ್ತು. ಮುನಿಗಳಿಗೆ ಆಹಾರ ಆಗುವಾಗ ನಿಂದ್ಯ ವಚನಗಳು ಕಿವಿಗೆ ಬೀಳಬಾರದೆಂದು ಗಂಟೆ ಭಾರಿಸಲ್ಪಡುತ್ತಿತ್ತು. ಮುನಿಗಳು ಆಹಾರ ಮಾಡುವಾಗ ಪೂರ್ಣ ದಿಗಂಬರರಾಗುತ್ತಿದ್ದರು. ಅನ್ಯ ಸಮಯ ಖಂಡ ವಸ್ತ್ರ ಧರಿಸುತ್ತಿದ್ದರು.

ಈ ಮಾತು ಕೇಳಿ ನಾನು ಪ್ರಶ್ನಿಸಿದೆ.

"ಮಹರಾಜ್! ನೀವೂ ಕೂಡಾ ಕೆಲವು ಕಾಲ ಅಂತಹ ವೃತ್ತಿಯನ್ನೇ ಮಾಡಿದಿರಾ ?"

ಅವರು:"ನಾವೆಂದೂ ಆಗಮ ವಿರುದ್ಧಾಚರಣೆ ಮಾಡಲಿಲ್ಲ. ನಾವು ಶಾಸ್ತ್ರ ಓದುತ್ತಿದ್ದೆವು. ಆದ್ದರಿಂದ ಕರ್ತವ್ಯ ಪಥದ ಭೋಧೆ ಸ್ವಯಂ ಉಂಟಾಗುತ್ತಿತ್ತು."

"ಮುನಿ ಪಥದ ಮಾತು ಬೇರೆಯೇ ಆಯಿತು. ಕ್ಷುಲಕ ಅವಸ್ಥೆಯಲ್ಲೂ ಪೂರ್ವ ನಿಶ್ಚಿತ ಗೃಹಕ್ಕೆ ಹೋಗುವುದನ್ನು ನಿಲ್ಲಿಸಿ ಬಿಟ್ಟೆವು. ಈ ಕಾರಣದಿಂದ ಮುನಿ ದೀಕ್ಷೆಗೆ ಮೊದಲು ಒಂದೆರಡು ವರ್ಷ, ಬಹಳ ಕಷ್ಟ ಅನುಭವಿಸಬೇಕಾಯಿತು. ಏಕೆಂದರೆ ಜನಗಳಿಗೆ ಈ ಬಗ್ಗೆ ತಿಳುವಳಿಕೆ ಇರಲಿಲ್ಲ. ನಾವು ಆಹಾರಕ್ಕೆ ಹೋರಟಾಗ ಯಾರಾದರೂ ತಡೆದರೆ ನಿಲ್ಲುತ್ತಿದ್ದೆವು ಅನ್ಯಥಾ ವಾಪಾಸಾಗುತ್ತಿದ್ದೆವು. ಬೇರೆ ದಿನವೂ ಹಾಗೆಯೇ ಮಾಡುತ್ತಿದ್ದೆವು. ಎರಡನೆ ಮಾರನೆ ದಿನವೂ ಆಹಾರ ಸಿಗದಿದ್ದರೆ ಸಮತಾ ಭಾವ ಪೂರ್ವಕ ಉಪವಾಸ ಕೈಗೊಳ್ಳುತ್ತಿದ್ದೆರು. ನಮಗೆ ಯಾರ ಮೇಲೆಯೂ ಸಂತಾಪ ಹುಟ್ಟುತ್ತಿರಲಿಲ್ಲ. ನಮ್ಮ ಪ್ರಾಣಗಳು ಹೋದರೂ ಭಗವಂತನ ವಾಣಿಯ ವಿರುದ್ಧ ನಡೆಯುವುದಿಲ್ಲವೆಂದು ನಿಶ್ಚಯಿಸಿದ್ದೆವು. ಆಗ ಉಪಾಧ್ಯಾಯರೂ ನಮ್ಮ ವಿರುದ್ಧವಾಗಿದ್ದರು. ಏಕೆಂದರೆ ಅವರು ನಿಶ್ಚಿತ ಮಾಡಿದ ಗೃಹಕ್ಕೆ ನಾವು ಹೋಗದಿದ್ದರೆ ಅವರಿಗೆ ಸಿಗುತ್ತಿದ್ದ ಊಟಕ್ಕೆ ಸೊನ್ನೆ ಬೀಳುತಿತ್ತು. ನಮ್ಮ ಪ್ರವೃತ್ತಿಯಿಂದ ಉಪಾಧ್ಯಾಯನ ಸ್ವಾರ್ಥ ಪೋಷಣೆ ನಿಂತು ಹೋಯಿತು. ಆದ್ದರಿಂದ ಅವರು ನಮ್ಮ ಮಾರ್ಗದಲ್ಲಿ ಕಂಟಕಪ್ರಾಯರಾದರು. ಮುನಿಗಳೂ ನಮ್ಮಪ್ರತಿಕೂಲವಾಗಿ ಹೇಳಲಾರಭಿಸಿದರು. "ಕಾಲಕ್ಕೆ ತಕ್ಕಂತೆ ಆಚರಣೆ ಮಾಡಿ" ಎಂದು ಹೇಳಹತ್ತಿದರು.

ಇಂತಹಸ್ಥಿತಿಯಲ್ಲಿ ನಾವು ಆಗಮೋಕ್ತ ಮಾರ್ಗದಿಂದ ಹಿಂದೆ ಸರಿಯಲಿಲ್ಲ. ಎಲ್ಲಿಯವರೆಗೆ ಅಂತರಾಯ ಕರ್ಮದ ಉದಯವಾಗುವುದೋ ಅಲ್ಲಿಯವರೆಗೆ ಆಹಾರ ಸಿಗುವುದಿಲ್ಲ. ನಿಧಾನ ನಿಧಾನವಾಗಿ ಜನಗಳಿಗೆ ನಮ್ಮ ಪ್ರವೃತ್ತಿಯು ಬೋಧವಾಗ ತೊಡಗಿತು. ಪ್ರತಿಕೂಲ ಪರಿಸ್ಥಿತಿ ಅನುಕೂಲವಾಗ ತೊಡಗಿತು"

ಅವರು ಮುನಿಧರ್ಮದ ಪಾಲಕರಷ್ಟೇಅಲ್ಲ; ಸುಧಾರಕರೂ ಆಗಿದ್ದರು. ಕಾಲದೋಷದಿಂದ ನಷ್ಟವಾಗಿದ್ದ ಮುನಿ ಪರಂಪರೆಯನ್ನು ಸಚೇತನಗೊಳಿಸಿದ ಸಿದ್ಧಪುರುಷ! ಮಿಥ್ಯಾತ್ವದ ವಿಷಬಳ್ಳಿಗಳಿಂದ ತೊಡರಿಕೊಂಡಿದ್ದ ಮತ್ತು ಲೋಕಮೂಢಗಳ ಗಿಡಗಂಟೆಗಳಿಂದ ವಿಷಮವಾಗಿದ್ದ ಮುಕ್ತಿ ಮಾರ್ಗವನ್ನು ನಿರ್ದಾಕ್ಷಿಣ್ಯವಾಗಿ ಕಿತ್ತು ಹಾಕಿ ಅವುಗಳನ್ನು ರಾಜಮಾರ್ಗವನ್ನಾಗಿ ಮಾಡಿದ ಅಮರ ಜೀವಿ. ನಿಜವಾದ ಸುಧಾರಣೆ ಎಂದರೆ ಪತಿತ ಆತ್ಮನ ಉದ್ಧಾರ. ತಮಾತ್ಮನ ಉದ್ಧಾರದೊಡನೆ ಪರಂಪರೆಯ ಪುನರುತ್ಥಾನಕ್ಕಾಗಿ ತಮ್ಮ ಒಡಲನ್ನೇ ಧಣವಾಗಿ ಒಡ್ಡಿದರು. ದೀಪ ಸ್ವಯಂ ಬೆಳಗಿ ಪರಿಸರವನ್ನೂ ಬೆಳಗುವಂತೆ ಆ ದಿವ್ಯ ಆತ್ಮ ತನ್ನನ್ನಷ್ಟೇ ಅಲ್ಲ ಇಡೀ ಮುಕ್ತಿಮಾರ್ಗದ ಉತ್ಕರ್ಷತೆಯನ್ನು ಮಾಡಿತು.

ಇಂದು ಜನಗಳು ಸುಧಾರಣೆಯ ಮಾತನ್ನು ಎತ್ತರದ ಧ್ವನಿಯಲ್ಲಿ ಹೇಳುತ್ತಾರೆ. ಸಮತಾವಾದ ಸಮಾಜವಾದ ಎಂದೆಲ್ಲಾ ನಾನಾ ವಾದಗಳನ್ನ ಹುಟ್ಟು ಹಾಕಿದ್ದಾರೆ. ಹರಿಯುವ ನೀರನ್ನು ಕೈಯ್ಯಲ್ಲಿ ಒಡ್ಡಿ ನಿಲ್ಲಿಸುವೆನು ಎನ್ನುವಂತೆ ಧರ್ಮಮಾರ್ಗ ಬಿಟ್ಟು ಪತನಕಾರಿ ಮಾರ್ಗಗಳಿಂದ ನಿಜವಾದ ಸುಧಾರಣೆ ಹೇಗೆ ಆದೀತು ?

ಉಪವಾಸದಿಂದ ಆತ್ಮಜಾಗೃತಿ

ಸಂಯಮ ಜೀವನದಿಂದ ಇಂದ್ರಿಯ ಭೋಗಗಳ ವೇಗ ತಗ್ಗುತ್ತಾ ಹೋಗುತ್ತದೆ. ಆತ್ಮ ಕಲ್ಯಾಣ ಏರುತ್ತಾ ಹೋಗುತ್ತದೆ. ಈ ಬಗ್ಗೆ ಅವರು ಒಂದು ಉದಾಹರಣೆ ಕೊಟ್ಟರು. ಅವರು ಒಮ್ಮೆ ಜಯಪುರದಲ್ಲಿ ಚಾತುರ್ಮಾಸ ಮಾಡುತ್ತಿದ್ದರು. ಅಲ್ಲಿ ಗುಲಾಬ್ ಬಾಯಿ ಎನ್ನುವ ಮಹಿಳೆ ೨೨ ದಿನಗಳವರೆಗೆ ಉಪವಾಸ ಮಾಡಿದ್ದಳು. ಆ ಉಪವಾಸದಿಂದ ಅವಳಲ್ಲಿ ಅದೆಷ್ಟು ವಿಶುದ್ಧಿ ಆಯಿತೆಂದರೆ, ಉಪವಾಸದ ಮಾರನೆಯ ದಿನ ಕೇಶಲುಂಚನ ಮಾಡಿಕೊಂಡು ಆರ್ಯಿಕೆ ದೀಕ್ಷೆ ತೆಗೆದುಕೊಂಡಳು. ನೋಡುವರಿಗೆ ಆಶ್ಚರ್ಯವಾಯಿತು.

ವಾಸ್ತವವಾಗಿ ಅಂತಹ ಸಂಯಮ ವೃತ್ತಿಯ ಮೂಲಕವೇ ಜೀವನ ಸುಧಾರಣೆ

ಆಗುವುದು. ಆತ್ಮನ ಪತನವನ್ನು ತಪ್ಪಿಸುವುದೇ ನಿಜವಾದ ಸುಧಾರಣೆ ಎಂದು ಹೇಳಬೇಕು. ಆತ್ಮನ ಪತನವನ್ನು ತಪ್ಪಿಸುವಂತಹದ್ದು ಸಂಯಮ ಜೀವನ ಒಂದೇ.

ಉಪವಾಸದೊಡನೆ ಸ್ಥಿರ ಮನಸ್ಸೂ ಇದ್ದರೆ, ಅಂತಹ ಉಪವಾಸದಿಂದ ಹೆಚ್ಚು ಲಾಭ.

ಅಮೂಲ್ಯ ಅನುಭವ

ಈ ಮಾತು ನೇಮಿಸಾಗರರ ಜೀವನದಿಂದ ಪ್ರತ್ಯಕ್ಷ ತಿಳಿದು ಬಂತು. ಅವರು ೧೬ ದಿನಗಳವರೆಗೂ ಉಪವಾಸ ಮಾಡುತ್ತಿದ್ದರು. ಆಚಾರ್ಯ ಶ್ರೀಯವರೊಡನೆ ಅನೇಕ ಧಾರ್ಮಿಕ ವಿಚಾರಗಳನ್ನು ಚರ್ಚಿಸುತ್ತಿದ್ದರು. ಅವರ ಹತ್ತಿರದ ಕುಟೀರದಲ್ಲಿ ಪೂಜ್ಯ ನೇಮಿಸಾಗರರಿರುತ್ತಿದ್ದರು. ಅವರಲ್ಲಿ ಹೋಗಿ ಕೆಲವು ಪ್ರಶ್ನೆ ಕೇಳಿದೆ.

ನಾನು "ಮಹರಾಜ್ ! ಈಗ ಉಪವಾಸದ ಪ್ರಯುಕ್ತ ನಿಮ್ಮ ಭಾವನಾ ಸ್ಥಿತಿ ಹೇಗಿದೆ ?"

ನೇಮಿಸಾಗರರು "ಬಹಳ ಶಾಂತಿ ಇದೆ. ಯಾವ ಆಕುಲತೆಯೂ ಇಲ್ಲ. ಬಾಹ್ಯದಲ್ಲಿ ಮನಸ್ಸು ಪ್ರವೃತ್ತಿಸುವುದಿಲ್ಲ"

ನಾನು : "ನಾವುಗಳೆಲ್ಲಾ ಮಾತಾಡುತ್ತಿರುತ್ತೇವೆ. ನೀವು ಅವುಗಳನ್ನೆಲ್ಲಾ ಕೇಳಿಸಿಕೊಳ್ಳುತ್ತೀರೋ ?"

ಅವರು "ನೀವು ಆಚಾರ್ಯ ಮಹರಾಜರೊಡನೆ ಏನೇನು ಮಾತಾಡುತ್ತಿದ್ದೀರೆಂದು ನಮಗೆ ತಿಳಿಯದು. ನಮ್ಮ ಮನಸ್ಸು ಮತ್ತೊಂದು ಕಡೆ ಹೋಗುವುದಿಲ್ಲ. ಆದ್ದರಿಂದ ನಮಗೆ ಬಾಹ್ಯ ವಿಚಾರ ತಿಳಿಯದು"

ಇದೇ ನಿಜವಾದ ಉಪವಾಸ. ಒಂದು ದೃಷ್ಟಿಯಲ್ಲಿ ಮನಸ್ಸನ್ನು ಸ್ಥಿರಗೊಳಿಸುವ ಒಂದು ವಿಧಾನವೇ ಉಪವಾಸ. ಮನಸ್ಸು ಮತ್ತಷ್ಟು ಚಂಚಲವಾದರೆ ಅದು ಉಪವಾಸವಲ್ಲ ಲಂಘನ. ಉಪವಾಸ ಮಾಡಿದಾಗ ಮನಸ್ಸು ಹಸಿವು ಆಸರೆಗಳಿಂದ ತಲ್ಲಣಗೊಂಡರೆ, ಎಷ್ಟು ಬೇಗ ಮುಗಿಯುವುದೋ ಎಂದು ನಿಟ್ಟುಸಿರು ಬಿಡುತ್ತಿದ್ದರೆ, ಹಸಿವು ಬಾಯಾರಿಕೆಗಳ ಕಡೆಯೇ ಮನಸ್ಸು ಹಾರಿ ಹೋಗುತ್ತಿದ್ದರೆ ಅದು ಉಪವಾಸವೇ ಅಲ್ಲ. ಅದೊಂದು ಹಸಿದ ಹೊಟ್ಟೆಯ ಪಿಶಾಚಿ ನೃತ್ಯ ! ಏಕೆಂದರೆ ಆಗ ಮನಸ್ಸು ಆಹಾರ ಜಲಕಾಂಕ್ಷೆಯಿಂದ ಪಿಶಾಚಿಯಂತೆ ಕುಣಿಯುತ್ತಿರುತ್ತದೆ !

ಉಪವಾಸ ಮಾಡಿ ಜೈಸುವುದೆಂದರೆ ಹೆಬ್ಬುಲಿಯ ಮೈಯೇರಿ ಸವಾರಿ ಮಾಡಿದಂತೆ ! ಜೈಸದೇ ಹೋದರೆ ಹೆಬ್ಬುಲಿಯೇ ಬೆನ್ನು ಹತ್ತಿದಂತೆ ! ಉಪವಾಸದಿಂದ ಸುಪ್ತ ಕರ್ಮಗಳು ಒಮ್ಮೆಗೇ ಉದಯಕ್ಕೆ ಬಂದು ಫಲ ಕೊಡುತ್ತವೆ. ಆಗ ಶಾಂತವಾಗಿ ಆ ಫಲಗಳನ್ನು ಎದುರಿಸುವವನೇ ಕಲಿ. ಬಾಹ್ಯದಲ್ಲಿ ಇದು ಬೇಕು ಬೇಡ ಎಂದರೆ ಕರ್ಮ ಬಂಧಕ್ಕೆ ಆಹ್ವಾನ ಕೊಟ್ಟಂತೆ. ಆದರೆ ಅಂತಹ ಇಚ್ಛೆಯನ್ನೇ ನಿರೋಧಿಸಿದರೆ ಕರ್ಮಬಂಧ ತಡೆದಂತೆ. ಉಪವಾಸದಿಂದ ಆಹಾರ ನೀರಡಿಕೆಗಳ ನಿರೋಧವಾಗುತ್ತದೆ. ತನ್ಮೂಲಕ ಆಗುವ ಕರ್ಮಬಂಧದ ತಡೆಯೂ ಆಗುತ್ತದೆ. ಅಂದರೆ ಉಪವಾಸದಿಂದ ಸಂವರ ಆಗುತ್ತದೆ. ಉಪವಾಸದಲ್ಲಿ ಬಾಹ್ಯ ಚಿಂತನೆಯು ನಿರೋಧವಾಗಿ ಆತ್ಮ ಚಿಂತನೆ ಇರುತ್ತದೆ. ಆದ್ದರಿಂದ ಉಪವಾಸದಿಂದ ನಿರ್ಜರೆಯೂ ಆಗುತ್ತದೆ. ಅಂದರೆ ಉಪವಾಸ ಸಂವರೆ ಮತ್ತು ನಿರ್ಜರೆಗಳಿಗೆ ಕಾರಣವಿದೆ.

ಒಮ್ಮೆ ಒಬ್ಬ ಲೆಫ್ಟಿನೆಂಟ್ ಕರ್ನಲ್ ಉಪವಾಸ ಎಂದರೇನು ಎಂದು ನನ್ನನ್ನು ಕೇಳಿದರು. ಆಗ ನಾನು ಅವರಿಗೆ ವಿವರಿಸಿ ಹೇಳಿದೆ "ಜೈನ ಉಪವಾಸದ ಲಕ್ಷಣ ಆತ್ಮ ನಿರ್ಮಲತೆ" ಉಪವಾಸದ ದಿನ ಆತ್ಮನಿಗೆ ಆಹಾರ ಸಿಗುವುದಿಲ್ಲ ಎನ್ನುತ್ತಾರೆ. ಇದು ತಪ್ಪು ಕಲ್ಪನೆ. ಆಹಾರ ಸಿಗದಿರವುದು ದೇಹಕ್ಕೆ ಮಾತ್ರ. ಆತ್ಮನಿಗೆ ಸದ್ವಿಚಾರಗಳ ಆಹಾರ ಸದಾ ಸಿಗುತ್ತದೆ. "fasting of the body is but to feasting of soul" ಎಂದು ನಾನು ಹೇಳಿದೆ.

ಆತ್ಮಬಲ ವೃದ್ಧಿಸಿದಂತೆ ದೊಡ್ಡ ದೊಡ್ಡ ಉಪವಾಸಗಳು ಹಗುರವಾಗಿ ಕಾಣಲಾರಂಭಿಸುತ್ತವೆ: ೧೨ ನೆಯ ಉಪವಾಸದಲ್ಲೂ ಅರ್ಧ ಮೈಲಿ ನಡೆದೇ ನೇಮಿಸಾಗರರು ಮಂದಿರಕ್ಕೆ ಬಂದರು. ಆಗ ಅವರು ಹೇಳಿದರು.

ಪಂಡಿತರೆ ! ಆತ್ಮನಲ್ಲಿ ಅನಂತ ಶಕ್ತಿ ಇದೆ. ಈಗ ನಾವು ಹತ್ತು ಮೈಲಿಗಳವರೆಗೂ ನಡೆಯಬಲ್ಲೆವು"

ಆಗ ನಾನು ಹೇಳಿದೆ.

"ಆದರೆ ಮಹರಾಜ್ ! ನೀವೀಗ ೧೨ ಉಪವಾಸ ಮಾಡಿದ್ದೀರಲ್ಲಾ ?" ಅವರ: "ಎಷ್ಟು ಉಪವಾಸಗಳಾಗಿವೆ ಎನ್ನುವ ಎಣಿಕೆ ನಮ್ಮದಲ್ಲ. ನಮಗೀಗ ಐದೇ ಉಪವಾಸಗಳಷ್ಟೇ ಆಗಿದೆ ಅನ್ನಿಸುತ್ತದೆ"

"ಭೋಜನ ಆತ್ಮನಿಗಲ್ಲ. ಶರೀರಕ್ಕೆ. ಅದು ಆತ್ಮನ ಸ್ವಭಾವವೂ ಅಲ್ಲ. ಆತ್ಮನೇನು ಅನ್ನವನ್ನು ತಿನ್ನುವನೇ ? ಹಾಲನ್ನು ಕುಡಿಯುನೇ ? ಆಹಾರದ ಸ್ವಾದವನ್ನು ಮಾತ್ರ

ಗ್ರಹಿಸಬಲ್ಲ. ಆಹಾರದ ರಸವೂ ಆತ್ಮನಿಗೆ ದಕ್ಕುವುದಿಲ್ಲ. ನರಕದಲ್ಲೂ ಆಹಾರದ ಕಣವೂ ಸಿಗುವುದಿಲ್ಲ. ಆದರೂ ಅಲ್ಲಿಯ ಜೀವಿಗಳು ಸಾಗರೋಪಮ ವರ್ಷಗಳವರೆಗೆ ಜೀವಿಸುವುದಿಲ್ಲವೆ? ಈಗ ಇಂತಹ ಅಲ್ಪ ಉಪವಾಸದಿಂದ ಆದೆಂತಹ ಚಿಂತೆ"

ಅವರ ಮಾತು ಕೇಳಿ ಚತುರ್ಥ ಕಾಲದ ಮುನಿಗಳ ಸಮೀಪ ಇದ್ದೇವೋ ಅನ್ನಿಸಿತು. ಹದಿನೆಂಟನೆಯ ದಿನ ಅವರಿಗೆ ಸಂಘಪತಿಗಳಿಂದ ನಿರಂತರಾಯ ಆಹಾರವಾಯಿತು. ಕಂಠನಾಳ ಶುಷ್ಕವಾಗಿ ಒಣಗಿ ಹೋಗಿತ್ತು. ಒಂದೊಂದೇ ತುತ್ತನ್ನು ಸಾವಧಾನವಾಗಿ ತೆಗೆದುಕೊಳ್ಳುತ್ತಿದ್ದರು.

ಉಪವಾಸ ಶಾಂತಿಪೂರ್ವಕ ಪೂರ್ಣವಾಯಿತು. "ಪರಮಪೂಜ್ಯ ಆಚಾರ್ಯ ಮಹರಾಜರ ಕೃಪಾಶೀರ್ವಾದದಿಂದ ಸಾಧ್ಯವಾಯಿತು" ಎಂದು ಗುರು ಸ್ಮರಣೆ ಮಾಡಿದರು.

ವಿಚಿತ್ರ ಪ್ರಶ್ನೆ

ಒಮ್ಮೆ ಜಯಪುರದಲ್ಲಿ ಚಾತುರ್ಮಾಸವಿತ್ತು. ಬಹಳ ಜನ ವ್ರತ ತೆಗೆದುಕೊಂಡರು. ಕೆಲವರು ದೀಕ್ಷೆ ತೆಗೆದುಕೊಂಡರು. ಅದನ್ನ ನೋಡಿ ಒಬ್ಬ ಕೇಳಿದ.

"ಮಹರಾಜ್! ನಿಮ್ಮ ಉಪದೇಶಕ್ಕೆ ಮನಸ್ಸು ಕೊಟ್ಟು ಎಲ್ಲರೂ ದೀಕ್ಷೆ ತೆಗೆದುಕೊಂಡರೆ ಅವರಿಗೆ ಆಹಾರ ಯಾರು ಕೊಡುತ್ತಾರೆ?" ಆಗ ಅವರೆಂದರು

"ಅರೆ ತಮ್ಮಾ! ಎಲ್ಲರಿಗೂ ಅಂತಹ ಪವಿತ್ರ ಭಾವ ಉತ್ಪನ್ನವಾಗುವಿದಿಲ್ಲ. ನೀನು ಹೀಗೆ ಕೇಳಿದ್ದರಿಂದ ಹೇಳಬೇಕಾಗಿದೆ. ಮುನಿಪದ ಧಾರಣೆ ಮಾಡಿದ ಮೇಲೆ ಯಾರಾದರೂ ಉಪವಾಸವಿದ್ದಾರೇನು?"

ಈ ಮಾತು ಕೇಳಿ ಆ ವ್ಯಕ್ತಿ ಸುಮ್ಮನಾದ.

ಇಂತಹದ್ದೆ ಇನ್ನೊಂದು ಪ್ರಸಂಗ ನಡೆದಿತ್ತು. ಪಾಯಸಾಗರರಿಗೆ ದೀಕ್ಷೆ ತೆಗೆದುಕೊಳ್ಳುವ ಭಾವವಿತ್ತು, ಅದನ್ನು ಕೇಳಿದ ಕೆಲವು ಜನಗಳು ವಿರೋಧಿಸಿದರು. ಮಹರಾಜ್ ಅವರಿಗೆ ದೀಕ್ಷೆ ಕೊಡಬೇಡಿ. ಅವರು ನಾಟಕದ ವ್ಯಕ್ತಿ. ದೀಕ್ಷೆ ತೆಗೆದುಕೊಂಡು ಅದನ್ನು ಬಿಡಲು ಹೆಚ್ಚು ಕಾಲ ಹಿಡಿಯುವುದಿಲ್ಲ ಎಂದರು. ಪೂಜ್ಯ ಶ್ರೀಯುವರಿಗೆ ಪಾಯಸಾಗರರ ಅಂತರಂಗ ಪರಿವರ್ತನೆಯ ಭಾವ ತಿಳಿದಿತ್ತು, ಅವರಿಗೆ

ದೀಕ್ಷೆ ಕೊಡಲು ಇಚ್ಛೆ ಇತ್ತು, ಆದ್ದರಿಂದ ಪಾಯಸಾಗರರಲ್ಲೇ ಕೇಳಿ ಬಿಟ್ಟರು.

"ನೀನು ದೀಕ್ಷೆ ತೆಗೆದುಕೊಂಡು ಬಿಡಬಾರದು. ಒಂದು ವೇಳೆ ಬಿಟ್ಟೆಯಾದರೆ ಯಾರು ಹೊಣೆ?" ಆಗ ಅಲ್ಲಿ ಕುಳಿತಿದ್ದ ಒಬ್ಬಶ್ರಾವಕ ಮೇಲೆದ್ದು ಪೂಜ್ಯ ಶ್ರೀಯುವರಿಗೆ ವಂದಿಸಿ "ಮಹರಾಜ್! ಈ ಹೊಣೆ ನಾನು ಹೊರುತ್ತೇನೆ. ಒಂದು ವೇಳೆ ಅವರು ದೀಕ್ಷೆಯನ್ನು ಖಂಡನೆ ಮಾಡಿದರೆ ಅವರ ಬದಲು ತಮ್ಮ ಶ್ರೀ ಚರಣಗಳಲ್ಲಿ ನಾನು ದೀಕ್ಷೆ ತೆಗೆದುಕೊಳ್ಳುತ್ತೇನೆ" ಎಂದು ಹೇಳಿದ. ಪಾಯಸಾಗರರ ದೀಕ್ಷೆ ಆಗಿ ಹೋಯಿತು.

ಆದರೆ ಪಾಯಸಾಗರರು ದೀಕ್ಷೆ ತೆಗೆದುಕೊಂಡು ಎಂದೂ ಹಿಂದಕ್ಕೆ ನೋಡಲಿಲ್ಲ. ಅವರದು ಸಫಲ ಮುನಿಜೀವ! ಆಚಾರ್ಯ ಮಹರಾಜರಿಂದ ದೀಕ್ಷೆ ಪಡೆದವರೆಲ್ಲರೂ ಒಳ್ಳೆಯ ಸಾಧಕರಾಗಿದ್ದರು.

ಅನಶನ ತಪದ ಉದ್ದೇಶ

ಒಂದು ದಿನ ಅನಶನ ತಪದ ವರ್ಣನೆ ಮಾಡುತ್ತಾ ನಾನು ಹೇಳಿದೆ. ಅನಶನಾದಿ ತಪಗಳಿಂದ ಮನಸ್ಸಿನ ಚಂಚಲತೆ ದೂರವಾಗುತ್ತದೆ. ಚಿತ್ತಸ್ಥಿರತೆ ಉಂಟಾಗುತ್ತದೆ.

ಆಗ ಅವರು ಹೇಳಿದರು "ಬಾಹ್ಯಕ್ಕೆ ಮನಸ್ಸು ಹರಿದು ಹೋಗದೆ ಸ್ಥಿರಗೊಂಡಿರುವುದಿರಿಂದ ಉಪವಾಸ ಮಾಡುತ್ತೇವೆ"

ಆಗ ನಾನು ಕೇಳಿದೆ "ನಿಮ್ಮ ಮನಸ್ಸಿನಲ್ಲಿ ಚಂಚಲತೆ ಇಲ್ಲದಿರುವಾಗ ಉಪವಾಸಗಳನ್ನೇಕೆ ಮಾಡುತ್ತೀರಿ?"

ಆಗ ಅವರೆಂದರು "ನಾವು ಪೂರ್ವದಲ್ಲಿ ಮಿಥ್ಯಾತ್ವ ಅವಸ್ಥೆಯಲ್ಲಿ ಬಂಧಿಸಿಕೊಂಡಿರುವ ಮಹಾನ್ ಕರ್ಮಗಳನ್ನು ನಿರ್ಜರೆ ಮಾಡಲು ನಿರಂತರ ಉಪವಾಸ ಮಾಡುತ್ತೇವೆ. ತಪಸ್ಸಿನ ಮೂಲಕ ಕರ್ಮಗಳ ಸಂವರ ನಿರ್ಜರೆ ಆಗುತ್ತದೆ. ಈ ಕಾರಣದಿಂದ ಮನಸ್ಸಿನಲ್ಲಿ ಚಂಚಲತೆ ಇಲ್ಲದಿದ್ದರೂ ಉಕ್ತ ಧ್ಯೇಯ ಸಿದ್ಧಿಗಾಗಿ ಉಪವಾಸ ಮಾಡತ್ತೇವೆ.

ಒಮ್ಮೆ ಅವರು ಕರ್ಮಭೂಮಿ ಎಂದರೇನು ಎಂದು ಪ್ರಶ್ನಿಸಿದರು. ಅದಕ್ಕೆ ನಾನು ಎಲ್ಲಿ ಷಟ್ಕರ್ಮಾಚರಣೆಗಳಿಂದ ಜೀವನ ನಿರ್ವಹಣೆ ಮಾಡಲ್ಪಡುವುದೋ ಅಂತಹ ಕ್ಷೇತ್ರ ಕರ್ಮ ಭೂಮಿ ಎಂದೆ. ಅದಕ್ಕೆ ಅವರು ಯಾವ ಕ್ಷೇತ್ರದಿಂದ ಕರ್ಮಕ್ಷಯ

ಮಾಡಿಕೊಂಡು ಮುಕ್ತಿ ಪಡೆಯುತ್ತೇವೆಯೋ ಅದಕ್ಕೆ ಕರ್ಮಭೂಮಿ ಎನ್ನುತ್ತೇವೆ ಎಂದರು.

ಶ್ರವಣಬೆಳಗೊಳದಲ್ಲಿ ಮುನಿ ಅನಂತಕೀರ್ತಿ ನೆಲ್ಲಿಕಾರ ಇವರೊಡನೆ ಭೇಟಿಯಾಗಿತ್ತು, ಅವರ ಸ್ವರ್ಗವಾಸ ೧೯೭೧ರಲ್ಲಿ ಆಯಿತು.

ಜೀವನದಲ್ಲಿ ಭರವಸೆ ಏನು ?

ಒಂದು ದಿನ ನಾನು ಅನಿತ್ಯ ಅನುಪ್ರೇಕ್ಷೆ ಬಗ್ಗೆ ವಿವೇಚನೆ ಮಾಡುತ್ತಿದ್ದೆ. ಈ ಬಗ್ಗೆ ವಿವರಣೆ ಕೊಟ್ಟರು.

"ಈ ಸಂಸಾರದಲ್ಲಿ ನಾವು ಸದಾ ಅನಿತ್ಯತೆಯ ಬಗ್ಗೆ ವಿಚಾರ ಮಾಡುತ್ತಿರುತ್ತೇವೆ. ಒಂದು ದಿನ ಒಬ್ಬ ಶ್ರಾವಕ ನಮಗೆ ಬಹಳ ಭಕ್ತಿಯಿಂದ ಆಹಾರ ಮಾಡಿದ. ಅವನು ಮನೆಗೆ ಹೋಗಿ ಊಟ ಮಾಡಲು ಒಂದು ತುತ್ತು ಕೈಗೆ ಎತ್ತಿಕೊಳ್ಳುತ್ತಿದ್ದಂತೆಯೇ ಸತ್ತು ಹೋದ. ಇಂತಹ ಒಂದು ಘಟನೆ ಕೊಗನೊಲಿಯಲ್ಲಿ ನಡೆದಿತ್ತು, ಆದ್ದರಿಂದ ಈ ಜಗತ್ತಿನ ಕ್ಷಣಿಕತೆಗೆ ಹೇಸಿ ಜ್ಞಾನಿಗಳು ವಿರಕ್ತರಾಗುತ್ತಾರೆ"

ಈ ಕಾಲದಲ್ಲಿ ಅವಧಿಜ್ಞಾನ ವಿದ್ದಿದ್ದರೆ ಎಷ್ಟೋ ದುರ್ಘಟನೆಗಳಿಂದ ಜನಗಳು ಉಳಿದುಕೊಳ್ಳಬಹುದಿತ್ತೆಂದು ಯಾರೋ ಹೇಳಿದರು. ಅದಕ್ಕೆ ಅವರು ಹೀಗೆ ಹೇಳಿದರು.

"ಈ ಕಾಲದಲ್ಲಿ ಒಂದು ವೇಳೆ ಅವಧಿ ಜ್ಞಾನ ಇದ್ದಿದ್ದರೂ ವಿಶೇಷವೇನಿರುತ್ತಿತ್ತು, ಭೋಗಿಸಲೇ ಬೇಕಾದ್ದನ್ನು ತಪ್ಪಿಸಿಕೊಳ್ಳುವಂತಿಲ್ಲವಷ್ಟೆ. ಈಗ ಅವಧಿ ಜ್ಞಾನ ವಿಲ್ಲದಿದ್ದರೇನಾಯಿತು ? ಮೊದಲು ಒಂದು ಪೂರ್ವ ಕೋಟಿ ಆಯುಷ್ಯವಿದ್ದರೂ ಎಂಟನೇ ವಯಸ್ಸಿನಲ್ಲೇ ದೀಕ್ಷೆ ತೆಗೆದುಕೊಳ್ಳುತ್ತಿದ್ದರು. ಆತ್ಮ ಕಲ್ಯಾಣದ ಬಗ್ಗೆ ಅಷ್ಟು ಭಯ ಜಾಗೃತಿ ಇತ್ತು. ಈಗ ಆಯುಷ್ಯ ನೂರು ವರ್ಷಗಳ ಒಳಗೇ ಇದ್ದರೂ ಜೀವನವೆಲ್ಲ ಭೋಗಿಸುತ್ತಾ ಕಳೆದರೂ ಕೊನೆಯ ಕಾಲದಲ್ಲಾದರೂ ಎಚ್ಚೆತ್ತು ದೀಕ್ಷೆ ವಹಿಸಿ ಆತ್ಮಕಲ್ಯಾಣ ಮಾಡಿಕೊಳ್ಳುವುದಿಲ್ಲ. ಅರೆ ! ನಿಮ್ಮ ಕಣ್ಣುಗಳು ಮುಚ್ಚುವ ಮುನ್ನವೇ ನಿಮ್ಮ ಕಲ್ಯಾಣ ಮಾಡಿಕೊಳ್ಳಿ. ಕರ್ಮಗಳ ರಾಸಿ ಒಂದೇ ದಿನದಲ್ಲಿಸುಟ್ಟು ಹೋಗುವುದಿಲ್ಲ."

ಯಾವುದು ಬಹುಮೂಲ್ಯ

ಒಂದು ದಿನ ಬಾಹ್ಯ ಸಂಪತ್ತಿನೊಡನೆ ಸಂಯಮವನ್ನು ತೂಗಿ ನೋಡಿದರು. ಅವರ ದೃಷ್ಟಿಯಲ್ಲಿ ಸಂಸಾರದಲ್ಲಿ ಬಹುಮೂಲ್ಯವಾದುದು ಯಾವುದು ಎಂದು ಆಗ ತಿಳಿಯಿತು.

"ನಮ್ಮ ದೃಷ್ಟಿಯಲ್ಲಿ ಲಕ್ಷಾಧೀಶ, ಕೋಟ್ಯಾಧೀಶರ ಮೂಲ್ಯ ಏನೇನೂ ಇಲ್ಲ. ಲಕ್ಷಾಂತರ ರೂ ದಾನ ಮಾಡುವ ಧನಿಕನಿಗಿಂತ ಈ ಕ್ಷುಲ್ಲಕ (ಸಮತಿಸಾಗರ) ಮಹರಾಜರ ಮೂಲ್ಯ ಬಹಳ ಹೆಚ್ಚಿನದಿದೆ. ಕಾರಣ ಇವರು ಆರಂಭ ಪರಿಗ್ರಹತ್ಯಾಗಿ. ಆದರಿಂದ ಅವರಿಗೆ ಕರ್ಮಗಳ ನಿರ್ಜನ ವಿಶೇಷವಿದೆ"

"ಆದ್ದರಿಂದ ನಾವು ಎಲ್ಲರಿಗೂ ಹೇಳುವುದೇನೆಂದರೆ ವಿಕಾರ ಪೂರ್ಣ ಪ್ರವೃತಿ ತ್ಯಜಿಸಿ ವಿವೇಕಿ ಪುರುಷರಂತೆ ಕಾರ್ಯ ಮಾಡಿರಿ. ಅಜ್ಞಾನಿ ಜನಗಳು ಸಾಧುಗಳನ್ನು ಹುಚ್ಚರಂತೆ ಭಾವಿಸುತ್ತಾರೆ. ಆದರೆ ಸಾಧುಗಳು ಈ ಮೋಹಿ ಜಗತ್ತನ್ನು ಹುಚ್ಚರ ಸಂತೆ ಎಂದು ತಿಳಿಯುತ್ತಾರೆ. ಕಾರಣವೇನೆಂದರೆ ಭೋಗಿ ಮಾನವ ಮಿಥ್ಯಾ ಜಗತ್ತಿನಲ್ಲಿ ದುಃಖಿಯಾಗಿದ್ದಾನೆ. ವಾಸ್ತವವಾಗಿ ಈ ಸಂಸಾರದಲ್ಲಿ ಪ್ರಯೋಗ ನಡೆಸುವುದೇ ಮಿಥ್ಯಾತ್ವವಾಗಿದೆ"

ಪ್ರಕಾಂಡ ಪಂಡಿತರ ತರ್ಕ ವಿತರ್ಕಗಳು ಅವರು ವಿವರದ ಮುಂದೆ ಮೌಲ್ಯರಹಿತವಾಗುತ್ತಿತ್ತು. ಅವರ ಮಾತು ಅನುಭವಗಯ್ಯ. ಅವರ ಮತು ಅನುಭರದ ಆಳದಿಂದ ಯಹೊರಹೊಮ್ಮಿ ಕೇಳುವರ ಹೃದಯಕ್ಕೇ ನಾಟುತ್ತದೆ. ಎಷ್ಟೋ ಜನ ಪಂಡಿತರು, ಶಾಸ್ತ್ರಿಗಳು, ವಿದ್ವಾಂಸರು ಚೆನ್ನಾಗಿ ಮಾತಾಡಬಲ್ಲರು. ಅವರ ವಿವರಣೆ ಒಂದು ನಾಟಕದ ಪಾತ್ರದಂತೆ ! ಅವರ ಮಾತು ಅನುಭವಗಮ್ಯವಲ್ಲ. ಆದರೆ ಪೂಜ್ಯ ಆಚಾರ್ಯ ಶ್ರೀಯವರ ಮಾತು ಸ್ವಯಂ ಅವರ ಅನುಭವದಿಂದ ಹೊರಟವುಗಳು. ಅವರು ಒಮ್ಮೆ ಕೆಲವು ಅಭಿಪ್ರಾಯ ವ್ಯಕ್ತ ಮಾಡಿದರು.

"ಸಮ್ಯಗ್ದೃಷ್ಟಿ ಜೀವಿಯ ಪರೀಕ್ಷೆ 'ಆಸ್ತಿಕ್ಯ' ಭಾವನೆಯಿಂದ ಆಗುತ್ತದೆ. ಪ್ರಶಮಾ, ಸಂವೇಗ, ನಿರ್ವೇಗ ಈ ಮೂರು ಗುಣಗಳು ಮಿಥ್ಯಾ ದೃಷ್ಟಿಯಲ್ಲೂ ಇರುತ್ತವೆ. ಆದರೆ ಆಸ್ತಿಕ್ಯ-ಗುಣ ಅವನಲ್ಲಿರುವುದಿಲ್ಲ.

ದೊಡ್ಡ ದೊಡ್ಡ ಪಂಡಿತರ ಪಾಂಡಿತ್ಯ ಸಮ್ಯಕ್ತ್ವ ಸಹಿತವಾಗಿದ್ದರೆ ಮಾತ್ರ

ಕಲ್ಯಾಣ ಕಾರಿ. ಇಲ್ಲವಾದರೆ ಆ ಪಾಂಡಿತ್ಯ ಕಹಿ ಸೋರೆಕಾಯಲ್ಲಿ ಹಾಕಿಟ್ಟ ಹಾಲಿನಂತೆ ಆತ್ಮಘಾತಕಾರಿ !

ನಾನು ಕೇಳಿದೆ : "ಮಹರಾಜ್ ! ವ್ರತಾದಿಗಳ ಕಾಠಿಣ್ಯದ ಬಗ್ಗೆ ವಿಚಾರ ಮಾಡುವುದರಿಂದ ಅದರ ಸರಿಯಾದ ತಿಳುವಳಿಕೆ ನಿಮಗೆ ಹೀಗೆ ಉಂಟಾಗುತ್ತದೆ.

ಅವರು : "ವ್ರತಾದಿಗಳ ಕಠಿಣ ಪ್ರಸಂಗಗಳು ಬರುವುದರಿಂದ ನಮಗೆ ಅಂತಹದ್ದು ಮೊದಲೇ ಅನುಭವಿಸಿರುವಂತೆ ಭಾವನೆ ಬರುತ್ತದೆ. ಪೂರ್ವ ಸಂಸ್ಕಾರದ ಕಾರಣ ಆ ಮಾರ್ಗದಲ್ಲಿ ಕಠಿಣತೆ ದೂರವಾಗುತ್ತದೆ" ಅವರು ಮತ್ತೊಂದು ವಿಚಾರವನ್ನು ತಿಳಿಸಿದರು. "ಸಮಾಯಿಕವಾದ ನಂತರ ನಮ್ಮ ಶಂಕೆಯು ಬಗ್ಗೆ ಚಿಂತನೆ ಮಾಡಿದಾಗ ಸಮಾಧಾನ ಸ್ವಯಂ ಹೊಳೆಯುತ್ತದೆ".

ಕ್ಷಮಾವಳಿಯ ದಿನ ಅವರು ಒಂದು ಮಾತು ಹೇಳಿದರು. "ಸಾಧುವಿನ ಮುಖ್ಯ ಭಾವ ಕ್ಷಮೆ. ಎಂತಹ ಭಯಂಕರ ಕ್ರೋಧ ಉತ್ಪನ್ನವಾಗುವಂತಹ ಪ್ರಸಂಗ ಬಂದರೂ ಸಾಧುವು ಕ್ಷಮೆ ಬಿಡಬಾರದು" ಈ ಮಾತು ಹೇಳುತ್ತಿದ್ದಂತೆಯೇ ಅವರಿಗೆ ಒಬ್ಬ ಪೂರ್ವಪರಿಚಿತ ಮುನಿಯ ನೆನಪು ಬಂತು. ಬಹಳ ಆಗ್ರಹ ಪಡಿಸಿದ ನಂತರ ಹೇಳಿದರು.

"ಒಬ್ಬ ಸಾಧುವಿದ್ದರು. ಒಬ್ಬ ಗೃಹಸ್ಥ ಅಂಜಲಿಗೆ ಉಷ್ಣಕೀರನ್ನು ಹಾಕಿದ. ಅದರ ಉಷ್ಣತೆ ಅಸಹ್ಯವಾಗಿತ್ತು, ಕೂಡಲೇ ಸಿಟ್ಟುಗೊಂಡು ಆ ಸಾಧು ಆ ಕೀರನ್ನು ದಾತೃವಿನ ಮುಖಕ್ಕೇ ಉಗ್ಗಿ ಬಿಟ್ಟರು. ಮುನಿಗಳೆಂದೂ ಹೀಗೆ ಮಾಡಬಾರದು. ಅಸಾತಾ ವೇದನೀಯ ಕರ್ಮದ ತೀವ್ರ ಉದಯವಾದರೂ ಶಾಂತ ಭಾವ ತ್ಯಾಗ ಮಾಡಬಾರದು.

ಸಮಾಧಿ ಸಿದ್ಧತೆ

ಅವರ ಕಣ್ಣಿನ ಜ್ಯೋತಿ ಮಂದಮಂದವಾಗ ತೊಡಗಿತ್ತು, ಅದನ್ನು ಗಮನಿಸಿ ಹೀಗೆಂದರು.

"ಒಂದು ವೇಳೆ ನಮ್ಮ ಕಣ್ಣಿನ ಜ್ಯೋತಿ ಅಧಿಕ ಮಂದವಾದರೆ ನಾವು ಸಮಾಧಿ ತೆಗೆದುಕೊಳ್ಳಲೇಬೇಕಾಗುತ್ತದೆ".

ಆಗ ನಾನು ಹೇಳಿದೆ.

"ಮಹರಾಜ್ ! ಶರೀರದಲ್ಲಿ ಇನ್ನೂ ಶಕ್ತಿ ಇದೆ. ಆದಾಗ್ಯೂ ಕೇವಲ ದೋಷ ಒಂದರಿಂದಲೇ ಆಹಾರ ತ್ಯಾಗ ಮಾಡಿ ಪ್ರಾಣಗಳನ್ನು ವಿಸರ್ಜಿಸುವುದು ಆತ್ಮ ಹತ್ಯೆ ಆಗುವುದಿಲ್ಲವೇ ?"

ಅವರು ಹೇಳಿದರು "ನಿರ್ದೋಷ ರೀತಿಯಿಂದ ಮಹಾವ್ರತಗಳನ್ನು ಪಾಲಿಸುವುದು ನಮ್ಮ ಕರ್ತವ್ಯವಾಗಿದೆ. ಯಾವಾಗ ದೃಷ್ಟಿ ಬಹಳ ಕ್ಷೀಣವಾಗಿ ಬಿಡುವುದೋ ಆಗ ನಾವು ಜೀವಗಳ ರಕ್ಷಣೆಯನ್ನು ಪೂರ್ಣವಾಗಿ ಮಾಡಲಾರೆವು. ಆಗ ನಮಗೆ ಉಳಿಯುವ ಏಕಮಾತ್ರ ಅನ್ಯಮಾರ್ಗವೆಂದರೆ ನಾವು ಈ ಅಹಿಂಸಾ ಧರ್ಮ ರಕ್ಷಣಾರ್ಥ ಶರೀರಕ್ಕೆ ಅನ್ನ ಪಾನ ಕೊಡುವುದು ಬಂದ್ ಮಾಡುವುದು. ಇದರಲ್ಲಿ ಆತ್ಮ ಘಾತದ ಮಾತೆಲ್ಲಿದೆ ? ಆಹಾರ ತ್ಯಾಗ ವ್ರತಗಳ ನಿರ್ದೋಷ ಪಾಲನೆಗಾಗಿ ಇದೆ."

ಆಗ ಯಾರೋ ಒಬ್ಬರು ಹೇಳಿದರು.

"ಜ್ಯೋತಿಷಿ ಕರೆದು ತಮ್ಮ ಆಯುಸ್ಸು ತಿಳಿದುಕೊಳ್ಳಬಹುದಲ್ಲ"

ಅವರೆಂದರು "ಜ್ಯೋತಿಷಿಯ ಮೇಲೆ ನಮಗೆ ವಿಶ್ವಾಸವಿಲ್ಲ. ಅವನೇನು ಕೇವಲಿಯೋ, ಶ್ರುತಕೇವಲಿಯೋ ? ಇನ್ನೂ ಒಂದು ಮುಖ್ಯ ಮಾತೆಂದರೆ ನಮ್ಮ ಜೀವಿತ ಇನ್ನೂ ಹೆಚ್ಚುಕಾಲ ಜೋತಿಷಿ ಪ್ರಕಾರ ಇದ್ದು, ದೃಷ್ಟಿ ಹೋಗುವುದಾದರೆ ಏನು ಪ್ರಯೋಜನ ? ನಾವು ಅಂತಹ ಜೀವನವನ್ನು ಸಮಾಪ್ತ ಮಾಡಬೇಕಾಗುತ್ತದೆ" ವರ್ತಮಾನದ ಡೋಂಗಿ ಜೋತಿಷಿಗಳನ್ನು ಲಕ್ಷ್ಯದಲ್ಲಿಟ್ಟು ಈ ಮಾತು ಹೇಳಿರಬೇಕು. ಆದರೆ ನಿಜವಾದ ಜೋತಿಷ್ಯ ದ್ವಾದಶಾಂಗ ವಾಣಿಯ ಒಂದು ಅಂಗ. ಜ್ಯೋತಿಷ್ಯದಿಂದ ಬಾಹ್ಯ ನಿಮಿತ್ತದ ಸಹಾಯದಿಂದ ಸ್ಥೂಲ ವಿಚಾರಗಳನ್ನು ತಿಳಿಯಲು ಸಾಧ್ಯವಿದೆ. ಆದರೆ ಅಂತಹ ಜ್ಞಾನಿಗಳು ಈಗ ಯಾರೂ ಇಲ್ಲ. ಈಗಿರುವ ಜೋತಿಷಿಗಳೆಲ್ಲಾ ಹೊಟ್ಟೆಪಾಡಿಗಾಗಿ ಜನರಂಜಿಸುವರು ಮಾತ್ರ.

ಸಮಾಧಿಗಾಗಿ ಮುನಿಗಳು ಸಿದ್ಧ ಕ್ಷೇತ್ರವನ್ನು ಆರಿಸಿಕೊಳ್ಳುತ್ತಾರೆಂದು ಶಾಸ್ತ್ರದಲ್ಲಿ ಹೇಳಿದೆ. ಆದ್ದರಿಂದ ಅವರಿಗೆ ಯಾವ ನಿರ್ವಾಣ ಭೂಮಿ ಮನಸ್ಸಿನಲ್ಲಿ ಇರಬಹುದು

ಎಂದು ನನ್ನ ಮನಸ್ಸಿಗೆ ಹೊಕ್ಕಿತು. ಅವರು ವೀತರಾಗ ಭಾವದ ಬಂಡಾರವೇ ಆಗಿದ್ದರು. ಅವರಅನುಭವ ಅತ್ಯಧಿಕವಾಗಿತ್ತು. ಅವರು ಭವಸಿಂಧುವಿನಲ್ಲಿ ಸುತ್ತುತ್ತಿರುವ ಜೀವಿಗಳೆಂಬ ನಾವಿಕರಿಗೆ ಪ್ರಕಾಶ ಸ್ಥಂಭದಂತಿದ್ದರು. ಹೇಗೆ ಸಮುದ್ರ ಅಗಣಿತ ರತ್ನಗಳನ್ನು ಹೊಟ್ಟೆಯಲ್ಲಿ ಹೊತ್ತು ಬಾಹ್ಯದಲ್ಲಿ ಬಡವನಂತೆ ಕಾಣುವುದೋ ಹಾಗೆ ಅವರು ಗುಣ ರತ್ನಾಕರರಾಗಿದ್ದರೂ ನಿರಾಡಂಬರವಾಗಿದ್ದರು. ಅವರ ಹೃದಯದ ಆಳ ಬಾಹ್ಯ ಜಗತ್ತಿಗೆ ಎಂದೂ ತಿಳಿಯದು. ಶಾಂತಿಯ ಸಿಂಧು, ಕ್ಷಪಕ ರಾಜ, ಮುನಿಮಾರ್ಗ ಪ್ರಪಿತಾಮಹ, ಆಚಾರ್ಯ ಶಾಂತಿಸಾಗರರ ಜೀವನ ಮತ್ತು ಧ್ಯೇಯ, ಸಾಧನೆಸಿದ್ಧಿಗಳು ಅಲ್ಪಮಟ್ಟಿಗಾದರೂ ಈ ಸ್ಮೃತಿ ಗ್ರಂಥದಿಂದ ಜಗತ್ತಿಗೆ ತಿಳಿದೀತೆಂದು ನನಗೆ ವಿಶ್ವಾಸವಿದೆ.

ನಾನು ಹೇಳಿದೆ

ನೀವು ನನ್ನ ಮೇಲೆ ಧವಲ ಮಹಾಧವಲ ಗ್ರಂಥಗಳ ಸಂಪಾದನೆಯ ಪವಿತ್ರ ಭಾರವನ್ನು ಹೊರಿಸಿದ್ದೀರಿ. ಇನ್ನೂ ಅನೇಕ ಗ್ರಂಥಗಳ ಸಂಪಾದನೆಯೂ ನಡೆಯುತ್ತಿದೆ. ನಿಮ್ಮ ಶುಭಾಶೀರ್ವಾದದಲ್ಲಿ ದಿವ್ಯಶಕ್ತಿ ತುಂಬಿದ್ದು ಆದರಿಂದ ನನ್ನ ಕರ್ತವ್ಯ ನಿರ್ವಹಿಸಲು ಸಾಮರ್ಥ್ಯ ಬಂದೀತೆಂದು ನಿಮ್ಮ ಶುಭಾಶೀರ್ವಾದ ಬೇಡುತ್ತಿದ್ದೇನೆ.

ಅವರು ಹೇಳಿದರು

"ನಾವು ನಿನಗೆ ಆಶೀರ್ವಾದ ಕೊಡಲೊಲ್ಲೆವೇಕೆ ? ನೀನು ಜಿನಧರ್ಮದ ಸೇವೆ ಸದಾ ಮಾಡುತ್ತಿದ್ದೀಯೆ. ನಮ್ಮ ಆಶೀರ್ವಾದವಾದರೋ ನಮ್ಮ ಪ್ರಾಣಹರಣ ಮಾಡುವವರ ಮೇಲೂ ಇದೆ. ನಮ್ಮನ್ನು ವಿರೋಧಿಸುವವರಿಗೂ ಇದೆ. ಅವರಾತ್ಮನ ಮಿಥ್ಯಾತ್ವ ದೂರಾಗಿ ಮಂಗಲಮಯ ಧರ್ಮಕ್ಕೆ ಶರಣಾಗಲಿ ಎನ್ನುವುದೇ ನಮ್ಮ ಹಾರೈಕೆ. ಆತ್ಮನ ನೈಜ ಹಿತ ಧರ್ಮಕ್ಕೆ ಶರಣಾಗುವುದರಲ್ಲಿದೆ".

ಅವರ ಅಮೃತ ವಾಣಿ ಕೇಳಿ ಮನಸ್ಸು ತಣ್ಣಗಿತ್ತು. ನನ್ನ ಇಚ್ಛೆ ಸಂದಿತ್ತು.

ಸಲ್ಲೇಖನ ೧೨

ಭವಿಷ್ಯದಲ್ಲಿ ಏನಾದೀತೆಂದು ಯಾರು ಬಲ್ಲರು? ಭವಿಷ್ಯದ ಆಗುಹೋಗುಗಳು ಹೀಗೇ ಎಂದು ಊಹಿಸಲು ಸಾಧ್ಯವಿಲ್ಲ. ವಿಧಿಯ ನಿಯಮ ವಿಚಿತ್ರವಾಗಿದೆ. ನಾವು ತಿಳಿದುಕೊಂಡಿದ್ದು ಆಗುವುದಿಲ್ಲ. ಆಗಬಾರದು ಆಗಿ ಬಿಡುತ್ತದೆ. ಈ ಬಗ್ಗೆ ಸುಭಾಷಿತ ಹೀಗೆ ಹೇಳುತ್ತದೆ.

ಅಘಟಿತ ಘಟಿತಂ ಘಟಯತಿ ಸುಘಟಿತಂ ಘಟಿತಂ ಜರ್ಜರೀ ಕುರುತೇ ||

ವಿಧಿದೇವ ತಾನಿ ಘಟಯತಿ ಯಾನಿ ನರೋ ನೈವ ಚಿಂತಯತಿ ||

ವಿಧಿಯು ಒಳ್ಳೆಯ ಘಟನೆಗಳನ್ನು ವಿಘಟಿತ ಮಾಡುತ್ತದೆ. ಅಘಟಿತ ಘಟನೆಗಳನ್ನು ನಿರ್ಮಾಣ ಮಾಡುತ್ತದೆ.

ಯಮ ಸಲ್ಲೇಖನ

ಸ್ವರ್ಗೀಯ ಆಚಾರ್ಯ ಶಾಂತಿಸಾಗರ ಮಹಾರಾಜರ ಚರಣಗಳಲ್ಲಿ ನಿವಾಸಿಸಲು ಮನಸ್ಸು ಹಾತೊರೆಯುತ್ತಿತ್ತು. ಅವರು ಯಮ ಸಲ್ಲೇಖನ ಸ್ವೀಕರಿಸುವುದಾದರೆ ಮೊದಲ ನಿಯಮ ಸಲ್ಲೇಖನ ತೆಗೆದುಕೊಂಡಾರು ಅಂದುಕೊಂಡಿದ್ದೆ. ಅವರ ಭಾವವೂ ಹಾಗೇ ಇತ್ತು. ಅವರು ಸದ್ಯದಲ್ಲೇ ನಿಯಮ ಸಲ್ಲೇಖನಾ ತೆಗೆದುಕೊಳ್ಳಬಹುದೆಂದು ಊಹಿಸಿಯೂ ಇದ್ದೆ. ಆದರೆ ಶ್ರವಣರಾಜ, ಆಚಾರ್ಯ ಶಾಂತಿಸಾಗರ ಮಹರಾಜರು ಯಮಸಲ್ಲೇಖನ ತೆಗೆದುಕೊಂಡುಬಿಟ್ಟಿದ್ದರು. ಅದನ್ನು ನಾನು ಸ್ವಪ್ನದಲ್ಲಿಯೂ ಎಣಿಸಿರಲಿಲ್ಲ. ಅದನ್ನು ತೆಗೆದುಕೊಂಡು ನಾಲ್ಕು ದಿನಗಳು ಉರುಳಿದ್ದವು. ಕುಂಥಲಗಿರಿಯಿಂದ ನನಗೆ ಯಾವ ಸಮಾಚಾರವೂ ಬಂದಿರಲಿಲ್ಲ.

೧೯೫೫ ಆಗಸ್ಟ ೨೨ ರ ಮಧ್ಯಾಹ್ನ ಫಲಟನ್ ಇಂದ್ರರಾಜ ಗಾಂಧಿಯವರಿಂದ ನನಗೆ ತಂತಿ ಬಂದಿತು. ವಿಚಾರ ಹೀಗಿತ್ತು.

"Acharya Maharaj started yama sallekhana from four days. Start first train Kunthalagiri"

"ಆಚಾರ್ಯ ಮಹಾರಾಜರು ನಾಲ್ಕು ದಿನಗಳಿಂದ ಯಮ ಸಲ್ಲೇಖನ ಸ್ವೀಕರಿಸಿದ್ದಾರೆ. ಮೊದಲ ಟ್ರೈನ್‌ನಲ್ಲೇ ಕುಂಥಲಗಿರಿಗೆ ಹೊರಡಿರಿ"

ನಾನು ಅವಾಕ್ಕಾಗಿ ಹೋದೆ. ಕಂಗೆಟ್ಟು ಹೋದೆ. ಮಾನಸಿಕವಾಗಿ ಇದನ್ನು ಸ್ವೀಕರಿಸಲು ಸಿದ್ಧನಿರಲಿಲ್ಲ. ಜಗತ್ತೇ ಬರಿದಾದಂತೆ ಕಂಡಿತು. ಆಧಾರವೇ ಕುಸಿಯುತ್ತಿರುವಂತೆ ಭಾಸವಾಯಿತು. ತಂತಿ ಓದುತ್ತಾ ಹೋದಂತೆ ಕಣ್ಣು ಮಂಜಾದವು. ಗಡಿಬಿಡಿಯಿಂದ ಕುಂಥಲಗಿರಿಯತ್ತ ಹೊರಟೆ.

ಅವರ ದಿವ್ಯ ಸಾನಿಧ್ಯ, ಅವರೊಡನೆ ಕಳೆದ ದಿನಗಳು, ಅವರ ತೇಜಃಪುಂಜ ನಿಲುವು; ಶಾಂತಮಯ ಮುಖಮುದ್ರೆ, ಇವೆಲ್ಲವೂ ಇನ್ನು ಭೂತಕಾಲಕ್ಕೆ ಸೇರಿ ಹೋಗುವವಲ್ಲ ಎಂದು ನೆನೆದು ಅವರ್ಣನೀಯ ವೇದನೆ ಹುಟ್ಟತೊಡಗಿತು ನೂರಾರು ಚಿಂತೆಯ ಭಾರ ಹೊತ್ತು ರಾತ್ರಿ ೨.೩೦ ಗಂಟೆಗೆ ಕುಂಥಲಗಿರಿಗೆ ಹೋದೆ. ಆಗ ಭಾರಿ ಮಳೆ ಸುರಿಯುತ್ತಿತ್ತು.

ಬೆಳಗ್ಗೆ ಪರ್ವತವೇರಿ ಪೂಜ್ಯಶ್ರೀಯವರ ದರ್ಶನ ಮಾಡಿದೆ. ಅವರು ನನ್ನನ್ನು ನೋಡಿ ಪ್ರಸನ್ನರಾಗಿ ಹೇಳಿದರು.

"ಬಹಳ ಸಮಯದನಂತರ ಬಂದಿರಿ. ನೀವು ಬಂದದ್ದು ಒಳ್ಳೆಯದಾಯಿತು. ಬಂದು ಒಳ್ಳೆಯದು ಮಾಡಿದಿರಿ. ಬಂದದ್ದು ಒಳ್ಳೆಯದಾಯಿತು" ಈ ರೀತಿ ನಾಲ್ಕು ಬಾರಿ ಶಬ್ದೋಚ್ಚಾರ ಮಾಡಿದರು. ಅದರಿಂದ ನನ್ನ ಬಗ್ಗೆ ಅವರಿಗೆ ಎಂತಹ ಕರುಣಾಭಾವ ಇತ್ತೆಂದು ನನಗೆ ತಿಳಿಯಿತು.

ನಾನು ಮೆಲ್ಲಗೆ ಹೇಳಿದೆ–

"ಮಹರಾಜ್ ಶ್ರೇಷ್ಠ ತಪಸ್ವರೂಪ ಯಮಸಲ್ಲೇಖನದಂತಹ ಮಹಾನ್ ನಿಶ್ಚಯವನ್ನು ಮಾಡಿ ನೀವು ಜಗತ್ತನ್ನು ಆಶ್ಚರ್ಯಚಕಿತಗೊಳಿಸಿದ್ದೀರಿ. ಈ ಸಂದರ್ಭದಲ್ಲಿ ತಮ್ಮ ಸೇವೆಗಾಗಿ ಬಂದಿದ್ದೇನೆ. ಇದು ನನ್ನ ಅನುಪಮ ಸೌಭಾಗ್ಯ. ಶಾಸ್ತ್ರವನ್ನು ಓದುವ, ಹೇಳುವ ಮತ್ತು ಸೇವೆ ಮಾಡುವ ಕಾರ್ಯಕ್ಕಾಗಿ ಸಿದ್ಧನಿದ್ದೇನೆ.

ಪೂರ್ಣ ಸ್ವಾವಲಂಬಿ

ಆಗ ಅವರು ಹೇಳಿದರು : "ಈಗ ನಮಗೆ ಶಾಸ್ತ್ರಗಳು ಬೇಕಾಗಿಲ್ಲ ಜೀವನವೆಲ್ಲಾ ಎಲ್ಲಾ ಶಾಸ್ತ್ರ ಓದಿದ್ದೇವೆ. ಚೆನ್ನಾಗಿ ಕೇಳಿದ್ದೇವೆ. ಕಂಠ ಪೂರ್ತಿ ತುಂಬುವಷ್ಟು ಕೇಳಿದ್ದೇವೆ. ಈಗ ನಮಗೆ ಶಾಸ್ತ್ರಗಳ ಅವಶ್ಯಕತೆ ಇಲ್ಲ. ನಮಗೀಗ ಆತ್ಮನ ಚಿಂತನೆ ಮಾತ್ರ ಬೇಕಾಗಿದೆ. ನಾವು ಈ ವಿಷಯದಲ್ಲಿ ಸ್ವಯಂ ಸಾವಧಾನವಾಗಿದ್ದೇವೆ. ನಮಗೆ ಯಾವ ಸಹಾಯವೂ ಬೇಕಿಲ್ಲ."

ಅವರ ವೀತರಾಗಪೂರ್ಣ ವಾಣಿ ಕೇಳಿ ಬಹಳ ಆನಂದವಾಯಿತು. ಅವರ ಜೀವನವೆಲ್ಲಾ ಶಾಸ್ತ್ರಾಧ್ಯಯನದಿಂದ ತುಂಬಿ ಹೋಗಿತ್ತು. ಅವರ ಶರೀರದ ಕಣಕಣದಲ್ಲೂ ಜಿನವಾಣಿ ತುಂಬಿ ಹೋಗಿತ್ತು. ಅವರ ಉಸಿರಾಟವೇ ಜಿನವಾಣಿಯಾಗಿತ್ತು. ಅಂತಹ ಮಹಾನ್ ಆತ್ಮನಿಗೆ ಬಾಹ್ಯದ ನೆರವೆಂದರೆ ಕೇವಲ ಉಪಚಾರ ಮಾತ್ರ. ಅದು ನಮ್ಮ ವಿನಯ ಭಕ್ತಿಯ ಸಂಕೇತ ಮಾತ್ರ.

ತಾ. ೨೪ರ ಆಗಸ್ಟ್ ಅಷ್ಟಮಿಯ ದಿನ ಸಲ್ಲೇಖನ ತೆಗೆದುಕೊಂಡು ಎಂಟು ದಿನವಾಗಿತ್ತು. ನಾನು ಆಗ ಸಾವಧಾನವಾಗಿ ಕೇಳಿದೆ "ಮಹರಾಜ್ ನಿದ್ರೆ ಗಂಟೆ, ಎರಡು ಗಂಟೆ ಬರುತ್ತದೋ ಹೇಳಿ" ಅವರು ಹೇಳಿದರು: ನಿದ್ರೆ ಬರುವುದು ಅಲ್ಪ.

ನಾನು : ಆತ್ಮಧ್ಯಾನದ ಸ್ಥಿತಿ ಹೇಗಿದೆ ?"

ಅವರು :– "ಆತ್ಮಧ್ಯಾನ ಸತತವಾಗಿ ನಡೆದಿದೆ"

ಉತ್ತರಾಧಿಕಾರಿ ವೀರಸಾಗರ ಮುನಿ

ತಾ.೨೬ ರಂದು ಪೂಜ್ಯಶ್ರೀಯವರು ವೀರಸಾಗರ ಮುನಿಗಳಿಗೆ ಆಚಾರ್ಯ ಪದವನ್ನು ವರ್ಗಾಯಿಸಿದರು. ಅವರ ಪ್ರರೂಪಣೆಯನ್ನು ಆಚಾರ್ಯಶ್ರೀಯವರ ಭಾವಾನುಸಾರ ನಾನೇ ಬರೆದೆ. ಭಟ್ಟಾರಕ ಲಕ್ಷ್ಮೀಸೇನರು ಕೊಲ್ಹಾಪುರ, ಇವರ ಪರಮಾರ್ಶದೊಡನೆ ಯಥಾಯೋಗ್ಯ ಪರಿವರ್ತನಪಡಿಸಿ ಅಂತಿಮವಾಗಿ ಆಚಾರ್ಯಶ್ರೀಯವರಿಗೆ ಓದಿ ಹೇಳಲಾಯಿತು. ಅವರು ಒಂದು ಅತ್ಯಂತ ಉಪಯುಕ್ತ ತಿದ್ದುಪಡಿ ಸೂಚಿಸಿದರು. "ನಾವು ಸ್ವಯಂ ಸಂತೋಷದಿಂದ ನಮ್ಮ ಪ್ರಥಮ ನಿರ್ಗ್ರಂಥ ಶಿಷ್ಯ ವೀರಸಾಗರರಿಗೆ ಆಚಾರ್ಯ ಪದವಿಯನ್ನು ಕೊಡುತ್ತಿದ್ದೇವೆ."

ಆಚಾರ್ಯ ವೀರಸಾಗರರಿಗೆ ಸಂದೇಶ

ಆಚಾರ್ಯ ವೀರಸಾಗರರಿಗೆ ಈ ಮಹತ್ಪೂರ್ಣ ಸಂದೇಶ ಕಳಿಸಿದರು.

"ಆಗಮಾನುಸಾರ ಪ್ರವೃತ್ತಿ ಮಾಡಬೇಕು. ನಮ್ಮ ಹಾಗೆಯೇ ಸಮಾಧಿ ಧಾರಣೆ ಮಾಡಬೇಕು ಮತ್ತು ಸುಯೋಗ್ಯ ಶಿಷ್ಯನಿಗೆ ಉತ್ತರಾಧಿಕಾರ ಕೊಟ್ಟು ಪರಂಪರೆಯನ್ನು ಸರಿಯಾಗಿ ಸಂಚಾಲನೆ ಮಾಡಬೇಕು."

ಅವರು ನಂತರ ನಮಗೆ ಹೀಗೆ ಹೇಳಿದರು.

"ವೀರ ಸಾಗರರು ಬಹಳ ದೂರಿದ್ದಾರೆ. ಇಲ್ಲಿಗೆ ಈಗ ಬರಲಾರರು. ಇಲ್ಲದಿದ್ದರೆ ಇಲ್ಲಿಗೇ ಕರೆಸಿ ಅವರಿಗೆ ಆಚಾರ್ಯಪದ ಕೊಡುತ್ತಿದ್ದವು." ವೀರಸಾಗರರಿಗೆ ಮತ್ತೆ ಹೀಗೆ ಸಂದೇಶ ತಿಳಿಸಲು ಹೇಳಿದರು. "ವೀರಸಾಗರರಿಗೆ ನಮ್ಮ ಆಶೀರ್ವಾದ ತಿಳಿಸಿ. ಶಾಂತಭಾವ ಇಡಿ. ಶೋಕ ಮಾಡುವ ಅವಶ್ಯಕತೆ ಇಲ್ಲ ಎಂದು ತಿಳಿಸಿ."

ಆಗ ಅವರು ಹೇಳುತ್ತಿದ್ದ ಒಂದೊಂದು ಶಬ್ದವೂ ಜೀವ ತುಂಬಿ ಹೊರಬರುತ್ತಿದ್ದವು. ಅವರ ವಾಕ್ಯಗಳು ಚೈತನ್ಯದ ಉದ್ಘೋಷವಾಗಿತ್ತು

ಕ್ಷು.ಸಿದ್ಧಸಾಗರರಿಗೆ (ಬ್ರ.ಬರ್ಮಪ್ಪ) ಪೂಜ್ಯಶ್ರೀಯವರು ಹೇಳಿದರು. "ರೈಲು ಮೋಟಾರ್‌ನಲ್ಲಿ ವಿಹರಿಸಬೇಡ. ಸ್ವರ್ಗಕ್ಕೆ ಬಂದರೆ ನಮ್ಮ ಜೊತೆಯಲ್ಲೇ ಇರುತ್ತೀಯೆ "

ಅವರು ಭವಿಷ್ಯದ ಗರ್ಭವನ್ನು ಹೊಕ್ಕು ನೋಡಿದಂತೆ ನುಡಿಯುತ್ತಿದ್ದರು. ತ್ರಿಕರಣಶುದ್ಧಿಯ ತಪಸ್ಸಿಗೆ ಭವಿಷ್ಯದ ಗೂಢಾರ್ಥಗಳು ಕಣ್ಣಿಗೆ ಕಟ್ಟಿದಂತೆ ಭಾಸವಾಗುತ್ತವೆ.

ಅದ್ಭುತ ದೃಶ್ಯ

ಸಲ್ಲೇಖನದ ೧೨ನೇ ದಿನ. ಜಲಪಾನಕ್ಕೆ ಅವರು ಎದ್ದರು. ಪಂಚಾಮೃತ ಅಭಿಷೇಕ ಚಿತ್ತವಿಟ್ಟು ನೋಡಿದರು. ನಂತರ ಚರ್ಯೆಗೆ ಹೊರಟರು. ಸಾವಿರಾರು ಜನ ಜಯಘೋಷ ಮಾಡುತ್ತಾ ಆ ಮಹಾಯೋಗಿಯ ದರ್ಶನ ಪಡೆದರು. ನವದಾ ಭಕ್ತಿಯಿಂದ ಅಂಜಲಿಯಲ್ಲಿ ಕೊಟ್ಟ ಜಲವನ್ನು ಸ್ವೀಕರಿಸಿ ಕೂಡಲೇ ಕುಳಿತುಬಿಟ್ಟರು. ಕೆಲ ಸಮಯದ ನಂತರ ಎದ್ದು ನಿಧಾನವಾಗಿ ತಮ್ಮ ಕುಟಿಯತ್ತ ತೆರಳಿ ಕೂಡಲೇ ಆತ್ಮಧ್ಯಾನದಲ್ಲಿ ಮಗ್ನರಾದರು. ಆತ್ಮ ಚಿಂತನೆ ಅವರ ಪ್ರಿಯ ಕಾರ್ಯವಾಗಿತ್ತು. ಸಂಸಾರದಲ್ಲಿ ಅದು ಅತ್ಯಂತ ಕಠಿಣವಾಗಿತ್ತು. ಅವರು ಓರ್ವ ಮಹಾ ಸಾಧಕರಾಗಿದ್ದರು. ಅವರ ಸಾಧನೆ ದೇಶ ಕಾಲಗಳನ್ನು ಮೀರಿ ಯುಗ ಯುಗಗಳವರೆಗೆ ಪ್ರಸರಿಸಿತ್ತು.

ಸ್ವಾಧ್ಯಾಯ ಪ್ರೇರಣೆ

ಒಮ್ಮೆ ಅವರು ಸ್ನಿಗ್ಧ ಸ್ವರದಲ್ಲಿ ನನಗೆ ಹೇಳಿದರು.

"ಧರ್ಮದಲ್ಲಿ ಅವಿಚಲ ಶ್ರದ್ಧೆ ಇಡು" ಸುಧಾರಿಸಿಕೊಂಡು ಮತ್ತೆ ಹೇಳಿದರು. "ಸ್ವಾಧ್ಯಾಯ ಮಾಡು. ಅದೇ ತಪಸ್ಸು. ಶಾಸ್ತ್ರಾಭ್ಯಾಸದಿಂದಲೇ ಆತ್ಮಕಲ್ಯಾಣ"

ಬಡವರು ಶಾಸ್ತ್ರ ಕೊಂಡುಕೊಳ್ಳಲಾರರು. ಅವರಿಗೆ ಶಾಸ್ತ್ರದಾನ ಮಾಡಿರಿ. ಶಾಸ್ತ್ರದಾನದಲ್ಲಿ ಮಹಾನ್ ಪುಣ್ಯವಿದೆ. ಜಿನವಾಣಿಯ ಮೂಲಕ ಸಮ್ಯಗ್ದರ್ಶನದ ಲಾಭವಾಗುತ್ತದೆ.

ಆತ್ಮ ಧ್ಯಾನ

"ಆತ್ಮಧ್ಯಾನ ಮಾಡು" ಈ ಮಾತನ್ನು ಅವರು ಎರಡು ಅಥವಾ ಮೂರು ವರ್ಷದಿಂದಲೂ ಹೇಳುತ್ತಲೇ ಇದ್ದರು. ಅವರು ೧೯೫೪ ರ ಪಲ್ಟಣ್ ಚಾತರ್ಮಾಸದಲ್ಲಿ ಎಲ್ಲರನ್ನು ಕರೆಸಿ ಹೇಳಿದರು. "ನೀವು ನಮ್ಮ ಚಾತುರ್ಮಾಸ ಇಲ್ಲೇ ಆಗಬೇಕೆಂದು ಬಯಸುವಿರಾದರೆ ನಮ್ಮ ಒಂದು ಮಾತನ್ನುನೀವು ಅಂಗೀಕರಿಸಬೇಕಾಗುತ್ತದೆ" ಎಲ್ಲರೂ ಅವರ ಮಾತನ್ನು ನಡೆಸಿಕೊಡಲು ವಚನವಿತ್ತರು. ಆಗ ಹೀಗೆ ಹೇಳಿದರು. "ಸ್ತ್ರೀ ಪುರುಷರಾದಿಯಾಗಿ ಪ್ರತಿಯೊಬ್ಬರೂ ಕಡಿಮೆಯಿಂದ ಕಡಿಮೆ ಐದು ನಿಮಿಷಗಳವರೆಗಾದರೂ ಆತ್ಮಧ್ಯಾನ ಮಾಡುವುದಾಗಿ ಪ್ರತಿಜ್ಞೆ ಮಾಡಿದರೆ ನಿಮ್ಮ ನಗರದಲ್ಲೇ ಚಾತುರ್ಮಾಸ ಮಾಡದೆ ಅನ್ಯಮಾರ್ಗವೇ ನಮಗೆ ಉಳಿಯುವುದಿಲ್ಲ".

ಶ್ರೇಷ್ಠ ಸಂತನ ಸಾನಿಧ್ಯಕ್ಕಿಂತ ದೊಡ್ಡದು ಇನ್ನೊಂದಿಲ್ಲ ಎಂದು ತಿಳಿದು ಎಲ್ಲರೂ ಅವರ ಆಜ್ಞೆಯನ್ನು ಶಿರೋಧಾರ್ಯವೆಂದು ತಿಳಿದು ಒಪ್ಪಿಕೊಂಡರು.

ಆತ್ಮಾನುಭವದ ಚರ್ಚೆ

ಆತ್ಮಾನುಭವದ ಬಗ್ಗೆ ಅವರು ಒಂದು ದಿನ ಸುಂದರ ಚರ್ಚೆ ನಡೆಸಿದರು. ಅದನ್ನು ಕೇಳಿ ಎಲ್ಲರೂ ಆನಂದಭರಿತರಾದರು. ನಾನು ಕೇಳಿದೆ:- "ಮಹರಾಜ್ ನೀವು ಆತ್ಮಾನುಭವದ ಮೇಲೆ ಚರ್ಚೆಯನ್ನು ನಿಮ್ಮ ಅನುಭವದ ಆಧಾರದ ಮೇಲೆ ಮಾಡುವಿರೋ ಇಲ್ಲವೇ ಆಗಮದ ಅನುಸಾರ ಮಾಡುತ್ತೀರೋ?

ಆಗ ಅವರು ಹೇಳಿದರು: "ಈ ಮಾತನ್ನು ನಾವು ನಮ್ಮ ಅನುಭವದ ಆದಾರದ ಮೇಲೆಯೇ ಹೇಳುತ್ತೇವೆ." ಹೀಗೆ ಹೇಳುವಾಗ ಅವರ ಮುಖದಲ್ಲಿ ಗಾಂಭೀರ್ಯ ತುಂಬಿತ್ತು. ಇಂತಹ ಕಠಿಣ ಕಾಲದಲ್ಲೂ ಆತ್ಮಾನುಭವ ಮಾಡುವ ಒಬ್ಬ ಯೋಗಿಯನ್ನು ನೋಡುವುದು ನಮ್ಮೆಲ್ಲರ ಪುಣ್ಯ.

ಅವರು ಹೇಳಿದರು. "ನಿಕಟ ಭವ್ಯನಿಗೆ ಆತ್ಮಸ್ವರೂಪದ ಅನುಭವ ಆಗುತ್ತದೆ. ದೀರ್ಘ ಸಂಸಾರಿಗಳಿಗೆ ಆತ್ಮಾನುಭವ ಆಗುವುದಿಲ್ಲ. ಯಾರು ಭವ್ಯರು, ಯಾರು ಅಭವ್ಯರು ಎನ್ನುವುದು ಸರ್ವಜ್ಞರೇ ಬಲ್ಲರು. ಅಭವ್ಯನೂ ಮುನಿಯಾಗಬಲ್ಲ. ಏಕದಶಾಂಗದವರೆಗೂ ತಿಳಿಯಬಲ್ಲ. ಆದರೆ ಅಂತರಂಗದಲ್ಲಿ ದೃಢ ಶ್ರದ್ಧೆ ಇರುವುದಿಲ್ಲ".

ಆಗ ನಾನು ಮಾಘನಂದಿ ಆಚಾರ್ಯರ ಶ್ಲೋಕ ಓದತೊಡಗಿದೆ.

"ಚಿದಾನಂದ ಸ್ವರೂಪೋಹಂ"– ನಾನು ಚಿದಾನಂದ ಸ್ವರೂಪನಾಗಿದ್ದೇನೆ.

"ಜ್ಞಾನಜ್ಯೋತಿ ಸ್ವರೂಪೋಹಂ"– ನಾನು ಜ್ಞಾನಜ್ಯೋತಿ ಸ್ವರೂಪನಾಗಿದ್ದೇನೆ.

"ಅನಂತಸ್ವರೂಪೋಹಂ"– ನಾನು ಅನಂತಶಕ್ತಿ ಸ್ವರೂಪನಾಗಿದ್ದೇನೆ.

"ಸಿದ್ಧ ಸ್ವರೂಪೋಹಂ"– ನಾನು ಸಿದ್ಧ ಸ್ವರೂಪನಾಗಿದ್ದೇನೆ.

ಇದನ್ನು ಕೇಳಿ ಅವರು ಹೀಗೆಲ್ಲಾ ಹೇಳುವುದರಿಂದಲೇ ಆತ್ಮನ ಯಥಾರ್ಥಸ್ವರೂಪ ಹೇಳಿದಂತಾಗಲಿಲ್ಲ. ಅನುಭವದ ಅವಸ್ಥೆಯೇ ಬೇರೆ ಇರುತ್ತದೆ. ಯಾವಾಗ ಆತ್ಮನು ಜ್ಞಾನಾದಿಗುಣ ಪರಿಪೂರ್ಣನೋ ಆಗ ನೀನು ಆಗಿಂದಾಗ್ಗೆ 'ಅಹಂ' ಎಂದು ಏಕೆ ಹೇಳುತ್ತೀಯೆ?ನಾನು ಏನಾಗಿದ್ದೇನೋ ಅದೇ ಆಗಿದ್ದೇನೆಂದು ತಿಳಿ. ಸುಮ್ಮನೆ 'ನಾನು' 'ನಾನು' ಎಂದು ಏಕೆ ಹೇಳುತ್ತೀಯೆ.

ಇಷ್ಟು ಹೇಳಿ ಅವರು ಸುಮ್ಮನಾದರು. ಅವರು ಈ ಮಾತನ್ನು ತಮ್ಮ ಅನುಭವದಿಂದಲೇ ಹೇಳಿದ್ದರು. ಆತ್ಮನು ಅನುಭವ ಗಮ್ಯ. ಸುಮ್ಮನೆ ಬಾಯಲ್ಲಿ ಅವನು ಹಾಗಿದ್ದಾನೆ ಹೀಗಿದ್ದಾನೆ ಎಂದು ಹೇಳಿದ ಮಾತ್ರಕ್ಕೆ ತಿಳಿದಂತಾಗಲಿಲ್ಲ. ಅವನು ಏನೇನು ಆಗಿದ್ದಾನೆ ಎನ್ನುವುದನ್ನು ಧ್ಯಾನದಲ್ಲಿ ನೋಡಬೇಕು. ಅನುಭವಿಸಬೇಕು. ಸಕ್ಕರೆ ಸಿಹಿಯಾಗಿದೆ ನಿಜ. ಹಾಗೆ ಹೇಳಿದ ಮಾತ್ರಕ್ಕೆ ಸಿಹಿ ಅನುಭವ ಆಗುವುದಿಲ್ಲ. ಬಾಯಿಯಲ್ಲಿ ಹಾಕಿಕೊಂಡು ಸಿಹಿ ಅನುಭವ ಮಾಡಿಕೊಳ್ಳುವಾಗ ಹೇಳುವುದರ ಅವಶ್ಯಕತೆ ಏನು? ಆದ್ದರಿಂದ ಆತ್ಮ ಬಾಯಲ್ಲಿ ಹೇಳುವುದರಿಂದ ಕೇಳುವುದರಿಂದ, ನೋಡುವುದರಿಂದ ಸಿಗುವವನಲ್ಲ. ಅಂತರ್ಯ ತಿಳಿದು ಒಂದಾಗುವುದರಿಂದ ತಿಳಿಯಲ್ಪಡುತ್ತಾನೆ.

ಅವರು ಮತ್ತೆ ಮುಂದುವರಿಸಿದರು.

"ಕರ್ಮಗಳನ್ನು ನಾಶ ಮಾಡಲಿಚ್ಛಿಸುವೆಯಾದರೆ ಶಾಂತ ಪರಿಣಾಮ ಧಾರಣೆಮಾಡು. ಕರ್ಮಗಳ ಮೂಲೋಚ್ಛೇದ ಶಾಂತ ಪರಿಣಾಮದಿಂದಲೇ

ಆಗುತ್ತದೆ. ಯಾವಾಗ ಆತ್ಮ ಸ್ವರೂಪದಲ್ಲಿ ಸ್ಥಿರಗೊಂಡು ಶಾಂತ ಪರಿಣಾಮ ಧರಿಸುತ್ತೀಯೋ ಆಗ ಕರ್ಮಗಳು ಹೆದರಿ ಓಡಿಹೋಗುತ್ತವೆ.

ಆಗ ನಾನು ಜಿನಭಗವಂತನ ಸ್ತೋತ್ರದ ಚರ್ಚೆ ಕೈಗೆತ್ತಿಕೊಂಡೆ. ಅವರು ಹೇಳಲಾರಂಭಿಸಿದರು.

"ನಾವು ಸ್ತುತಿ ಸ್ತೋತ್ರಾದಿಗಳೆಲ್ಲವನ್ನು ಓದಿ ಮುಗಿಸಿದ್ದೇವೆ. ನಾವು ಅವುಗಳನ್ನು ಅನೇಕ ಪ್ರಕಾರವಾಗಿ ತಿಳಿದಿದ್ದೇವೆ. ಆದರೀಗ ನಾವು ನಮ್ಮಾತ್ಮನೊಳಗೇ ಕುಳಿತಿದ್ದೇವೆ. ನಮಗೀಗ ಬಾಹ್ಯ ವಿಚಾರದಿಂದ ಸ್ವಲ್ಪವೂ ಪ್ರಯೋಜನವಿಲ್ಲ. ಈಗ ನಮ್ಮ ಮನೆಯಲ್ಲೇ ನಿಜ ಭವನದಲ್ಲೇ ಕುಳಿತಿರುವಂತೆ ಇದ್ದೇವೆ."

ಜಲಗ್ರಹಣದ ರಹಸ್ಯ

ಅವರು ಯಮ ಸಲ್ಲೇಖನ ಕಾಲದಲ್ಲಿ ಕೇವಲ ಜಲಗ್ರಹಣದ ನಿಯಮ ಮಾಡಿಕೊಂಡಿದ್ದರು. ಈ ಸಂಬಂಧವಾಗಿ ಅವರನ್ನು ಕೇಳಿದೆ.

"ಮಹರಾಜ್! ನೀವು ಜಲವನ್ನು ಇಟ್ಟುಕೊಂಡಿದ್ದು ಬಹಳ ಒಳ್ಳೆಯದಾಯಿತು. ನಿಮ್ಮ ಜೀವನ ಸಾಧನೆಯಿಂದ ನಮಗೆ ವಿವೇಕಪೂರ್ಣ ಪ್ರವೃತ್ತಿಯ ದರ್ಶನವಾಗುತ್ತಿದೆ. ಗೌತಮ ಗಣಧರರು ಮಹಾವೀರರನ್ನು ಕೇಳಿದರಂತೆ ಭಗವಾನ್ ಪಾಪದ ಹೊರೆಯನ್ನು ಹೇಗೆ ಹಗುರ ಮಾಡಿಕೊಳ್ಳುವುದು?" ಆಗ ಅವರೆಂದರಂತೆ "ವಿವೇಕ ಪೂರ್ಣ ಕಾರ್ಯಗಳಿಂದ ಪಾಪದ ಹೊರೆ ಕಡಿಮೆ ಆಗುತ್ತದೆ."

ಈ ಮಾತನ್ನು ಕೇಳಿ ಅವರೆಂದರು–

"ಜಲಗ್ರಹಣ ಮಾಡದಿದ್ದ ಕಾರಣ ಎಂಟು ಹತ್ತು ತ್ಯಾಗಿಗಳ ಸ್ಥಿತಿ ಕೆಟ್ಟಿದ್ದನ್ನು ನಾವು ನೋಡಿದ್ದೇವೆ. ಆದ್ದರಿಂದ ನಾವು ಜಲತ್ಯಾಗ ಮಾಡಲಿಲ್ಲ. ಜಲಗ್ರಹಣ ನಿಯಮವನ್ನು ಅನ್ಯ ತ್ಯಾಗಿಗಳ ಮಾರ್ಗದರ್ಶನಕ್ಕಾಗಿಯೂ ಇಟ್ಟುಕೊಂಡಿದ್ದೇವೆ. ಇಲ್ಲವಾದರೆ ನಮ್ಮ ಅನುಕರಣ ಮಾಡಲು ಹೋಗಿ ಅನೇಕರಿಗೆ ಸಮಾಧಿ ತಪ್ಪೀತು."

ಮಾರ್ಮಿಕ ನುಡಿ.

ಒಂದು ದಿನ ಅವರು ಹೇಳತೊಡಗಿದರು–

ಆತ್ಮ ಚಿಂತನೆಯಿಂದ ಸಮ್ಯಗ್ದರ್ಶನ ಉಂಟಾಗುತ್ತದೆ. ಸಮ್ಯಕ್ತ್ವದ ಉದಯವಾದ ಕೂಡಲೇ ಮೋಹದ ಅಭಾವ ಆಗತೊಡಗುತ್ತದೆ. ಮೋಹ ಕ್ಷಯವಾಗಿದ್ದರೂ ಚಾರಿತ್ರ ಮೋಹನೀಯ ಕರ್ಮವಿನ್ನೂ ಕೂತಿರುತ್ತದೆ. ಅದನ್ನು ಕ್ಷಯಿಸಲು ಸಂಯಮ ಧಾರಣೆ ಮಾಡಬೇಕಾಗುತ್ತದೆ. ಸಂಯಮದಿಂದ ಚಾರಿತ್ರ ಮೋಹನೀಯ ನಷ್ಟವಾಗುತ್ತದೆ. ಈ ಪ್ರಕಾರ ಸಂಪೂರ್ಣ ಮೋಹ ನಷ್ಟವಾಗುವುದರಿಂದ 'ಅರ್ಹಂತ' ಪದ ಪ್ರಾಪ್ತವಾಗುತ್ತದೆ.

ಜೀವಿತ ಸಮಯಸಾರ

ನಾನು ಹೇಳಿದೆ.

"ಮಹರಾಜ್!' ನಿಮ್ಮ ಹತ್ತಿರ ಕುಳಿತಿದ್ದರೆ ಜೀವಿತ ಸಮಯಸಾರದ ಹತ್ತಿರವೇ ಕುಳಿತಂತೆ ಭಾಸವಾಗುತ್ತದೆ. ನೀವು ಆತ್ಮ ಮತ್ತು ಶರೀರ ಭಿನ್ನ ಭಿನ್ನವೆಂದು ಮಾತ್ರವೇ ಹೇಳುತ್ತಿಲ್ಲ. ಮತ್ತು ಅದೇ ಪ್ರಕಾರ ಪ್ರವೃತ್ತಿಯನ್ನೂ ಬೆಳೆಸಿಕೊಂಡಿದ್ದೀರಿ. ಶರೀರ ಆತ್ಮನಿಂದ ಭಿನ್ನ. ಅದು ಪರವಸ್ತು. ಆದರೂ ಅದನ್ನು ಉಣ್ಣಿಸುವ ಮೀಯಿಸುವ ಕಾರ್ಯವನ್ನೇಕೆ ಮಾಡಲಾಗುತ್ತದೆ.

ಈ ಪ್ರಶ್ನೆಗೆ ಅವರು ಸ್ವಲ್ಪ ಉತ್ತೇಜಿತರಾದಂತೆ ಕಂಡರು.

ಅರೇ ಆತ್ಮನನ್ನು ಶರೀರದಿಂದ ಭಿನ್ನ ಎಂದು ಹೇಳುವುದು ಮತ್ತು ಭೋಗೋಪಭೋಗಗಳಲ್ಲಿ ಮುಳುಗುವುದು ಅದೆಂತಹ ಆತ್ಮ ಚಿಂತನೆಯ ಮಾತಾದೀತು? ಆತ್ಮ ಶರೀರದಿಂದ ಭಿನ್ನವೆಂದ ಮೇಲೆ ಶರೀರದ ಚಿಂತೆ ಏಕೆ? ಆತ್ಮನ ಬಗ್ಗೆಯಷ್ಟೇ ಚಿಂತೆ ಇರಬೇಕು. ಶರೀರದ ಚಿಂತೆ ಎಂತಹ ಮಾತು. ಅದರ ಚಿಂತನೆಯನ್ನಾದರೂ ಏಕೆ ಮಾಡಬೇಕು. ಅದನ್ನು ಮೀಯುಣಿಸುವ ಲಾಲಸೆ ಏಕೆ ತೋರಿಸಬೇಕು? ನೋಡು ಆತ್ಮ ಚಿಂತೆಯಿಂದ ಕರ್ಮ ನಾಶವಾಗುತ್ತದೆ. ಆದರೆ ಶರೀರ ಚಿಂತೆಯಿಂದ ಕರ್ಮ ಬಂಧ ಆಗುತ್ತದೆ."

ಈ ಮಧುರ ಚರ್ಚೆ ನಡೆಯುತ್ತಿದ್ದಾಗ ಅಭಿಷೇಕಕ್ಕಾಗಿ ಬಹಳ ಗದ್ದಲವೆದ್ದಿತು. ಇದನ್ನೆಲ್ಲಾ ಬಂದ್ ಮಾಡಿದರೆ ಶಾಂತಿ ಇರುತ್ತದೆ. ಎಂದು ನಾನು ಹೇಳಿದೆ. ಆಗ ಅವರೆಂದರು–

"ಬಾಹ್ಯದಲ್ಲಿ ಗಡಿಬಿಡಿ ಇರಲಿ,ಗಲಾಟೆ ಇರಲಿ, ಅದರಿಂದ ನಮಗೇನು?ಅಂತರಂಗದಲ್ಲಿ ಶಾಂತಿ ಇರುವಾಗ ಬಹಿರಂಗದ ಗಡಿಬಿಡಿ ಏನು ಮಾಡೀತು?ಗೊಂದಲ ಏನು ಮಾಡೀತು?"

ಜೀವನದ ಮೂಲಕ ಉಪದೇಶ :

ಅದು ಸಲ್ಲೇಖನದ ೧೨ನೇ ದಿನ ನಾನು ಅವರ ಪುನೀತ ಚರಣಗಳಿಗೆ ಶ್ರದ್ಧೆಯಿಂದ ನಮಿಸಿ ನಿವೇದಿಸಿಕೊಂಡೆ–

"ನಿರಂತರ ಆತ್ಮ ಧ್ಯಾನದಲ್ಲಿ ನಿಮಗ್ನರಾದ ನಿಮ್ಮಂತಹ ಮಹಾ ಸಾಧಕರ ಪುಣ್ಯ ಚರಣಗಳ ಆಶ್ರಯ ಸಿಕ್ಕಿರುವುದು ನಮ್ಮೆಲ್ಲರ ಮಹಾನ್ ಸೌಭಾಗ್ಯ. ನೀವು ಜೀವನವೆಲ್ಲಾ ರತ್ನತ್ರಯ ಧರ್ಮದ ಸಮಾರಾಧನೆ ಮಾಡಿದ್ದೀರಿ. ನಿಮ್ಮ ಜೀವನವೇ ರತ್ನತ್ರಯ ಧರ್ಮದ ಉಪದೇಶದಂತಿದೆ."

ಆ ಕುಟೀರಕ್ಕೆ ಹೋಗುತ್ತಿದ್ದಂತೆಯೇ ಒಂದು ದಿವ್ಯ ವಿಚಾರ ನಮ್ಮನ್ನು ಎಚ್ಚರಗೊಳಿಸುತ್ತದೆ. ಈ ಕುಟೀರದ ಒಳಗೆ ಒಂದು ದಿವ್ಯ ಚೇತನ ವಿರಾಜಮಾನವಾಗಿದೆ. ಯಾರು ಭೀಷಣ ಕರ್ಮಗಳನ್ನು ಕ್ಷಯಿಸುತ್ತಾ ಅಪೂರ್ವ ವಿಶುದ್ಧಿ ಪ್ರಾಪ್ತಿಮಾಡಿಕೊಳ್ಳುತ್ತಿದ್ದಾರೋ ಅಂತಹ ಮಹಾನ್ ಆತ್ಮ ಮೃತ್ಯುವನ್ನು ಆಮಂತ್ರಿಸಿ ಅದನ್ನು ಪರಮ ಸ್ನೇಹಿತನಂತೆ ಸ್ವಾಗತಿಸುತ್ತಿದೆ. ಅದನ್ನು ಭೇಟಿಯಾಗಲು ತಯಾರಾಗಿ ಕೂತಿದೆ.

ಆಕಿಂಚನ್ಯ ಭಾವನೆ :

ನಾನು ಹೇಳಿದೆ.

"ಮಹಾರಾಜ್! ನಿಮಗೆ ಸಮಯಸಾರ ಪ್ರಿಯಗ್ರಂಥ. ಗುಣಭದ್ರಸ್ವಾಮಿ ಬಹಳ ಮಾರ್ಮಿಕ ವಿಚಾರ ಬರೆದಿದ್ದಾರೆ. "ಯಾವುದರಿಂದ ನೀನು ತ್ರೈಲೋಕ್ಯ ಪತಿಯಾಗುವೆಯೊ ಅಂತಹ ಮಹತ್ಪೂರ್ಣ ವಿಚಾರ ನಿನಗೆ ಹೇಳುತ್ತಿದ್ದೇನೆ. ಅದು ಯೋಗಿಗಳಿಗೇ ಗಮ್ಯ "

ಆತ್ಮಾನುಶಾಸನ.

ನಾನು ಆಕಿಂಚನನಿದ್ದೇನೆಂದು ಭಾವಿಸು. ಅನ್ಯದೊಂದು ಪರಮಾಣುವೂ ನನ್ನದೆಂದು ತಿಳಿಯಬೇಡ. ಇದೇ ಪರಮಾತ್ಮ ಪದದ ರಹಸ್ಯ. ನೀವೂ ಅಂತಹ ಆಕಿಂಚನ್ಯ. ಭಾವನೆಯಲ್ಲಿ ಮುಳುಗಿದ್ದೀರಿ. ಶರೀರಕ್ಕೆ ಅನ್ನಪಾನಗಳನ್ನು ನಿಲ್ಲಿಸಿರುವ ಕಾರಣ ಆ ಪ್ರವೃತ್ತಿಯ ಮೂಲಕವೂ ಆಕಿಂಚನ್ಯರಾಗಿದ್ದೀರಿ.

ಗುಣ ಭದ್ರಾಚಾರ್ಯರು ಹೀಗೆ ಹೇಳಿದ್ದಾರೆ.

ಅಕಿಂಚನೋಽಹಮಿತ್ಯಾಸ್ಸ್ವ ತ್ರೈಲೋಕ್ಯಾಧಿಪತೇಭವ:

ಯೋಗಿ ಗಮ್ಯ ತವ ಪ್ರೋಕ್ತಂ ರಹಸ್ಯಂ ಪರಮಾತ್ಮನ:

ಈ ಮಾತನ್ನು ಅವರು ಸಾವಧಾನವಾಗಿ ಆಲಿಸಿ ನನಗೆ ಹೇಳತೊಡಗಿದರು.

"ಗುಣಭದ್ರಾಚಾರ್ಯರು ಬಹುದೊಡ್ಡ ಆಚಾರ್ಯರಾಗಿದ್ದರು. ಅವರ ಮುಂದೆ ನಾವೆಷ್ಟರವರು?"

ನಾನು ಹೇಳಿದೆ :- "ಮಹಾರಾಜ್: ನಿಮ್ಮ ಉಪವಾಸ ಈಗ ೨ ವಾರಗಳನ್ನು ತಲುಪಿದೆ. ನಿಮ್ಮ ತಪಸ್ಸು ಮತ್ತು ಸ್ಥಿರತಿಯಿಂದ ಜನ ಚಕಿತರಾಗಿದ್ದಾರೆ.ನಿನಿ

ಅವರು - "ನಾವು ಈ ಶರೀರದಿಂದ ಸಿಂಹನಿಃಕ್ರೀಡಿತಾದಿ ಎಲ್ಲಾ ತಪಸ್ಸು ಮಾಡಿದ್ದೇವೆ. ನಮ್ಮದು ವಜ್ರವೃಷಭನಾರಚ ಸಂಹನನವಲ್ಲ. ಹಾಗಿದ್ದಿದ್ದರೆ ಇಂಗಿನಿ ಮರಣದ ಬದಲು ಪ್ರಾಯೋಪಗಮನ ತಪಸ್ಸನ್ನೇ ಸ್ವೀಕರಿಸುತ್ತಿದ್ದೆವು."

"ಭಕ್ತಪ್ರತ್ಯಾಖ್ಯಾನ ಇಂಗಿನಿ ಮತ್ತು ಪ್ರಯೋಪಗಮನವೆಂದು ಮೂರು ವಿಧ ಸಲ್ಲೇಖನ ವಿಧಿ ಹೇಳಿದೆ. ಹಿಂದಿನ ದೊಡ್ಡ ದೊಡ್ಡ ಆಚಾರ್ಯರು ಬಾಲ್ಯದಲ್ಲೇ ದೀಕ್ಷೆ ತೆಗಿದುಕೊಳ್ಳುತ್ತಿದ್ದರು. ಗುರುಗಳ ಹತ್ತಿರವೇ ಇದ್ದು ಆಚಾರ್ಯ ಪದ ಸ್ವೀಕರಿಸುತ್ತಿದ್ದರು."

ಕ್ಷುಲ್ಲಕ ದೀಕ್ಷೆ :

ಸನ್ ೧೯೫೫ನೇ ಆಗಸ್ಟ ೧೮ ರಂದು ಅವರನ್ನು ಅತ್ಯಂತ ಶ್ರದ್ಧೆಯಿಂದ ಸೇವಿಸುತ್ತಿದ್ದ ಬ್ರ.ಭರಮಪ್ಪನಿಗೆ ಕ್ಷುಲ್ಲಕ ದೀಕ್ಷೆ ಕೊಟ್ಟರು. ಬ್ರಹ್ಮಚಾರಿ ಭರಮಪ್ಪ ಅಲ್ಲಿ ಉಪಸ್ಥಿತರಿದ್ದ ಸರ್ವಸಂಘದಲ್ಲಿ ಕ್ಷಮಾ ಯಾಚಿಸಿದರು. ಸಂಘವು ಅವರಿಗೆ ದೀಕ್ಷಾಭಾವನೆಯ ಅನುಮೋದ ಕೊಟ್ಟಿತು. ಆಚಾರ್ಯಶ್ರೀಯವರು ವೀತರಾಗ ಭಾವನೆಯಲ್ಲಿದ್ದರೂ ಬ್ರ.ಭರಮಪ್ಪನ ಮೇಲೆ ವಿಶೇಷ ಕರುಣಾವಶರಾಗಿ ದೀಕ್ಷಾ ಸಮಾರಂಭದಲ್ಲಿ ಉಪಸ್ಥಿತರಾಗಿದ್ದು ಆ ಮಹಾನ್ ಸೇವಕನ ಮಸ್ತಕದಲ್ಲಿ ಸ್ವಯಂ ಬೀಜಾಕ್ಷರ ಬರೆದರು. ದೀಕ್ಷಾಸಮಾರಂಭ ವಿದ್ವಾನರಾದ ಕೊಲ್ಲಾಪುರದ ಭಟ್ಟಾರಕ ಸ್ವಾಮಿಗಳ ನೇತೃತ್ವದಲ್ಲಿ ನಡೆಯಿತು. ಸ್ವಲ್ಪ ಕಾಲಾನಂತರ ಭರಮಪ್ಪನ ಕೈಯಲ್ಲಿ ಪಿಂಚ ಹಾಗೂ ಕಮಂಡಲು ಬಂದಿತು. ಮಹರಾಜರು ಆಶೀರ್ವಾದ ಕೊಡುತ್ತಾ ಸಿದ್ಧಸಾಗರರೆಂಬ ಮಹತ್ಪೂರ್ಣ ಹೆಸರು ಕೊಟ್ಟರು.

ಆಶೀರ್ವಾದ :

ದೀಕ್ಷಾ ಸಮಾರಂಭ ಮುಗಿದು ಹೋಯಿತು. ಒಂದು ದಿನ ಅವರು ಸಿದ್ಧಸಾಗರರನ್ನು ಸನಿಹಕ್ಕೆ ಕರೆದು ಕರುಣಾಪೂರ್ಣ ದೃಷ್ಟಿಯಿಂದ ಬೋಧಿಸತೊಡಗಿದರು.

"ಭರಮಾ! ನೀನು ಜಿನೇಂದ್ರ ದೀಕ್ಷೆ ತೆಗೆದುಕೊಂಡಿರುವೆ. ನಿನಗೆ ಕುಗತಿ ಆಗುವುದಿಲ್ಲವೆಂದು ನಮಗೆ ವಿಶ್ವಾಸವಿದೆ. ಹೆದರಬೇಡ. ಮಿಥ್ಯಾದೃಷ್ಟಿ ಸಾಧುವೂ ತಪಸ್ಸಿನ ಮೂಲಕ ದೇವಗತಿಗೆ ಹೋಗುತ್ತಾನೆ. ನೀನು ಈಗ ಜಿನೇಂದ್ರ ಕಥಿತ ವ್ರತ ಗ್ರಹಣ ಮಾಡಿದ್ದೀಯ. ನಿಶ್ಚಯವಾಗಿಯೂ ನಿನಗೆ ಸದ್ಗತಿ ಆಗುತ್ತದೆ."

ಒಂದು ದಿನ ಪೂಜ್ಯ ಶ್ರೀಯವರು ಅತ್ಯಂತ ಭಾವೋದ್ವೇಗದಿಂದ ಬೋಧಿಸತೊಡಗಿದರು-

"ನರ್ಮದಾ ನದಿಯಲ್ಲಿರುವ ಕಲ್ಲೂ ನುಣುಪಾಗಿ ಬಿಡುತ್ತದೆ. ಆದರೆ ನಿಮ್ಮ ಹೃದಯ ಆಗಲಿಲ್ಲ. ನೀವು ವ್ರತ ತೆಗೆದುಕೊಳ್ಳದಿದ್ದರೂ ಸಂಯಮ ಸ್ವೀಕರಿಸದಿದ್ದರೂ ನಾವು ಹೇಳುತ್ತಲೇ ಇರುತ್ತೇವೆ. ಆರೇ ಏನು ನೋಡುತ್ತಿದ್ದೀರಿ? ನೀವು ವ್ರತ ಪಾಲಿಸಿದರೆ ಸ್ವರ್ಗದಲ್ಲೂ ನಮ್ಮೊಡನೆಯೇ ಇರಬಹುದು. ಅಲ್ಲಿಯೂ ಭೇಟಿಯಾಗುತ್ತಿರಬಹುದು. ನಮಗೆ ಅಲ್ಲಿ ಒಡನಾಡಿಗಳು ಬೇಕಾಗಿದ್ದಾರೆ. ನೋಡಿರಿ, ನಿಮಗಿಷ್ಟು ಆಗ್ರಹ ಮಾಡಿ ಹೇಳುತ್ತಿದ್ದೇವೆ. ಮನಸ್ಸಿನಲ್ಲಿಡಿ. ಶಾಂತಿಸಾಗರರು ನಿಮಗೆ ಮುಂದೆ ಇನ್ನೆಂದೂ ಹೇಳಲು ಬಾರರು. ಸ್ವರ್ಗಕ್ಕೆ ಹೋಗಿ ವಿದೇಹ ಸಂದರ್ಶಿಸಿ ಶ್ರೀಮಂಧರ ಸ್ವಾಮಿಯ ದರ್ಶನ ಮಾಡಬಲ್ಲಿರಿ. ಅದರಿಂದ ನಿಮಗೆ ಸಮ್ಯಕ್ತ್ವ ಪ್ರಾಪ್ತಿಯಾಗುತ್ತದೆ. ಅಲ್ಲಿಂದ ವಿದೇಹದಲ್ಲಿ ಹುಟ್ಟಿ ಮೋಕ್ಷಕ್ಕೆ ಹೋಗಬಲ್ಲಿರಿ. ಯೋಚಿಸಿ, ಇನ್ನೊಮ್ಮೆ ಯೋಚಿಸಿ!!

ಅವರ ಈ ಮಾತು ಜನಗಳ ಹೃದಯದಲ್ಲಿ ಬಾಣದಂತೆ ನೆಟ್ಟಿತು. ಎಷ್ಟೋಜನ ನಾಮುಂದೆ ತಾಮುಂದೆ ಎಂದು ವ್ರತಿಕರಾಗಿ ಬಿಟ್ಟರು. ಒಬ್ಬ ಗೃಹಸ್ಥನಿಗೆ ವ್ರತಕೊಟ್ಟು ಧೈರ್ಯ ತುಂಬುತ್ತಿದ್ದರು.

"ಹೆದರಬೇಡ: ವ್ರತಗಳನ್ನು ನಿರ್ದೋಷ ರೀತಿಯಲ್ಲಿ ಆಚರಿಸಲು ಪ್ರಯತ್ನಿಸು. ಒಂದು ವೇಳೆ ದೋಷ ಬಂದರೆ ಪ್ರಾಯಶ್ಚಿತ ತೆಗೆದುಕೊಳ್ಳಬೇಕು. ಒಂದು ಅಥವಾ ಎರದು ತಿಂಗಳವರೆಗೆ ನಿತ್ಯ ನಾಲ್ಕು ಮಾಲೆಗಳಷ್ಟು ವಿಶೇಷ ಜಪ ಮಾಡು.

ಜನಗೊಂಡ ಪಾಟೀಲನಿಗೆ ನಿರ್ದೇಶನ :

ಆಚಾರ್ಯ ಶ್ರೀಯವರ ಕನಿಷ್ಟ ಸಹೋದರ ದಿ.ಕುಮಗೊಂಡಾ ಪಾಟೀಲರ ಚಿರಂಜೀವಿ ಜನಗೊಂಡಾ ಪಾಟೀಲರು ಪರಿವಾರ ಸಮೇತ ಕುಂಥಲಗಿರಿ ಕ್ಷೇತ್ರಕ್ಕೆ ಜಯಸಿಂಘಪುರದಿಂದ ಬಂದಿದ್ದರು. ಆಚಾರ್ಯ ಶ್ರೀಯವರ ಚರಣಗಳಿಗೆ ಅವರು ವಂದಿಸಿದರು. ಮಹರಾಜರು ಗೃಹಸ್ಥಾವಸ್ಥೆಯಲ್ಲಿದ್ದಾಗ ಜನಗೊಂಡಾ ಪಾಟೀಲ ಅವರು ಹೆಗಲ ಮೇಲೆ ಆಡಿದ್ದರು. ಅವರೊಡನೆ ಮಲಗುತ್ತಿದ್ದರು. ಕಥೆ ಕೇಳುತ್ತಿದ್ದರು. ಈಗ ಅವರಿಬ್ಬರ ಸಂಬಂಧ ಗುರುಶಿಷ್ಯರಂತೆ! ಪೂಜ್ಯ ಶ್ರೀಯವರು ನಿರ್ವಿಕಾರಚಿತ್ತದಿಂದ ಕರುಣಾ ದೃಷ್ಟಿಯಿಂದ ಹೇಳಿದರು. "ನೋಡು .ನಾವೀಗ ಯಮಸಲ್ಲೇಖನ ತೆಗೆದುಕೊಂಡಿದ್ದೇವೆ. ಈಗ ನಾವು ಶೀರ್ಘ ಹೋಗಲಿದ್ದೇವೆ. ನೀನು ಸಂಯಮ ಧಾರಣೆ ಮಾಡು. ಅದರ ಹೊರತು ಜೀವಕ್ಕೆ ಹಿತ ಆಗದು "

ಜನಗೊಂಡ ಹೇಳಿದರು.

"ಮಹರಾಜ್! ಏನು ಮಾಡಲಿ?ನಿಮ್ಮ ಆಜ್ಞೆ ಪಾಲಿಸಲು ಸಿದ್ಧನಿದ್ದೇನೆ."

ದಿಗಂಬರ ದೀಕ್ಷಾ ಸಂಕಲ್ಪ

ಅವರು ಹೇಳಿದರು.

"ನೀನು ನಮ್ಮಂತೆಯೇ ದಿಗಂಬರ ದೀಕ್ಷೆ ಸ್ವೀಕರಿಸು. ಅದಕ್ಕಿಂತ ಅಧಿಕ ಆನಂದ ಮತ್ತು ಶಾಂತಿಯ ಮಾರ್ಗ ಇನ್ನೊಂದಿಲ್ಲ." ಕುಮಗೊಂಡಾ ಹಾಗೂ ಅವರ ಪುತ್ರ ಜನಗೊಂಡ ಇಬ್ಬರಲ್ಲೂ ಅವರಿಗೆ ವಾತ್ಸಲ್ಯವಿತ್ತು. ಅವರು ಒಮ್ಮೆ ನನ್ನೊಡನೆ ಹೇಳಿದ್ದರು.

"ಕುಮಗೊಂಡನ ಮರಣ ಅಸಂಯಮದಲ್ಲೇ ಆಯಿತು. ಅವನಿಗೆ ನಾವು ಬ್ರಹ್ಮಚರ್ಯೆ ಪ್ರತಿಮೆಯನ್ನು ಕೊಡಲು ಮಾತ್ರ ಸಾಧ್ಯವಾಯಿತು. ನಮ್ಮ ಅಭಿಲಾಷೆ ಅವನನ್ನೂ ವರ್ಧಮಾನಸಾಗರರಂತೆ ಮುನಿಯನ್ನಾಗಿ ಮಾಡುವುದಿತ್ತು."

"ಮಹರಾಜ್! ಕೆಲವು ವರ್ಷಗಳ ಸಾಧನೆಯ ನಂತರ ಮುನಿಯಾಗುತ್ತೇನೆ." ಎಂದು ಹೇಳುತ್ತಾ ಜನಗೊಂಡಾ ನಮಸ್ಕರಿಸಿದರು. ಆಗ ಅವರು ಜನಗೊಂಡಾ ಪಾಟೀಲರ ಪತ್ನಿಯನ್ನು ಕರಿಸಿ ಕೇಳಿದರು.

"ಇವನು ಮುನಿಯಾದರೆ ನಿನಗೇನೂ ಅಭ್ಯಂತರವಿಲ್ಲವಷ್ಟೆ?

ಅವರ ಪ್ರಶ್ನೆಗೆ ಆ ಮಹಿಳೆ ದಿಟ್ಟವಾದ ಉತ್ತರವನ್ನೇ ಕೊಟ್ಟಳು.

"ಮಹರಾಜ್! ನಾಳೆ ಇವರು ಬದಲಾಯಿಸಿಬಿಟ್ಟಾರು. ಇಂದೇ ಮುನಿಯನ್ನಾಗಿ ಮಾಡಿಬಿಡಿ. ನನ್ನಿಂದ ಯಾವ ಅಡ್ಡಿ ಅಡಚಣೆಯೂ ಇಲ್ಲ". ಈ ಮಾತಿನಿಂದ ಅವರಿಗೆ ಬಹಳ ಶಾಂತಿ ಅನ್ನಿಸಿತು. ಕ್ಷಣದಲ್ಲೇ ಆ ದಂಪತಿಗಳು ವ್ರತಿಕರಾಗಿ ಬಿಟ್ಟರು.

ಮಾಹರಾಜರು ಇನ್ನೊಂದು ಮಾತನ್ನೂ ಹೇಳಲು ಮರೆಯಲಿಲ್ಲ.

"ನೀನು ಎಂದು ಮುನಿಪದ ಸ್ವೀಕರಿಸುವೆಯೋ, ಅಂದೇ ನಿನ್ನ ಪುತ್ರನಿಗೂ ಮುಂದೆ ಮುನಿಯಾಗಲು ಹೇಳುವುದನ್ನು ಮರೆಯಬೇಡ. ನಿನ್ನ ಮನೆಯಲ್ಲಿ ಮುನಿ ಪದದ ಪರಂಪರೆ ಸರಿಯಾಗಿ ನಡೆದು ಹೋಗುವಂತೆ ನೋಡಿಕೋ ಈ ಮಾತನ್ನು ಚೆನ್ನಾಗಿ ನೆನಪಿನಲ್ಲಿಡು"

ದೃರದೃಷ್ಟವಶಾತ್ ಜನಗೊಂಡಾರ ಮರಣವೂ ೧೯೪೪ ರಲ್ಲಿ ಆಗಿ ಹೋಯಿತು. ಶಾಸ್ತ್ರಾಧ್ಯಯನಕ್ಕಾಗಿ ಮೊರೇನಾಕ್ಕೆ ಹೋಗಿ ಶೀಘ್ರವೇ ಜಿನದೀಕ್ಷೆ ತೆಗೆದುಕೊಳ್ಳುವುದಾಗಿ ನನ್ನಲ್ಲಿ ಹೇಳಿದ್ದರು.

ವಿನೋದದಲ್ಲೂ ಅವರ ಬಾಯಿಂದ ಅಮೂಲ್ಯವಾದುದೇ ಬರುತ್ತಿತ್ತು. ನವ ದೀಕ್ಷಿತ ಕ್ಷು.ಸಿದ್ಧಸಾಗರರು ಬಂದು ತಮ್ಮಿಂದಾಗಿರಬಹುದಾದ ದೋಷಕ್ಕೆ ಕ್ಷಮಾ ಯಾಚಿಸತೊಡಗಿದರು.

ಅವರ ಹೇಳಿದರು – "ಭರಮಾ ನೀನೆಂದು ಮುನಿ ದೀಕ್ಷೆ ತೆಗೆದುಕೊಳ್ಳುವೆಯೋ ಅಂದೇ ಕ್ಷಮಿಸಲ್ಪಡುವೆ."

ವಿನೋದ ಪೂರ್ಣ ಮಾತೂ ಅವರಿಗೆ ಪ್ರಚೋದನಕಾರಿಯಾಗಿತ್ತು.

ಬಾಬೂರಾವ್ ಮಾರ್ಶೆ ಎನ್ನುವ ಒಬ್ಬ ಶ್ರಾವಕನಿದ್ದ. ಕೊಲ್ಲಾಪುರ ಅವನ ಹುಟ್ಟೂರು. ಶ್ರದ್ಧಾವಂತ ಮುನಿಭಕ್ತ. ಎರಡನೇ ಪ್ರತಿಮಾಧಾರಿ. ಒಮ್ಮೆ ಪೂಜ್ಯ ಶ್ರೀಯವರು ಕುಂಥಲಗಿರಿಯತ್ತ ಬರುತ್ತಿದ್ದರು. ಕಮಂಡಲು ಹಿಡಿದು ಅವರ ಹಿಂದೆ ಇವರು ಹೋಗುತ್ತಿದ್ದರು. ಒಮ್ಮೆ ಮಹರಾಜರ ಕಮಂಡಲು ಎತ್ತಿಕೊಳ್ಳಲು ಹೋದರು. ಆಗ ಅವರೆಂದರು.

"ನೀನು ನನ್ನ ಕಮಂಡಲುವಿಗೆ ಕೈ ಹಾಕಬೇಡ. ಅದನ್ನು ಎತ್ತಿಕೊಳ್ಳಬೇಡ." ಈ ಮಾತು ಕೇಳಿ ಮಾರ್ಶೆ ಬೆಚ್ಚಿಬಿದ್ದರು. ಇನ್ನೇನು ಅಪಚಾರವಾಯಿತೋ ಎಂದು ಕಳವಳಗೊಂಡರು. ಆ ವ್ಯಕ್ತಿಯ ಅವಸ್ಥೆ ನೋಡಿ

ಅವರು ಹೇಳಿದರು. "ದೀಕ್ಷೆ ತೆಗೆದುಕೊಳ್ಳುವೆಯಾದರೆ ಕಮಂಡಲು ಎತ್ತಿಕೋ. ಇಲ್ಲವಾದರೆ ನಮ್ಮ ಕಮಂಡಲ ಸ್ವಯಂ ನಾವೇ ಎತ್ತಿಕೊಳ್ಳುತ್ತೇವೆ."

ಆ ವ್ಯಕ್ತಿ ಇನ್ನಷ್ಟು ಗೊಂದಲಕ್ಕೀಡಾದರು. " ಮಹರಾಜ್ ! ಕೆಲವು ವರ್ಷಗಳ ನಂತರ ಕ್ಷುಲಕ ದೀಕ್ಷೆ ತೆಗೆದುಕೊಳ್ಳುವೆ." ಎಂದರು. ಅವರಿಗೆ ಆಗ ಸಂತೋಷವಾಯಿತು.

ಸನ್ಮಾರ್ಗದಲ್ಲಿ ನಡೆಯಲು ಜೀವಕ್ಕೆ ಪ್ರೇರಣೆ ಬೇಕು. ಉನ್ಮಾರ್ಗದಲ್ಲಿ ನಡೆಯಲು ಯಾರ ಪ್ರೇರಣೆಯೂ ಬೇಡ. ಜಲವು ಊರ್ಧ್ವಮುಖವಾಗಿ ಏರಲು ಪ್ರಯತ್ನಬೇಕು. ಅಧೋಮುಖವಾಗಿ ಹರಿಯಲು ಯಾರ ಪ್ರಯತ್ನವೂ ಬೇಡ. ಅದೇ ರೀತಿ ಬಲವಂತವಾಗಿಯಾದರೂ ಸುಸಂಸ್ಕಾರದ ಜೀವಕ್ಕೆ ಪ್ರತಿಜ್ಞೆ ಮಾಡಿಸಿದರೆ ಅದು ಒಳ್ಳೆಯ ಮಾರ್ಗದಲ್ಲೇ ನಡೆದು ಹೋಗುತ್ತದೆ.

ಮಾರ್ಮಿಕ ದೃಷ್ಟಿ

ಪೂಜ್ಯಶ್ರೀಯವರಲ್ಲಿ ಒಂದು ವಿಶೇಷತೆ ಇತ್ತು. ಜನಗಳ ಮುಖವನ್ನು ನೋಡಿಯೇ ಅವರ ಬೆಲೆ ಗೊತ್ತು ಹಚ್ಚಿಬಿಡುತ್ತಿದ್ದರು. ಈ ವಿಶೇಷ ಪರಿಣತಿಯಿಂದಲೇ ಅವರು ಪಾತ್ರಾಪಾತ್ರವನ್ನು ಮೊದಲೇ ತಿಳಿದುಬಿಡುತ್ತಿದ್ದರು. ಒಮ್ಮೆ ಒಬ್ಬ ವ್ಯಕ್ತಿ ಅವರಲ್ಲಿ ದೊಡ್ಡ ವ್ರತವನ್ನೇ ಬೇಡಿದ. ಆದರೆ ಅವರು ಅವನಿಗೆ ಚಿಕ್ಕ ವ್ರತವನ್ನು ಮಾತ್ರ ಕೊಟ್ಟರು. ನಾನಾಗ ಕೇಳಿದೆ.

"ಮಹರಾಜ್! ಹೀಗೇಕೆ ಮಾಡಿದಿರಿ ? ಅವರ ಭಾವನೆ ಎತ್ತರವಾಗಿತ್ತು. ದೊಡ್ಡವ್ರತವನ್ನೇ ಕೊಡಬಹುದಿತ್ತಲ್ಲ?

ಆಗ ಅವರೆಂದರು –

"ಅವರ ಅಂತರಂಗದ ಸ್ಥಿತಿಯನ್ನು ನಾವು ತಿಳಿದಿದ್ದೇವೆ. ಅವರು ದೊಡ್ಡ ವ್ರತದ ನಿರ್ವಾಹ ಮಾಡಲಾರರು. ಜಬರ್‌ದಸ್ತಿನಿಂದ ಕೊಟ್ಟರೂ ಭಂಗ ಮಾಡಿಕೊಂಡು ಬಿಡುತ್ತಾರೆ. ಅದರಿಂದ ಅವರ ಆತ್ಮನ ಅಹಿತವಾಗುತ್ತದೆ. ಆ ಜೀವದ ಹಿತವಾಗುವಂತಹ ಕಾರ್ಯವನ್ನಷ್ಟೇ ನಾವು ಮಾಡಿದ್ದೇವೆ."

ಉಕ್ತ ಬಾಬೂರಾವ್ ಮಾರ್ಲೆ ಪೂಜ್ಯ ಶ್ರೀಯವರ ಕಮಂಡಲು ಎತ್ತಿಕೊಂಡರು. ಆಗ ಅವರೆಂದರು.

"ನೋಡು ! ತಾತ್ಕಾಲಿಕ ಭರವಸೆ ನಮಗೆ ಬೇಡ. ಮುಂದೆ ಏನಾಗುವುದೋ ಯಾರು ಬಲ್ಲರು? ನೀನು ಮುಂದೆ ದೀಕ್ಷೆ ತೆಗೆದುಕೊಳ್ಳುವುದು

ಸರಿ. ಹೇಳು, ಈಗೇನು ತೆಗೆದುಕೊಳ್ಳುವೆ" ಆ ವ್ಯಕ್ತಿಗೆ ಒಳ್ಳೆಯದಾಗುವ ಕಾಲ ಬಂದಿತ್ತು. ಅವನು ದೃಢ ಮನಸ್ಸಿನಿಂದ ಹೇಳಿದ.

"ಮಹರಾಜ್! ನಾನೀಗ ಸಪ್ತಮ ಪ್ರತಿಮೆ ತೆಗೆದುಕೊಳ್ಳುವೆ"

ಮಹರಾಜರು ಅವನಿಗೆ ಆಶೀರ್ವಾದಿಸಿದರು. ವಿನೋದದ ಪ್ರಸಂಗವೂ ಹಿತಕಾರಿಯಾಗಿ ಪರಿಣಮಿಸಿತು. ಮಹಾಪುರುಷರ ಸಾನಿಧ್ಯವೇ ಅಂತಹದ್ದು.

ಓಜಃಪೂರ್ಣವಾಣಿ

ಅವರ ವಾಣಿಯಲ್ಲಿ ಒಂದು ಚುಂಬಕ ಶಕ್ತಿ ಇತ್ತು. ಕೇಳಿದವರಿಗೆ ಇನ್ನೊಮ್ಮೆ ಕೇಳಬೇಕೆನಿಸುತ್ತಿತ್ತು. ಬ್ರಹ್ಮಚಾರಿ ಬಂಡೂರವರಿಗೆ ಒಮ್ಮೆ ಹೇಳಿದರು.

"ಅರೇ! ನೀನು ಸನ್ಯಾಸಿಯಾಗು. ಸಾಧುವಿನ ಕಳೇಬರವೂ ಪ್ರಾಣಧಾರಿ ಗೃಹಸ್ಥನ ಸಮಾನವಾಗಿದೆ. ಅಷ್ಟೇ ಅಲ್ಲ. ಸಾಧುವಿನ ಮೃತ ದೇಹ ಯಾವ ಕೆಲಸ ಮಾಡುವುದೋ ಅದನ್ನು ಗೃಹಸ್ಥನೂ ಮಾಡಲಾರ. ನನ್ನ ನಂತರ ಮತ್ತಾರೂ ಹೇಳುವವರು ಬರುವುದಿಲ್ಲ. ಪಿಂಚಿ ಹಿಡಿದು ಮರಣ ಹೊಂದು. ಹಾಗೆಯೇ ಮರಣ ಹೊಂದಬೇಡ. ಆತ್ಮ ಕಲ್ಯಾಣ ಮಾಡಿಕೊಳ್ಳುವ ಕಾರ್ಯದಲ್ಲಿ ಅಡ್ಡಿಯನ್ನುಂಟುಮಾಡಬೇಡ. ನನ್ನ ಮಗ ನನ್ನ ಹೆಂಡತಿ ಧನ ದೌಲತ್ತೆಂದು ಹಿಂದಕ್ಕೆ ಯೋಚಿಸಬೇಡ."

"ಅರೇ ! ನಿರ್ದಯಿಯಾಗಿ ಗೃಹತ್ಯಾಗ ಮಾಡು. ನಿರ್ದಯಿಯಾಗದ ಹೊರತು ಗೃಹತ್ಯಾಗ ಸಾಧ್ಯವಾಗುವುದಿಲ್ಲ. ನಿನ್ನ ಹಿಂದೆ ಸಂಪತ್ತು ಇದೆಯೋ ಇಲ್ಲವೋ ಅದನ್ನೊಂದನ್ನೂ ಚಿಂತಿಸಬೇಡ. ನಿನ್ನ ಕುಟುಂಬಿಗಳು ಪುಣ್ಯವಂತರಾದರೆ ಲಕ್ಷ್ಮಿ ಇದ್ದಾಳು. ಇಲ್ಲದಿದ್ದರೆ ಇರಲಾರಳು. ಲಕ್ಷ್ಮೀ ಪುಣ್ಯವಂತರ ದಾಸಿ"

ಅವರ ಮಾತು ಎಂತವರನ್ನೂ ಕ್ಷಣಕಾಲ ಕುಳಿತು ಯೋಚಿಸುವಂತೆ ಮಾಡುತ್ತಿದ್ದವು. ಅವು ಮನಸ್ಸಿನ ಮೋಹದ ಕೊಳೆ ತೊಳೆದು ಬಿಡುತ್ತಿದ್ದವು. ಮತ್ತೆ ಅವರ ವಾಣಿ ಮೊಳಗತೊಡಗಿತು.

"ಯಾರು ವ್ರತಗಳನ್ನು ತೆಗೆದುಕೊಳ್ಳಲು ಹಿಂಜರಿಯುವರೋ ಅವರಿಗೆ ನಾವು ಏನನ್ನೂ ಹೇಳಲಾರೆವು. ಧನ, ಧಾನ್ಯ! ಸಂಪತ್ತಿನ ಬಗ್ಗೆ ಕಾಳಜಿ ಇರುವವರಿಗೂ ನಾವು ಹೇಳಲಾರೆವು. ಹೇಡಿ ಜನ ಎಂದೂ ಸ್ವಸ್ಥಾನಬಿಟ್ಟು ನಿರ್ಭಯವಾಗಿ ಹೊರಗೆ ಹೋಗುವುದಿಲ್ಲ. ವೀರರು ಸವತ್ರ ವಿಹರಿಸುತ್ತಾರೆ. "ಹೆದರ ಬೇಡಿ! ನಿರ್ಭಯವಾಗಿ ವ್ರತಗಳನ್ನು ತೆಗೆದುಕೊಳ್ಳಿರಿ!"

ಅವರು ಬಹಳ ಧೈರ್ಯ ತುಂಬುತ್ತಿದ್ದರು. ಭೀತಿಯನ್ನು ಕಳೆದು ಆತ್ಮ ವಿಶ್ವಾಸ ತುಂಬುತ್ತಿದ್ದರು.

ವಾಹನವನ್ನೇರುವ ಸಾಧುವಿನ ಬಗ್ಗೆ

ಯಾವ ಸಾಧು ರೈಲು ಮೋಟಾರು ವಾಹನಗಳನ್ನೇರುವರೋ ಅವರ ಬಗ್ಗೆ ವಿನೋದವಾಗಿ ಹೇಳಿದರು.

"ನಾವು ದರಿದ್ರ ಸಾಧುಗಳು. ನಮಗೆ ನಡೆದೇ ವಿಹರಿಸದೆ ಅನ್ಯ ಮಾರ್ಗವೇ ಇಲ್ಲ. ರೈಲಿನಲ್ಲಾದರೆ ಕ್ಷಣಾರ್ಧದಲ್ಲಿ ಇಲ್ಲಿಂದ ಅಲ್ಲಿಗೆ ಹೋಗುತ್ತಾರೆ. ಎಷ್ಟೋ ಅನ್ಯಧರ್ಮಿ ಸಾಧುಗಳು ವಾಹನದಲ್ಲಿ ಕೂತುಕೊಳ್ಳುವುದಿಲ್ಲ. ಹೀಗಿರುವಾಗ ಇಲ್ಲಿಯ ಎಷ್ಟೋ ಸಾಧುಗಳು ವಾಹನದಲ್ಲಿ ಕೂಡುತ್ತಾರೆ. ಅವರಿಗೆ ಏನು ಹೇಳುವುದು?"

ಲೋಕೋತ್ತರ ಮನೋಭಾವ ಮತ್ತು ವೈರಾಗ್ಯ

ಕ್ಷಣಾರ್ಧದಲ್ಲೇ ಅವರ ಮುಖ ಗಂಭೀರವಾಯಿತು. ಆ ಗಾಂಭೀರ್ಯತೆಯಲ್ಲಿ ರಾಗ ದ್ವೇಷಗಳ ಸುಳಿವೂ ಕಾಣುತ್ತಿರಲಿಲ್ಲ. ಒಮ್ಮೆ ವರ್ಧಮಾನಸಾಗರರು ಒಬ್ಬ ಶ್ರಾವಕರೊಡನೆ ತಮ್ಮ ಪ್ರಾರ್ಥನೆ ಹೇಳಿ ಕಳಿಸಿದ್ದರು. ಆಚಾರ್ಯ ಶ್ರೀಯುವರ ದರ್ಶನ ಮಾಡುವ ಉತ್ಕಟ ಆಕಾಂಕ್ಷೆ ವ್ಯಕ್ತ ಮಾಡಿ ಹೇಳಿಕಳಿಸಿದ್ದರು. ಆಗ ಅವರಿಂದ ಬಂದ ಪ್ರತಿಕ್ರಿಯೆ ಲೋಕೋತ್ತರ ವ್ಯಕ್ತಿತ್ವ ಮತ್ತು ಉಜ್ವಲ ವೈರಾಗ್ಯದ ಸಂಕೇತವಾಗಿತ್ತು.

"ನಮ್ಮ ಮತ್ತು ವರ್ಧಮಾನಸಾಗರರ ಸಂಬಂಧ ಎಂತಹದ್ದು? ಗೃಹಸ್ಥಾಶ್ರಮದಲ್ಲಿ ಅವರೇನೋ ನಮ್ಮ ದೊಡ್ಡ ಅಣ್ಣನವರಾಗಿದ್ದರು ನಿಜ. ಆದರೆ ಆದರಿಂದೇನು? ನಾವಾದರೋ ಎಲ್ಲವನ್ನೂ ತ್ಯಾಗ ಮಾಡಿಬಿಟ್ಟಿದ್ದೇವೆ. ಈ ಜಗತ್ತಿನಲ್ಲಿ ಸಮಸ್ತ ಜೀವಿಗಳೂ ಬಂಧು-ಬಾಂಧವರಾಗಿ ಹೋಗಿವೆ. ಅಂತಹ ಸ್ಥಿತಿಯಲ್ಲಿ ನಾವು ಯಾರು ಯಾರನ್ನು ಅಣ್ಣ-ತಮ್ಮ ಅಕ್ಕ-ತಂಗಿ ಮಾತಾ-ಪಿತ ಎಂದು ಹೇಳುವುದು? ನಮಗಾದರೋ ಎಲ್ಲಾ ಜೀವಿಗಳು ಸಮಾನವಾಗಿವೆ. ನಾವು ಯಾರಲ್ಲಿಯೂ ಭೇದವನ್ನು ಕಾಣುವುದಿಲ್ಲ. ಈ ಸ್ಥಿತಿಯಲ್ಲಿ ವರ್ಧಮಾನ ಸಾಗರರು ಏಕೆ ಆಗಾಗ್ಗೆ ದರ್ಶನಕ್ಕಾಗಿ ಹೇಳಿ ಕಳಿಸುತ್ತಿದ್ದಾರೆ?"

ಸಂದೇಶ ತಂದ ವ್ಯಕ್ತಿ ಬಹಳ ಬುದ್ಧಿವಂತ. ಆತ ಬಹಳ ಬೇಗ ಮಾತುಹೊರಳಿಸಿ ಹೇಳಿದ.

"ಮಹರಾಜ್! ಅವರು ನಿಮ್ಮ ದರ್ಶನವನ್ನೂ ತಮ್ಮ ಸಹೋದರನ ರೂಪದಲ್ಲಿ ಮಾಡುತ್ತಿಲ್ಲ. ನೀವು ಅವರಿಗೆ ದೀಕ್ಷೆ ಕೊಟ್ಟಿದ್ದೀರಿ. ಆದ್ದರಿಂದ ತಮ್ಮ ಗುರುವಿನ ದರ್ಶನವನ್ನು ಮಾಡಲು ಇಚ್ಛಿಸುತ್ತಿದ್ದಾರೆ."

ಅವರು :- "ಒಂದು ವೇಳೆ ಇದು ನಿಜವೇ ಆದರೆ ಅಲ್ಲಿಂದಲೇ ಸ್ಮರಣೆ ಮಾಡುತ್ತಿರಬಹುದು. ಇಲ್ಲಿಗೆ ಬರುವ ಅವಶ್ಯಕತೆ ಏನು?"

ಇದೇ ವೀತರಾಗ ಮುನಿಯ ನಿಜವಾದ ಚರ್ಯೆ. ಸಂಸಾರ ಬಂಧನ ತ್ಯಜಿಸಿದ ಮೇಲೆ ಬಂಧುತ್ವ ಎಲ್ಲಿಯದು? ಎಷ್ಟೋ ಜನ ಸಾಧುಗಳು ಬಂಧು ಬಾಂಧವರನ್ನು ತ್ಯಜಿಸಿದ್ದರೂ ಕಷಾಯ ಭಾವ ತ್ಯಜಿಸಿರುವುದಿಲ್ಲ. ಕಷಾಯಗಳನ್ನು ತ್ಯಜಿಸದೆ ಕಷಾಯಾಂಬರಧಾರಿಯಾದರೆ ಅಂತಹ ಸಾಧು ಸಾಧುವೇ?

ಕೋಪತಾಪಗಳು ರಾಗದ್ವೇಷಜನಿತ. ರಾಗದ್ವೇಷ ಮಿಥ್ಯಾತ್ವ ಜನಿತ. ಈ ಮಿಥ್ಯಾತ್ವ ಸಂಸಾರದ ಅನಂತ ದುಃಖಕ್ಕೆ ಜನಕ. ಯಾವ ಸಾಧುತ್ವ ಸಂಸಾರ ಸಾಗರದಿಂದ ಪಾರುಮಾಡುವ ನಾವೆಯಾಗಿದೆಯೋ ಅಂತಹ ಸಾಧುತ್ವ ಧಾರಣೆ ಮಾಡಿಯೂ ಬಂಧು ಬಾಂಧವರಲ್ಲಿ ಮೋಹ ಸಂಬಂಧ ತ್ಯಜಿಸಲಾರದೆ ಹೋದರೆ ಅಂತವರ ಸಾಧುತ್ವ ಕಲ್ಲಿನ ನಾವೆ ಇದ್ದಂತೆ! ಮುಕ್ತಿ ಪರಂಪರೆಯನ್ನು ದೋಷ ಪೂರ್ಣಗೊಳಿಸುವ ಅಂತಹ ಸಾಧುತ್ವಕ್ಕೆ ಧಿಕ್ಕಾರವಿರಲಿ. ಆಚಾರ್ಯ ಶ್ರೀಯವರು ಲೋಕೋತ್ತರ ಭಾವನೆಯಿಂದ ಸಾಧುತ್ವವನ್ನು ಜೀವಂತಗೊಳಿಸಿದರು.

ನಿಜವಾದ ಸಾಧುಗಳಾರು?

ಸನ್ ೧೯೨೫ ರ ಮಾತು. ಆಗ ಪೂಜ್ಯ ಶ್ರೀಯವರು ನಸಲಾಪುರದಲ್ಲಿ ವಿರಾಜಮಾನರಾಗಿದ್ದರು. ಮುನಿ ನೇಮಿಸಾಗರರು ಆಗ ಗೃಹಸ್ಥರಾಗಿದ್ದರು. ಆಗ ಅವರ ಮನಸ್ಸಿನಲ್ಲಿನ್ನೂ ಸಾಧುವಿನ ಬಗ್ಗೆ ಭಕ್ತಿ , ಶ್ರದ್ಧೆ ಹುಟ್ಟಿರಲಿಲ್ಲ. ಆಗ ಅವರನ್ನು ಜನ ನೇಮಣ್ಣ ಎಂದು ಕರೆಯುತ್ತಿದ್ದರು.

ನೇಮಣ್ಣ : "ಸಾಧುವೆಂದು ಯಾರಿಗೆ ಹೇಳುತ್ತಾರೆ"

ಪೂಜ್ಯ ಶ್ರೀ - ಯಾರ ಹತ್ತಿರ ಪರಿಗ್ರಹಗಳಿಲ್ಲವೋ, ಕಷಾಯಗಳಿಲ್ಲವೋ, ಜಗತ್ತಿನ ಜಂಝಾಟವಿಲ್ಲವೋ, ಯಾರು ಸ್ವಾಧ್ಯಾಯ ಧ್ಯಾನದಲ್ಲಿ ಸದಾ ಲೀನರಾಗಿರುತ್ತಾರೋ ಅಂತಹವರನ್ನು ಸಾಧುಗಳೆಂದು ಕರೆಯುತ್ತಾರೆ"

ಮತ್ತೆ ಹೇಳಿದರು.

"ಹಣವನ್ನು ಕೂಡಿಡುವ ಮತ್ತು ಕಮಂಡಲುವಿನಲ್ಲಿ ಹಾಕಲು ಹೇಳುವ ಸಾಧುಗಳೂ ಇದ್ದಾರೆ. ಅಂತಹ ಸಾಧುಗಳಿಗೆ ಹಣ ಕೊಡುವವರು ಮೊದಲು ದುರ್ಗತಿಗೆ ಹೋಗುತ್ತಾರೆ. ನೀನು ಅಂತಹ ಸಾಧುಗಳಿಗೆ ಹಣಕೊಟ್ಟು ದುರ್ಗತಿಗೆ ಏಕೆ ಹೋಗುತ್ತಿಯೆ?

ಸಾಧು ಮತ್ತು ಶ್ರಾವಕ ಇವರ ಸಂಬಂಧ ಹೇಗಿರಬೇಕು ಎನ್ನುವುದನ್ನು ಚೆನ್ನಾಗಿ ಹೇಳಿದರು. ತನ್ನ ಇಚ್ಛಾ ಪೂರ್ತಿಗಾಗಿ ಏನನ್ನಾದರೂ ಬಯಸುವವನು ಸಾಧುವಲ್ಲ. ಸಾಧುವು ಬಯಸಿದ್ದನ್ನೆಲ್ಲಾ ಕೊಡುವವನು ದಾನಿಯೂ ಅಲ್ಲ. ಇವರಿಬ್ಬರೂ ಮೋಕ್ಷ ಮಾರ್ಗಿಗಳಲ್ಲ. ದುರ್ಗತಿಗಾಮಿಗಳು. ಸಾಧು ಜೀವನಕ್ಕೂ ಒಂದು ಮರ್ಯಾದೆ ಇದೆ, ಮಿತಿ ಇದೆ, ನೀತಿ, ನಿಯಮವಿದೆ. ಅದರೊಳಗಿದ್ದು ತನ್ನಾತ್ಮನ ಹಿತ ಕಾಪಾಡುವ ಸಾಧು ಮತ್ತು ಅಂತಹ ಸಾಧುವಿನ ಸೇವೆ ಮಾಡುವ ಶ್ರಾವಕ ಇವರಿಬ್ಬರೇ ಶ್ರೇಷ್ಠರಿರುತ್ತಾರೆ.

ಆತ್ಮಕಲ್ಯಾಣ ಕೇವಲ ಸಾಧುತ್ವದಿಂದ ಮಾತ್ರವೇ ಸಾಧ್ಯ ಎಂದು ಹೇಳುವುದು ತಪ್ಪು. ಅದು ತೀರಾ ಮುಂದುವರಿದ ಹಂತ ಅಷ್ಟೆ. ಆತ್ಮ ಕಲ್ಯಾಣ ಶ್ರಾವಕಾವಸ್ಥೆಯಲ್ಲೇ ಆರಂಭಗೊಂಡಿರುತ್ತದೆ. ಮೋಕ್ಷ ಮಾರ್ಗಿಯಾಗಬಯಸುವ ಶ್ರಾವಕ ಎಂತಹ ಸಾಧುವಿನ ಸೇವೆ ಮಾಡಬೇಕು? ಸಾಧುವಿನ ಲಕ್ಷಣಗಳೇನು ಎನ್ನುವ ಪ್ರಾಥಮಿಕ ಜ್ಞಾನವನ್ನು ಹೊಂದಿರದಿದ್ದರೆ ಅವನು ತನ್ನ ಕಲ್ಯಾಣ ಹೇಗೆಮಾಡಿಕೊಳ್ಳುತ್ತಾನೆ? ಗೃಹಸ್ಥೋ ಮೋಕ್ಷಮಾರ್ಗಸ್ಥೋ ಎನ್ನುವಂತೆ ಮುಂದೆ ತಾನೆಂತಹ ಸಾಧುವಾಗಬಲ್ಲ? ಜಿನೋಪದಿಷ್ಟ ಮಾರ್ಗ ಬಿಟ್ಟ ಎಲ್ಲಾ ಸನ್ಯಾಸಿಗಳೂ ಅಂತವರು ದಿಗಂಬರ ಯತಿಗಳೇ ಇರಲಿ, ಕುಲಿಂಗಿಗಳೆಂದೇ ಹೇಳಿದೆ. ಅಂತವರನ್ನು ಗುರುಭಕ್ತಿಯಿಂದ ಸೇವಿಸಬಾರದು. ಅಂತವರಿಗೆ ಇಂದ್ರಿಯ ಕಾಮಗಳನ್ನು ಪೋಷಣೆ ಮಾಡುವ ವಸ್ತುಗಳನ್ನು ದಾನ ಮಾಡಬಾರದು. ಧನ, ಸಂಪತ್ತು ಇತ್ಯಾದಿ ತ್ಯಜಿಸಿ ಹೊರಬಂದ ಸಾಧು ಪುನಃ ಅವುಗಳನ್ನು ಶ್ರಾವಕನಿಂದ ಬಯಸಿದರೆ ಅಂತಹ ಸಾಧು ಸಾಧುವೇ ಅಲ್ಲ. ಅವನೊಬ್ಬ ಡೋಂಗಿ ವೇಷಗಾರ ಸನ್ಯಾಸಿ. ದಿಗಂಬರ ಸಾಧುವಿಗೆ ಕೇವಲ ನಾಲ್ಕು ವಿಧ ದಾನ ಹೇಳಿದೆ. ಆಹಾರ ಅಭಯ ಔಷಧ ಮತ್ತು ಶಾಸ್ತ್ರ. ಇನ್ನುಳಿದ ಅಥವಾ ಇವುಗಳ ಅಂತರ್ಗತ ಅನೇಕ ವೈಯಾವೃತಾದಿಗಳು ಹೊರತು ಧನ ಕನಕ ಕಾಮಿನಿ ಇತ್ಯಾದಿಗಳ ದಾನ ಜಗತ್ತಿನಲ್ಲಿ ದೀರ್ಘ ಸಂಸಾರಕ್ಕೆ ಕಾರಣವಿದೆ. ಇದನ್ನು ಚೆನ್ನಾಗಿ ತಿಳಿದು ದಾನವನ್ನು ಮಾಡಬೇಕು. ಬಹುಷಃ ಇಂತಹ ಮಾತನ್ನು ಕೇಳಲು ನೇಮಣ್ಣ ಇಷ್ಟು ವರ್ಷ ಜಾತಕ ಪಕ್ಷಿಯಂತೆ ಕಾಯುತ್ತಿರಬೇಕು. ನೇಮಣ್ಣನ ಹೃದಯದಲ್ಲಿ ಅವರ

ಮಾತುಗಳು ನಿಜವಾದ ಸಾಧುತ್ವದ ಬಾಗಿಲನ್ನೇ ತೆರೆದಿರಬೇಕು. ನಾಮಧಾರಿ ಸಾಧುವಿಗೂ ನಿಜವಾದ ಸಾಧುವಿಗೂ ಇರುವ ವ್ಯತ್ಯಾಸ ಒರೆ ಹಚ್ಚಿ ಹೇಳಿದ್ದರವರು.

ಶಂಕೆ – ಸಮಾಧಾನ

ಅವರು ಕುಂಥಲಗಿರಿಗೆ ಬರುವ ಮಾರ್ಗದಲ್ಲಿ ಒಂದು ಪ್ರಶ್ನೆ ಕೇಳಿದೆ.

"ಮಹರಾಜ್! ಸುಕುಮಾರ ಸ್ವಾಮಿಗೆ ಭಯಂಕರ ಉಪಸರ್ಗ ಆಗುವಾಗ ಅವರಿಗೆ ವೇದನೆ ಆಗುತ್ತಿತ್ತೋ ಇಲ್ಲವೋ?

ಪೂಜ್ಯ ಶ್ರೀ – "ಧ್ಯಾನದಲ್ಲಿ ನಿಮಗ್ನವಾಗಿರುವ ಸ್ಥಿತಿಯಲ್ಲಿ ಬಾಹ್ಯದ ಅರಿವು ಇರುವುದಿಲ್ಲ. ನಾನು ಧ್ಯಾನದಲ್ಲಿ ಕುಳಿತಿರುವಾಗ ನೀನು ಚಾಕುವಿನಿಂದ ನನ್ನ ಬೆರಳುಗಳನ್ನು ತಿವಿದು ನೋಡು. ನಮಗೆ ಅರಿವೇ ಇರುವುದಿಲ್ಲ.

ಇನ್ನೊಂದು ಪ್ರಶ್ನೆ ಕೇಳಿದೆ.–

"ಮಹರಾಜ್! ನೀವು ಮಹಾ ಸಾಧುಗಳು. ನಿಮ್ಮ ಸಮಕ್ಷಮದಲ್ಲಿ ಇರುವಾಗ ಎಲ್ಲಾ ಸಾಧುಗಳ ನಿರ್ವಾಹ ಚೆನ್ನಾಗಿ ನಡೆಯುತ್ತದೆ. ನಿಮ್ಮ ನಂತರ ಸಾಧುಗಳ ನಿರ್ವಾಹ ಹೇಗೆ ನಡೆಯಬಲ್ಲದು"

ಉತ್ತರ:- ಆಗಮಾನುಸಾರ ನಡೆಯುವ ಸಾಧುವಿನ ರಕ್ಷೆಯನ್ನು ನಿಯಮ ಪೂರ್ವಕ ಧರ್ಮವೇ ಮಾಡುತ್ತದೆ. ಧರ್ಮಾರಾಧಕ ಸಾಧುವಿನ ವಿಪತ್ತು ನಿಯಮದಿಂದ ಧರ್ಮದಿಂದ ದೂರಾಗುತ್ತದೆ."

"ಧರ್ಮೋ ರಕ್ಷತಿ ರಕ್ಷಿತಃ" ಧರ್ಮವನ್ನು ನಾವು ರಕ್ಷಿಸಿದರೆ ಅದು ನಿಸ್ಸಂಶಯವಾಗಿ ನಮ್ಮನ್ನು ರಕ್ಷಿಸುತ್ತದೆ. ಭಯಂಕರ ವಿಷಪ್ರಾಶನ ಮಾಡಿದಾಗಲೂ,ಕಟ್ಟಡವಿಯಲ್ಲೂ, ವೈರಿಗಳ ಆಕ್ರಮಣವಾದಾಗಲೂ ನಮ್ಮನ್ನು ರಕ್ಷಿಸುವವರು ಯಾರು? ಹಿಂದೆ ನಾವು ಕಾಪಾಡಿದ್ದ ಧರ್ಮವೇ ನಮ್ಮನ್ನು ಆಗ ಕಾಪಾಡುತ್ತದೆ. ಅಂತಹ ಭೀಕರ ಅಪಾಯಕಾರಿ ಸ್ಥಿತಿಯಲ್ಲಿ ಜೀವವನ್ನು ತಂದೆ–ತಾಯಿಗಳಾಗಲಿ, ಹೆಂಡತಿ–ಮಕ್ಕಳಾಗಲಿ,ವೈಭವ ಸಂಪತ್ತಾಗಲಿ ಕಾಪಾಡಲಾರವು. ಆತ್ಮನಿಂದ , ಆತ್ಮನಿಗಾಗಿ ಮತ್ತು ಆತ್ಮನಿಗೋಸ್ಕರ ಚರ್ಯೆಯಲ್ಲಿ ನಿರತರಾದ ಸಾಧುಗಳಿಗೆ ಬಾಹ್ಯದ ತೊಡಕುಗಳು ನಿಲ್ಲದೆ ಓಡಿಹೋಗುವವು. ಶತೃಗಳು ಮಿತ್ರನಂತೆ ಓಡಿಬಂದು ಸೇವೆ ಮಾಡುತ್ತಾರೆ. ಕೊಲ್ಲಲು ಬಂದವರು ಕಾಲಿಗೆ ಬಿದ್ದು ಕ್ಷಮಾಯಾಚಿಸುತ್ತಾರೆ. ಧರ್ಮದ ಪ್ರಭಾವ ಬಹಳ ದೊಡ್ಡದಿದೆ. ಅದಂತೂ ಅನಂತ ಸಂಸಾರ ಸಂತಾಪವನ್ನೇ ಒಣಗಿಸಬಲ್ಲದು.

ಸಂಸಾರ ಸಾಗರವನ್ನೇ ದಾಟಿಸಬಲ್ಲದು. ಭವ ಬಂಧನವನ್ನೇ ಕಿತ್ತು ಹಾಕಬಲ್ಲದು. ಹೀಗಿರುವಾಗ ಅದಕ್ಕೆ ಬಾಹ್ಯದ ತೊಡಕು ಯಾವ ಲೆಕ್ಕ?

ಪೂರ್ವ ಭವದ ಸ್ಮರಣೆ

ಸಲ್ಲೇಖನದ ಮೂರನೇ ವಾರಕ್ಕೆ ಕಾಲಿರಿಸಿದ್ದರು. ಆಗ ನನ್ನನ್ನು ಕರೆಸಿ ಮಂದ ಸ್ವರದ ಪ್ರಸಾದಿತ ವಾಣಿಯಲ್ಲಿ ಹೇಳಿದರು.

"ನಾವು ನಮ್ಮ ಮನೆಯಲ್ಲೇ ಇರುವಂತೆ ಇದ್ದೇವೆ. ಯಾರ ಮೇಲೂ ನಮಗೆ ಮೋಹ ಭಾವವಿಲ್ಲ. ಪೂರ್ವಭವದಲ್ಲೂ ಮುನಿಪದ ಧಾರಣೆ ಮಾಡಿದ್ದೇವೆ ಅನ್ನಿಸುತ್ತದೆ." ಈ ಮಾತನ್ನು ಎಷ್ಟೋ ಬಾರಿ ಹೇಳಿದ್ದರು. ಅವರು ಹಾಗೆ ಹೇಳದಿದ್ದರೂ ಹಿಂದಿನ ಪರ್ಯಾಯದಲ್ಲಿ ಮುನಿ ಪದದ ಅಭ್ಯಾಸ ಮಾಡಿರದೆ ಇಂತಹ ಶ್ರೇಷ್ಠ ತಪಸ್ಸು ಸಿದ್ಧಿಯಾಗುತ್ತಿರಲಾರದು.

ನಿಯಮ ಸಲ್ಲೇಖನವನ್ನು ತೆಗೆದುಕೊಳ್ಳುವ ಪೂರ್ವದಲ್ಲಿ ಶರೀರದ ಬಗ್ಗೆ ಅವರಿಗೆ ತೀವ್ರ ವಿರಕ್ತಿ ಮೂಡಿತ್ತು. ಈ ಮಾತುಗಳಿಂದ ಅದು ತಿಳಿದು ಬಂತು.

ಒಮ್ಮೆ ಅವರ ಪೀಠ ಭಾಗದಲ್ಲಿ ಒಂದು ಗಾಯವಾಯಿತು. ಅದಕ್ಕೆ ಉಪಚಾರ ಮಾಡಿಸಿಕೊಳ್ಳಲು ನಾನು ಆಗ್ರಹಪಡಿಸತೊಡಗಿದೆ. ಆಗ ಅವರೆಂದರು–

"ನಮ್ಮ ಹತ್ತಿರ ಒಂದು ಔಷಧವಿದೆ. ಅದನ್ನು ಹಚ್ಚುವುದರಿಂದ ಈ ರೋಗ ನಷ್ಟವಾಗುತ್ತದೆ. ಶರೀರವೂ ರೋಗ ಮುಕ್ತವಾಗುತ್ತದೆ." ಆಗ ಅಲ್ಲಿಯೇ ಕುಳಿತಿದ್ದ ಒಬ್ಬ ಭಕ್ತನೆಂದ "ಮತ್ತೆ ಹಾಗೆ ಹೇಳುವಿರೇಕೆ. ಅದು ಯಾವ ಔಷಧಿ ಹೇಳಿರಿ. ವ್ಯಯಾಪ್ರತ ಮಾಡುತ್ತೇನೆ."ಆಗ ಅವರೆಂದರು–"ಅರೆ!ನಿನಗೆ ಈ ಔಷಧ ಗೊತ್ತಿಲ್ಲ. ನಾನು ಅದನ್ನು ಇನ್ನು ಎರಡು ತಿಂಗಳಲ್ಲೇ ಉಪಯೋಗಿಸುತ್ತೇನೆ. ಈ ಶರೀರವನ್ನು ಸರಿಮಾಡುತ್ತೇನೆ."

ನಂತರ ಮತ್ತೆ ಹೇಳಲಾರಂಭಿಸಿದರು.

"ಈ ಶರೀರ ಕೆಲವು ತಿಂಗಳಿಂದ ಸಂಪೂರ್ಣ ವಿರೋಧಿಸಲಾರಂಭಿಸಿದೆ. ಮೊದಲು ಹಲ್ಲುಗಳ ಕಿರಿಕಿರಿ ಇತ್ತು. ನಂತರ ಒಂದೊಂದಾಗಿ ಎಲ್ಲವೂ ಹೋಗಿ ಬಿಟ್ಟವು. ಇದಾದನಂತರ ಕಣ್ಣುಗಳ ಜಗಳ ಆರಂಭವಾಯಿತು. ನಿಧಾನ ನಿಧಾನವಾಗಿ ಒಂದು ಕಣ್ಣಿನ ಬೆಳಕು ಕುಗ್ಗತೊಡಗಿತು. ನಂತರ ಎರಡನೆಯದೂ ಹೋಗಲು ಸಿದ್ಧತೆ ನಡೆಸಿದೆ. ನೋಡು!ನಾವು ಈ ಜಿವನದಲ್ಲಿ ಯಾರ ಅಂಕೆಗೂ ಒಳಪಟ್ಟವರಲ್ಲ. ಯಾರನ್ನೂ ಒಳಪಡಿಸಲಿಲ್ಲ. ನಮಗೀಗ ಶರೀರದ ಚಿಂತೆ ಇಲ್ಲ.

ಸ್ವಲ್ಪ ದಿನಗಳಲ್ಲೇ ಸಮಾಧಿ ಧಾರಣೆ ಮಾಡಿಕೊಂಡು ಈ ಶರೀರ ತ್ಯಜಿಸಿ ನವೀನ ನಿರೋಗ ಸ್ವಸ್ಥ ಶರೀರ ಧಾರಣೆ ಮಾಡಿಕೊಳ್ಳುತ್ತೇವೆ. ಆಗ ಶರೀರದ ರೋಗ ತನ್ನಿಂದ ತಾನೇ ಇಲ್ಲವಾಗುತ್ತದೆ"

ಯಮ ಸಲ್ಲೇಖನ ತೆಗೆದುಕೊಳ್ಳುವ ಮುನ್ನ ಹೇಳುತ್ತಿದ್ದ ಅವರ ಈ ಮಾತು ಪೂರ್ವ ನಿರ್ಧಾರ ತಿಳಿಸಿದ್ದವು. ಈ ಮಾತುಗಳನ್ನು ಸಾವಧಾನವಾಗಿ ಕೇಳುತ್ತಿದ್ದ ಆ ಭಕ್ತ ಮಂಕಾಗಿ ಸುಮ್ಮನೆ ಕುಳಿತು ಬಿಟ್ಟ. ತುಸು ನೋವೂ ಆವರಿಸಿತು. ತಟ್ಟನೆ ಯಾರೋ ತಲೆಯ ಮೇಲೆ ತಟ್ಟಿದಂತಾಗಿತ್ತು! ಮಹಾನ್ ತ್ಯಾಗಿಗಳ ಮುಂದೆ ಭೋಗಿಗಳ ನಾಲಿಗೆ ಕಟ್ಟಿಹೋಗುತ್ತದೆ. ಚಂಚಲ ವೃತ್ತಿ ಮುದುರಿ ಹೋಗುತ್ತದೆ.

ಸಲ್ಲೇಖನದ ನಿಶ್ಚಯವನ್ನು ಅವರು ೧೯೫೧ ರಲ್ಲೇ ಗಜಪಂಥದಲ್ಲಿ ಮಾಡಿದ್ದರು. ಆದರೆ ಯಮ ಸಲ್ಲೇಖನದ ನಿಶ್ಚಯ ಕುಂಥಲಗಿರಿಯಲ್ಲೇ ಆಗಿಬಿಟ್ಟಿತು. ಅವರ ಈ ಮಾತನ್ನು ೧೯೫೨ರ ಬಾರಾಮತಿ ಚಾತುರ್ಮಾಸದಲ್ಲಿ ಹೇಳಿದ್ದರು.

"ನಾವು ಸಲ್ಲೇಖನದ ೧೨ ವರ್ಷಗಳ ಉತ್ಕೃಷ್ಟ ನಿಯಮ ತೆಗೆದುಕೊಂಡಿದ್ದೇವೆ. ಇಲ್ಲಿಯವರೆಗೆ ಈ ಮಾತನ್ನು ಪ್ರಕಟಿಸಿರಲಿಲ್ಲ. ನಿನ್ನಲ್ಲಿ ಮಾತ್ರ ಹೇಳುತ್ತಿದ್ದೇವೆ. ನೀನು ಈ ಮಾತನ್ನು ಬೇರೆಯವರಿಗೆ ಹೇಳುವುದಾದರೆ ಹೇಳಬಹುದು ಇಲ್ಲ. ಇದಾದ ನಂತರ ಅವರ ಸಾಧನೆ ಬಹಳ ಉಗ್ರರೂಪ ತಾಳಿತ್ತು.

ಕುಂಥಲಗಿರಿ ಚಾತುರ್ಮಾಸ

ಸಲ್ಲೇಖನ ಸ್ವೀಕರಿಸುವ ೨ ವರ್ಷ ಪೂರ್ವ ೧೯೫೨ರಲ್ಲಿ ಕುಂಥಲಗಿರಿಯಲ್ಲಿ ಅವರ ಚಾತುರ್ಮಾಸ ನಡೆದಿತ್ತು. ಆಗ ಅವರ ಉಪವಾಸ ಬೃಹದ್ರೂಪದಲ್ಲಿ ನಡೆದಿತ್ತು.

ಅಂದು ಪರ್ವತವೇರಿ ಅವರ ದರ್ಶನ ಮಾಡಿದ್ದೆ. ಅವರು ಐದು ಉಪವಾಸ ನಿಯಮ ಸ್ವೀಕರಿಸಿ ಅಖಂಡ ಮೌನದಲ್ಲಿ ಮುಳುಗಿದ್ದರು."ಸ್ವಾಮಿ! ದೇಶದ ಬೇರೆ ಬೇರೆ ಕಡೆಯ ಆಮಂತ್ರಣಗಳನ್ನು ತಿರಸ್ಕರಿಸಿ ನಿಮ್ಮ ಪವಿತ್ರ ದರ್ಶನಕ್ಕೆ ಬಂದಿದ್ದೇನೆ ಎಂದು ವಂದಿಸಿ ಹೇಳಿದೆ. ಆದರೂ ಅವರ ಮೌನ ಮುರಿಯಲಿಲ್ಲ. ಶಾಸ್ತ್ರ ಚರ್ಚೆಗಾದರೂ ಮೌನ ಭಂಗವಾಗಲಿಲ್ಲ.

ಐದು ದಿನಗಳ ನಂತರ ಅವರು ಆಹಾರ ತೆಗೆದುಕೊಂಡರಾದರೂ ಇನ್ನೈದು ದಿನಗಳ ಉಪವಾಸ ನಿಯಮ ಸ್ವೀಕರಿಸಿಬಿಟ್ಟರು. ಆದರೆ ಆಗ ಮೌನ

ಮಾಡಿಕೊಳ್ಳಲಿಲ್ಲ. ಆಗ ಅವರೆಂದರು. ಇಷ್ಟು ದೂರದಿಂದ ನಮ್ಮ ದರ್ಶನಕ್ಕಾಗಿ ಬಂದಿದ್ದೀಯೆ. ನಿನ್ನ ಭಾವವನ್ನು ತಿಳಿದು ಮೌನ ಮಾಡಲಿಲ್ಲ."

ಅವರ ಈ ಉಗ್ರ ಉಪವಾಸಗಳು ಸಮಾಧಿ ಸಾಧನೆಗಾಗಿ ಎಂದು ತಿಳಿಸಿದರು. ಪೂಜ್ಯ ಶ್ರೀಯವರ ನೈಜ ಪ್ರವೃತ್ತಿ ಆಗಮಾನುಸಾರ ಎಂದು ಭಗವತಿ ಆರಾಧನಾ ಗ್ರಂಥ ಓದುವುದರಿಂದ ತಿಳಿದು ಬರುತ್ತದೆ. ಅವರ ಚರ್ಯೆ ನೋಡುವ ಮಾತ್ರದಿಂದಲೇ ಶಾಸ್ತ್ರದ ಕಠಿಣ ಸಮಸ್ಯೆಗಳಿಗೆ ಸಮಾಧಾನ ಸ್ವಯಮೇವ ಮೂಡುತ್ತದೆ.

ಮುನಿ ಪದದ ಆದರ್ಶ

ಭರತ ಚಕ್ರವರ್ತಿಯ ಬಗ್ಗೆ ಮಹಾಪುರಾಣಕಾರರು ಒಂದು ಮಾತು ಹೇಳಿದ್ದಾರೆ-ಶಾಸ್ತ್ರಜ್ಞರು ಪೂರ್ವೋಕ್ತ ಶಾಸ್ತ್ರಗಳು ಹೊರತಾಗಿ ಅನ್ಯ ಕಲಾಶಾಸ್ತ್ರಗಳ ಸಂಗ್ರಹದಲ್ಲಿ ಭರತೇಶ್ವರನನ್ನೇ ಕನ್ನಡಿಯನ್ನಾಗಿ ನೋಡಿ ಸಂಶಯ ಮುಕ್ತರಾಗುತ್ತಿದ್ದರು. ಕಲಾವೇತ್ತರುಗಳಿಗೆ ಭರತನ ಜೀವನ ಆದರ್ಶ ಪ್ರಾಯವಾಗಿತ್ತು.

ಆಚಾರ್ಯ ಶ್ರೀಯವರ ಬಗ್ಗೆಯೂ ಇದೇ ಕಥನ ಉಚಿತವಾಗಿದೆ. ಶಾಸ್ತ್ರವಾಚನ ಸಮಯದಲ್ಲಿ ಆಚಾರ್ಯ ಮಹರಾಜರ ದಿವ್ಯ ಜೀವನ ಮತ್ತು ಅವರ ಪ್ರವೃತ್ತಿಯನ್ನು ಸದಾ ಸ್ಮರಿಸುತ್ತಿದ್ದೆ. ಆಗ ಸಂಶಯಗಳು ಏನಾದರೂ ಇದ್ದರೆ ಅವರನ್ನು ಸ್ಮರಿಸುತ್ತಲೇ ದೂರಾಗಿ ಬಿಡುತ್ತಿದ್ದವು. ಅವರ ನಡೆನುಡಿಗಳು ಶಾಸ್ತ್ರಗಳ ಪ್ರಮಾಣ ಗ್ರಂಥಗಳಷ್ಟೇ ಮಾನ್ಯವಾಗಿದ್ದವು. ಅವರು ಆಗಮರೂಪ ನೇತ್ರದಿಂದ ನೋಡಿ ನಡೆಯುತ್ತಿದ್ದರು. ಕುಂದಕುಂದರು ಪ್ರವಚನ ಸಾರದಲ್ಲಿ ಹೀಗೆ ಹೇಳಿದ್ದಾರೆ."ಸಾಧುಗಳ ನೇತ್ರ ಆಗಮ. ಜೀವಿಗಳ ನೇತ್ರಚಕ್ಷು. ದೇವತೆಗಳ ನೇತ್ರ ಅವಧಿಜ್ಞಾನ. ಸಿದ್ಧರು ಸವತ್ರ ಚಕ್ಷುಗಳು."

ನಿಷ್ಕಲ್ಮಶ ಪ್ರವೃತಿ

"ಒಂದು ವೇಳೆ ಒಬ್ಬ ಸಣ್ಣ ಬಾಲಕನೂ ನಮ್ಮ ತಪ್ಪನ್ನು ತೋರಿಸಿಕೊಡುವುದಾದರೆ ನಾವು ಅದನ್ನು ಮರುಮಾತಿಲ್ಲದೆ ತಿದ್ದಿಕೊಳ್ಳುತ್ತೇವೆ." ಮಾತ ಸತ್ಯವತಿ ಕೊಟ್ಟ ಸಂಸ್ಕಾರ ಸಾರ್ಥಕವಾಗಿತ್ತು!

ಒಂದು ದಿನ ಅತಿ ವಿಸ್ಮಯಕಾರಿ ಘಟನೆ ನಡೆಯಿತು. ಏಳೆಂಟು ವರ್ಷದ ಒಬ್ಬ ಚಿಕ್ಕ ಬಾಲಕಿ ಒಂದು ದಿನ ಅವರ ದರ್ಶನಕ್ಕೆ ಬಂದು ವಿನಮ್ರವಾಗಿ ವಂದಿಸಿದಳು. ಆ ಚಿಕ್ಕ ಕಂದನನ್ನು ಕಂಡು ಅವರಿಗೆ ಕರುಣೆ ಉಕ್ಕಿತು.

ಆ ಹುಡುಗಿಯನ್ನು ಕೇಳಿದರು"ನೀನು ಯಾರಮ್ಮಾ"

ಆ ಹುಡುಗಿ ಅವರ ಪ್ರಶ್ನೆಗೆ ಉತ್ತರ ಹೇಳದೆ ಸುಮ್ಮನೆ ನಿಂತಿತು. ಮತ್ತೆ ಕೇಳಿದರು.

"ನೀನೇಕೆ ಬಂದಿದ್ದೆ"

ಆ ಹುಡುಗಿಯಿಂದ ಯಾವ ಉತ್ತರವೂ ಬರಲಿಲ್ಲ. ಅರೆ! ಆ ಹುಡುಗಿಗೇನಾದರೂ ಮಾತು ಬರುವುದಿಲ್ಲವೋ ಎಂದು ಅನುಮಾನಿಸಿದರು. ಮತ್ತೊಂದು ಪ್ರಶ್ನೆ ಹಾಕಿದರು "ನಿನ್ನ ತಾಯಿ ಯಾರಮ್ಮಾ?"

ಅದಕ್ಕೂ ಆ ಹುಡುಗಿಯಿಂದ ಉತ್ತರ ಬರಲಿಲ್ಲ. ಆದರೆ ಆ ಹುಡುಗಿಯ ಮುಖದಲ್ಲಿ ಒಂದು ವಿಶಿಷ್ಟ ಗಾಂಭೀರ್ಯವಿತ್ತು. ಪಟ್ಟುಬಿಡದೆ ಮತ್ತೆ ಕೇಳಿದರು.

"ಯಾರಮ್ಮ ನಿನ್ನ ತಂದೆ"

ಆ ಹುಡುಗಿ ತುಟಿ ಬಿಚ್ಚಲಿಲ್ಲ. ಮೌನ ಮುರಿಯಲಿಲ್ಲ. ಯಾವುದೋ ಧ್ಯಾನಸ್ಥ ಬೊಂಬೆಯಂತೆ ನಿಶ್ಚಲವಾಗಿ ನಿಂತುಬಿಟ್ಟಿತು. ಪೂಜ್ಯಶ್ರೀಯವರಿಗೆ ವಿಚಿತ್ರ ಕುತೂಹಲ ಕೆರಳಿತು.

ಯಾರಮ್ಮಾ ನೀನು? ಯಾರ ಮಗಳು?

ತುಸು ನಸು ಕೋಪ ಸ್ವರದಲ್ಲಿ ಎತ್ತರದ ಧ್ವನಿಯೆತ್ತಿ ಕೇಳಿದರು. ಇದ್ದಕ್ಕಿದ್ದಂತೆ ಕೆರೆಯ ತೂಬು ಒಡೆದಂತೆ ಒಮ್ಮೆಗೆ ಉತ್ತರ ಭೋರ್ಗರೆದು ಹೊರಟಿತು.

ನಾನು......ನನ್ನವಳೇ!

ಮೌನ ಭೇದಿಸಿ ಆ ದಿಟ್ಟ ಹುಡುಗಿ ಕೊಟ್ಟ ಉತ್ತರ ಆ ಮಹಾ ಪುರುಷನಿಗೂ ಸತ್ವದ ಸವಾಲೆಸೆದಂತೆ ಕಂಡಿತು!

ಈ ಮಾತು ಕೇಳಿ ಅವರು ಸಂತೋಷದಿಂದ ರೋಮಾಂಚನಗೊಂಡರು. ಎಂತಹ ಆಧ್ಯಾತ್ಮ ಮೌಲ್ಯವನ್ನುಆ ಪುಟ್ಟ ಹುಡುಗಿ ಉಸಿರಿಸಿದ್ದಳು!

ಓಹ್!"ಈ ಪುಟ್ಟ ಹುಡುಗಿ ನನಗೆ ಇಂದು ಸಮಯಸಾರ ಕಲಿಸಿದಳು!" ಎಂದು ಈ ಮಹಾತ್ಮನ ಬಾಯಿಂದ ಉದ್ಗಾರವೊಂದು ಹೊರಟಿತು.

ಆ ಹುಡುಗಿಯ ಜ್ಞಾನಕ್ಕೆ ಧೈರ್ಯಕ್ಕೆ ಅಲ್ಲಿ ಸೇರಿದ್ದವರೆಲ್ಲ ಬೆಕ್ಕಸ ಬೆರಗಾಗಿ ಹೋದರು. ಅದೆಷ್ಟೋ ವರ್ಷ ಸಾಧಿಸಿದರೂ ದಿಗಂಬರ ಯತಿಗಳಿಗೂ

ಹೊಳೆಯದ, ತಿಳಿಯದ ನಿಗೂಢ, ಆಧ್ಯಾತ್ಮ ರಹಸ್ಯವನ್ನು ಆ ಚಿಕ್ಕ ಬಾಲಿಕೆ ಹೇಳಿದ್ದು ಎಂತಹ ಆಶ್ಚರ್ಯದ ಮಾತು! ಪೂಜ್ಯ ಶ್ರೀಯವರ ಅಪೇಕ್ಷೆ ಮೇರೆ ಆ ಹುಡುಗಿಗೆ ಪುರಸ್ಕಾರ ಕೊಡಲಾಯಿತು. ಒಬ್ಬೊಬ್ಬರೂ ಆ ಹುಡುಗಿಯನ್ನು ಅಪ್ಪಿ ಮುದ್ದಾಡುವವರೇ

ಮಹತ್ಪೂರ್ಣ ವಾರ್ತಾಲಾಪ

ಆಗ ೨೭ನೇ ಉಪವಾಸದ ದಿನ. ಕೊಲ್ಹಾಪುರದ ಲಕ್ಷ್ಮೀಸೇನ ಭಟ್ಟಾರಕ ಸ್ವಾಮಿಗಳು ಬಂದಿದ್ದರು.

ಅವರು ಕೇಳಿದರು.

ಮಹರಾಜ್!"ಶಾಂತಿಯಂತೂ ಇದೆಯಲ್ಲ?"

ಅವರು:–"ಪೂರ್ಣ ಶಾಂತಿ ಇದೆ ಈ ಶರೀರದಲ್ಲೂಇದೆ."

ಪ್ರಶ್ನೆ:"ನೀವು ಮಹಾಪುಣ್ಯ ಪುರುಷರು. ನಿಮ್ಮ ಪುಣ್ಯಪ್ರಭಾವದಿಂದಲೇ ಶಾಂತಿ ಇದೆ."

ಉತ್ತರ: "ಅರೆ ಬಾಬಾ! ಇದರಲ್ಲಿ ನಮ್ಮ ಪುಣ್ಯದ ಮಾತೇನಿದೆ? ಭಗವಾನ್ ದೇಶ ಭೂಷಣ ಕುಲಭೂಷಣರ ಪ್ರಭಾವ ಹಾಗಿದೆ"

ಅವರ ಶ್ರದ್ಧೆ ಅಪೂರ್ವವಾಗಿತ್ತು.

ಈ ಮೊದಲು ಸಲ್ಲೇಖನದ ೨೦ನೇ ದಿನದಲ್ಲಿ ಕೆಲವು ಮಾತು ಹೇಳಿದ್ದರು.

"ನಮ್ಮ ಶರೀರ ಬಹಳ ದುರ್ಬಲವಾಗುತ್ತಿದೆ. ಕಣ್ಣುಗಳು ಮಂದವಾಗುತ್ತಿವೆ. ನಿರ್ದೋಷ ರೀತಿಯಿಂದ ಸಂಯಮ ಪಾಲಿಸಲು ವಿಘ್ನ ಬರುತ್ತಿದೆ. ಆದ್ದರಿಂದ ಸಲ್ಲೇಖನ ಧಾರಣೆ ಮಾಡಿಕೊಳ್ಳಬೇಕಾಗಿದೆ."

ಅಷ್ಟರಲ್ಲಿ ಮತ್ತೊಬ್ಬರು ಹೇಳಿದರು–

"ಮಹರಾಜ್!ನೀವೇನೋ ತೀರ್ಥಂಕರರಾಗತಕ್ಕವರು" ಅದಕ್ಕೆ ಅವರು ಕೂಡಲೇ ಉತ್ತರಿಸಿದರು.

ತೀರ್ಥಂಕರರಾಗುವೆವ್ವೋ ಕೇವಲಿಯಾಗುವೆವ್ವೋ ಏನಾದರಾಗಲಿ ಮೋಕ್ಷ ಪ್ರಾಪ್ತಿಯಾದರೆ ತೀರಿತು!"ಇನ್ನೊಂದು ಕ್ಷಣ ಬಿಟ್ಟು ಮತ್ತೆ ಹೇಳಿದರು.

"ನಮಗೆ ಅದರ ಇಚ್ಛೆಯೂ ಇಲ್ಲ"

ಆಗ ನಾನು ಹೇಳಿದೆ.

"ಮಹರಾಜ್! ನಿಮ್ಮ ಈ ಶರೀರ ನಮ್ಮ ದೃಷ್ಟಿಯಿಂದ ಕಲ್ಯಾಣಕಾರಿ ಹಾಗೂ ಪವಿತ್ರವಾದುದು. ಹಾಗಿದ್ದರೂ ನೀವೂ ಉಪೇಕ್ಷೆ ಮಾಡುವಂತಹದ್ದಲ್ಲ. ಏಕೆಂದರೆ ಇದು ರತ್ನತ್ರಯ ಸಾಧಿಸಿದ ದೇಹ. ಎಲ್ಲಿಯವರೆಗೆ ಈ ದೇಹವಿರುವುದೋ ಅಲ್ಲಿಯವರೆಗೆ ಈ ಮಹಾವ್ರತಿಯ ಜೀವನವಿರುತ್ತದೆ. ಇದರಿಂದ ನೀವು ಆರು ಏಳನೇ ಗುಣ ಸ್ಥಾನದ ಆತ್ಮಾನಂದ ಆಸ್ವಾದಿಸಬಹುದು. ಇದನ್ನು ಬಿಡುವುದರಿಂದ ಶೀಘ್ರವೇ ನಿಮಗೆ ಹಾನಿಯಾಗುತ್ತದೆ. ನಂತರ ನೀವು ಅವಿರತ ಗುಣಸ್ಥಾನದ ಶರೀರ ಧಾರಣೆ ಮಾಡಬೇಕಾಗುತ್ತದೆ. ಆದ್ದರಿಂದ ನೀವು ಜಲಗ್ರಹಣ ಬಿಡಬಾರದು."

ಅವರು ಹೇಳಿದರು–"ನಾವು ಜಲಗ್ರಹಣವನ್ನು ಎಲ್ಲಿ ಬಿಟ್ಟಿದ್ದೇವೆ?"

ನಾನು–"ನೀವು ನಾಲ್ಕು ದಿನಗಳಿಂದ ಜಲಗ್ರಹಣ ಮಾಡುವುದನ್ನು ಬಿಟ್ಟು ಬಿಟ್ಟಿದ್ದೀರಿ."ಮುಂದೆ ಜಲಗ್ರಹಣ ಮಾಡಲು ಮನಸ್ಸು ಮಾಡಿರಿ.

ಅವರ ಶರೀರ ತೇಜಃಪುಂಜವಾಗಿತ್ತು. ಅವರು ಅಷ್ಟುದಿನಗಳು ಉಪವಾಸ ಮಾಡುತ್ತಿದ್ದರೂ ನಾಲ್ಕೈದು ಉಪವಾಸ ಮಾಡಿದವರಂತೆ ಕಂಡರು. ಅವರ ತೇಜಃಪುಂಜ ಶರೀರ ನೋಡಿದ ಯಾರೇ ಜಡವಾದಿಯ ಹೃದಯದಲ್ಲಿ ಆತ್ಮೀಕ ಜಾಗೃತಿ ಹುಟ್ಟದೆ ಇರದು!

ದೇಶಭೂಷಣ–ಕುಲಭೂಷಣ ಭಗವಾನರ ಅಭಿಷೇಕವನ್ನು ಯಾವಾಗ ಅಂತಿಮವಾಗಿ ದರ್ಶನ ಮಾಡಿದರೋ ಆ ದಿನ ಅವರ ಬೆನ್ನ ಹಿಂದೆಯೇ ನಿಂತುಕೊಂಡಿರುವ ಸೌಭಾಗ್ಯ ನನಗೆ ದೊರೆತಿತ್ತು.

ನಾನು ಅವರನ್ನು ಸಂಪೂರ್ಣ ದೃಷ್ಟಿ ಇಟ್ಟು ನೋಡುತ್ತಿದ್ದೆ. ಅವರ ಶರೀರದ ತೇಜಸ್ಸನ್ನು ಇನ್ನೊಬ್ಬರಿಗೆ ಹೋಲಿಸಲಾಗದು. ಅವರ ಶರೀರ ವಿಶೇಷ ದೀಪ್ತಿಯಿಂದ ಮಿರುಗುತ್ತಿತ್ತು. ಮುಖದಲ್ಲಿ ವಿಶೇಷ ಕಳೆ ತುಂಬಿತ್ತು. ಸೂರ್ಯೋದಯಕ್ಕೆ ಮುನ್ನ ಮೂಡಣ ಬೆಟ್ಟವನ್ನು ಮುತ್ತಿಟ್ಟು ಹೊಂಬಣ್ಣ ಕಾಂತಿಯನ್ನುಂಟುಮಾಡುವ ವೀಚಿ ಮಾಲೆಗಳಂತೆ ಅವರ ಶರೀರ ಅಪೂರ್ವ ಆಧ್ಯಾತ್ಮ ಕಾಂತಿಯಿಂದ ಕೂಡಿತ್ತು."

ಏಕಾಗ್ರ ಚಿತ್ತದಿಂದ ಅಭಿಷೇಕ ನೋಡುತ್ತಿದ್ದರು ಅದು ೨೦ನೇ ಉಪವಾಸದ ದಿನವಿತ್ತು. ಭಕ್ತಿಯಿಂದ ಗಂಧೋದಕ ತೆಗೆದುಕೊಂಡರು. ಮತ್ತೆ

೨೧ನೇ ದಿನವೂ ಅದೇ ರೀತಿ ಸ್ವಯಂ ಗಂಧೋದಕ ಸ್ವೀಕರಿಸಿದರು. ಆಗಮ ಪ್ರಾಣರಾದ ಸಾಧು ರಾಜನ ದೃಷ್ಟಿಯಲ್ಲಿ ಅಭಿಷೇಕದ ಮೌಲ್ಯ ಅವರ್ಣನೀಯವಿತ್ತು.

ಅಭಿಷೇಕ ಜೈನ ಸಂಸ್ಕೃತಿಯ ವಿರುದ್ಧವೆಂದು ಕೆಲವರು ಹೇಳುತ್ತಾರೆ. ಅಂತವರು ಆಗಮದ ಅಭ್ಯಾಸ ಮಾಡಬೇಕು. ಸ್ವರ್ಗದಲ್ಲಿ ಜನ್ಮತಾಳಿದ ಸಮ್ಯಗ್ದೃಷ್ಟಿ ದೇವ ಜೇನೆಂದ್ರ ಭಗವಾನರ ಪೂಜೆ ಮತ್ತು ಅಭಿಷೇಕ ಮಾಡುತ್ತಾನೆ. ದೇವೇಂದ್ರಾದಿ ದೇವತೆಗಳು ಅಷ್ಟಾಹ್ನಿಕದಲ್ಲಿ ಅಕೃತಿಮ ಜಿನಬಿಂಬಗಳಿಗೆ ಮಹದಾನಂದದಿಂದ ಪೂಜಾಭಿಷೇಕ ಮಾಡುತ್ತಾರೆ. ಆಗಮ ಶ್ರಧ್ಧಾಳುಗಳು ಶಾಸ್ತ್ರಾಜ್ಞೆಯ ಂತೆ ನಡೆಯಬೇಕೆಂದು ಪೂಜ್ಯಪಾದಾರ್ಚಾಯರು ಅಭಿಷೇಕದ ಬಗ್ಗೆ ಬರೆದಿದ್ದಾರೆ. ಆಚಾರ್ಯ ಶಾಂತಿಸಾಗರರು ಆಗಮ ಪ್ರಾಣರು. ಒಂದು ವೇಳೆ ಪೂಜಾಭಿಷೇಕಗಳು ಆಗಮ ವಿರುದ್ಧವಿದ್ದರೆ ಅವರೆಂದೂ ಶ್ರದ್ಧಾಭಕ್ತಿಯಿಂದ ನೋಡ್ಡುತ್ತಿರಲಿಲ್ಲ. ಅಭಿಷೇಕ ಪೂಜಾದಿಗಳು ಶ್ರಾವಕರ ಭಾವಶುದ್ಧಿಗಾಗಿ ಇವೆ. ಕುಂದಕುಂದರು ದಾನ ಮತ್ತು ಪೂಜೆಗಳನ್ನು ಶ್ರಾವಕರ ಮುಖ್ಯ ಕರ್ತವ್ಯವೆಂದು ಹೇಳಿದ್ದಾರೆ. ಒಂದು ವೇಳೆ ಪೂಜಾಭಿಷೇಕ ಶಾಸ್ತ್ರೋಕ್ತವಲ್ಲದಿದ್ದರೆ ಅವರೇಕೆ ಹಾಗೆ ಹೇಳುತ್ತಿದ್ದರು?" ಜಿಣಾಭಿಸೇಯಂ ಪೂಜಂ ಕುವ್ವಂತಿಸದ್ದಿಠ್ಠಿ." ಈ ರೀತಿ ಆಗಮದ ವಾಖ್ಯವಿದೆ. ಜೀವಂಧರ ಸ್ವಾಮಿಯು ರಾಜಪುರಿ ಜಿನಾಲಯದಲ್ಲಿ ಅಭಿಷೇಕ ಮಾಡುವುದಕ್ಕಾಗಿ ಹೋದ ಎಂದು ಕ್ಷತ್ರ ಚೂಡಮಣಿಯಲ್ಲಿ ಹೇಳಿದೆ. ಮೇಲಿನ ಕಥನಗಳಲ್ಲದೆ ಮಹರ್ಷಿ ಪೂಜ್ಯ ಪಾದಾದಿಗ್ರಂಥಗಳಲ್ಲಿ ಕ್ಷೀರಾದಿಗಳ ಅಭಿಷೇಕ ವರ್ಣನೆ ಬಂದಿದೆ.

ಮುನಿ ಬಂಧುವಿಗ ಸಂದೇಶ

೯೨ ವರ್ಷ ವಯಸ್ಸಿನ ಮುನಿಬಂಧು ಚಾರಿತ್ರ ಚೂಡಾಮಣಿ ಶ್ರೀ ೧೦೮ ವರ್ಧಮಾನಸಾಗರರಿಗೆ ಪೂಜ್ಯ ಶ್ರೀಯವರು ಸಂದೇಶ ಕಳಿಸಿದರು.

"೧೨ ವರ್ಷ ನಿಯಮ ಸಲ್ಲೇಖನಾ ನಿಯಮ ಪೂರ್ತಿಗೆ ಆರು–ಏಳು ವರ್ಷಗಳು ಬಾಕಿ ಉಳಿದಿದೆ. ಆದರೂ ಏನು ಗಡಿಬಿಡಿ ಮಾಡಿಕೊಳ್ಳಬಾರದು. ಎಲ್ಲಿಯವರೆಗೆ ಶಕ್ತಿ ಇದೆಯೋ ಅಲ್ಲಿಯವರೆಗೆ ವಿಹರಿಸುತ್ತಿರಬೇಕು. ಆಗಮೋಕ್ತ ಆಹಾರ–ವಿಹಾರ ಇಟ್ಟುಕೊಳ್ಳಬೇಕು. ಧೈರ್ಯದಿಂದ ಆತ್ಮಚಿಂತನೆ ಮಾಡಬೇಕು. ನಮ್ಮ ಅಂತ್ಯದ ನಂತರ ದುಃಖಿಯಾಗಬಾರದು. ಮತ್ತು ಪರಣಾಮದಲ್ಲಿ ಕೆಡಕನ್ನುಂಟುಮಾಡಿಕೊಳ್ಳಬಾರದು. ಶಕ್ತಿ ಇದ್ದರೆ ಶೇಡಬಾಳದ ಸುತ್ತಮುತ್ತ ವಿಹರಿಸುತ್ತಿರಬೇಕು. ಇಲ್ಲವಾದರೆ ಸ್ವಲ್ಪ ದಿನ ಶೇಡಬಾಳದ ಬಸ್ತಿಯಲ್ಲಿ ಮತ್ತು ಸ್ವಲ್ಪ ಕಾಲ ಶೇಡಬಾಳದ ಆಶ್ರಮದಲ್ಲಿ ಕಾಲವನ್ನು ಕಳೆಯಬೇಕು. ನಿಮ್ಮ ತಂದೆ ಅಜ್ಜಂದಿರು ಸಲ್ಲೇಖನ ವಿಧಿ ಪೂರ್ವಕ ಶರೀರ ತ್ಯಾಗ ಮಾಡಿದ್ದಾರೆ. ಆ

ಪರಂಪರೆಯ ಮಾರ್ಗದಲ್ಲಿ ಧೈರ್ಯವಾಗಿ ನಡೆದು ಹೋಗಬೇಕು. ಈ ಮಾರ್ಗದಲ್ಲಿ ನಡೆದರೆ ಸ್ವರ್ಗ ಮೋಕ್ಷ ಪ್ರಾಪ್ತಿಯಾಗುತ್ತದೆ."

ಭಟ್ಟಾರಕ ದ್ವಯರಿಗೆ ಉಪದೇಶ

ಕುಂಥಲಗಿರಿಯಲ್ಲಿ ಆಚಾರ್ಯ ಶ್ರೀಯವರು ಸಲ್ಲೇಖನ ತೆಗೆದುಕೊಂಡ ಮೇಲೆ ಭಟ್ಟಾರಕ ಲಕ್ಷ್ಮೀಸೇನ,ಭಟ್ಟಾರಕ ಜಿನಸೇನ ಸ್ವಾಮಿಗಳು ಅವರ ಸಮೀಪ ಸದಾ ಇರುತ್ತಿದ್ದರು. ಒಮ್ಮೆ ಪೂಜ್ಯಶ್ರೀಯವರು ಅವರಿಬ್ಬರಿಗೂ ಮಹತ್ಪೂರ್ಣ ವಿಚಾರ ತಿಳಿಸಿದರು.

"ಧರ್ಮದ ರಕ್ಷಣೆ ಮಾಡಿರಿ. ಸಮಾಜದ ರಕ್ಷಣೆ ಮಾಡಿ. ಸಾಧು ಸಂತರನ್ನು ರಕ್ಷಣೆ ಮಾಡಿ." ಭಟ್ಟಾರಕ ಲಕ್ಷ್ಮೀಸೇನರಿಗೆ ನಿರ್ಗ್ರಂಥರಾಗುವ ಭಾವವಿತ್ತು. ಅದಕ್ಕೆ ಮುನ್ನವೇ ಸ್ವರ್ಗವಾಸಿಗಳಾದರು. ಸಲ್ಲೇಖನಾ ತೆಗೆದುಕೊಂಡ ಮೇಲೆ ಮೂರು ಮುಖ್ಯ ವಿಚಾರ ತಿಳಿಸಿದರು.

(!) ಜಿನವಾಣಿಯಲ್ಲಿ ವಿಶ್ವಾಸವಿಡಿ (೨) ಸ್ವಾಧ್ಯಾಯ ಪ್ರಚಾರ ಮಾಡಿ (೩) ಜೈನ ಧರ್ಮದ ಪ್ರಚಾರ ಮಾಡಿರಿ. ಇವು ಮೂರು ಈ ಯುಗದ ರತ್ನತ್ರಯಗಳಂತೆ ಇದ್ದವು.

"ನಾವು ಇಂದ್ರಿಯಗಳನ್ನು ನಿಗ್ರಹ ಮಾಡಿ ೪೦ ವರ್ಷಗಳ ಅನುಭವವಾಗಿ ಹೋಗಿದೆ. ಸರ್ವೇಂದ್ರಿಯಗಳು ನಮಗೆ ಅಧೀನವಾಗಿವೆ. ಅವು ತಮ್ಮ ಆಜ್ಞೆಯನ್ನು ತಮ್ಮ ಮೇಲೆ ಚಲಾಯಿಸಲಾರವು."ಮತ್ತೆ ಹೇಳಿದರು.

"ಈಗ ಪ್ರಾಣ ಸಂಯಮ ಅಂದರೆ ಪೂರ್ಣ ರೀತಿಯಿಂದ ಜೀವಿಗಳನ್ನು ರಕ್ಷಿಸಲು ನಮ್ಮಿಂದ ಆಗುತ್ತಿಲ್ಲ. ಏಕೆಂದರೆ ನೇತ್ರ ಜ್ಯೋತಿ ಮಂದವಾಗುತ್ತಿದೆ. ಆದ್ದರಿಂದ ನಾವು ಸಲ್ಲೇಖನಕ್ಕೆ ಶರಣಾಗಬೇಕಾಯಿತು. ಸಮಾಧಿಗಾಗಿ ಯಾರಿಂದಲೂ ಣಮೋಕಾರ ಮಂತ್ರ ಹೇಳಿಸಿಕೊಳ್ಳುವ ಅಗತ್ಯ ನಮಗೆ ಬೀಳಲಾರದು"

ಸೇವಕನ ಸ್ಮರಣೆ

ಮೊದಲು ನಸಲಾಪುರದಲ್ಲಿ ಶ್ರೀ ಹನುಗೊಂಡಾರವರು ಪೂಜ್ಯ ಶ್ರೀಯವರನ್ನುಬಹಳ ಶ್ರದ್ಧೆಯಿಂದ ಸೇವೆ ಮಾಡಿದ್ದರು. ಸಲ್ಲೇಖನದ ೯ನೇ ದಿನ ಅವರ ಸ್ಮರಣೆ ಬಂದಿತು. ಆಗ ಹನಗೊಂಡಾರವರಿಗೂ ೮೦ ವರ್ಷ ವಯಸ್ಸಾಗಿತ್ತು. ಪೂಜ್ಯ ಶ್ರೀಯವರಿಗೆ ಅವರ ಸ್ಮರಣೆ ಬರುತ್ತಲೇ ಹನಗೊಂಡ ಅವರ ಸೇವೆಗಾಗಿ ಧಾವಿಸಿ ಬಂದರು.

ಪರಮ ಕರುಣಾಪೂರಿತ ನೋಟ ಬೀರಿ ಅವರಿಗೆ ಕೆಲವು ಮಾತು ಹೇಳಿದರು.

"ನೀನು ನಮಗೆ ಬಹಳ ಸೇವೆ ಮಾಡಿದ್ದೀಯೆ. ದೇವ ಗುರುಶಾಸ್ತ್ರಗಳಲ್ಲಿ ಸದಾ ಶ್ರದ್ಧೆ ಇಟ್ಟಿರಬೇಕು" ಇಷ್ಟು ಹೇಳಿ ಆಶೀರ್ವದಿಸಿದರು. ಅವರು ಅಷ್ಟು ಹೇಳಿದರೋ ಇಲ್ಲವೋ ಹನಗೊಂಡರವರು ಅವರ ಚರಣಕ್ಕೆ ದೊಪ್ಪನೆ ಬಿದ್ದು ಸಣ್ಣ ಮಕ್ಕಳಂತೆ ರೋಧಿಸತೊಡಗಿದರು. ಪೂಜ್ಯ ಶ್ರೀಯವರಿಗೆ ಈ ಮೋಹಿ ಜೀವಿಯನ್ನು ನೋಡಿ ಬಹಳಕರುಣೆ ಹುಟ್ಟಿತು.

"ಅರೇ! ಈ ಸಂಸಾರ ಅಸಾರವಾದುದು. ದುಃಖಿಸುವುದರಿಂದಲೂ ಸಾರಭೂತವಾಗದು ಹುಟ್ಟಿದ್ದು ಸಾಯಲೇ ಬೇಕು. ನಮ್ಮ ಕಾಲ ಮುಗಿಯುತ್ತಾ ಬಂದಿದೆ. ನೀನು ನಮ್ಮ ಮೇಲೆ ರಾಗವಿಟ್ಟು ದುಃಖಿಯಾಗಿದ್ದೀಯೆ. ಅರೆ ತಮ್ಮಾ! ಮೋಹ ಭಾವವೇ ಸಂಸಾರ ದುಃಖಕ್ಕೆ ಕಾರಣವಾಗಿದೆ. ಆ ಮೋಹಭಾವ ಬಿಡುವುದಕ್ಕಾಗಿಯೇ ನಾವು ಎಲ್ಲವನ್ನೂ ತ್ಯಜಿಸಿ ಬಂದೆವು. ನೀನೇಕೆ ಅದನ್ನು ಹೊತ್ತುಕೊಂಡು ಹೋಗುವೆ?"

ಹನಗೊಂಡಗೆ ದುಃಖವನ್ನು ಸಹಿಸಲಾಗಲಿಲ್ಲ. ಮತ್ತೆ ಕುಟೀರದಿಂದ ಹೊರಹೋಗಿ ದುಃಖಿಸಲಾರಂಭಿಸಿದರು.

ಪೂಜ್ಯ ಶ್ರೀಯವರ ಸ್ಮರಣ ಶಕ್ತಿ ಸ್ವಲ್ಪವೂ ಕುಗ್ಗಿರಲಿಲ್ಲ. ಸಮಾಧಿಗೆ ೧೮ ದಿನಗಳು ಬಾಕಿ ಇದ್ದವು. ಆಗ ಅವರು ಅಭಿಷೇಕದ ಬಗ್ಗೆ ಹೇಳಿದರು.

"ನೀವು ಪೂಜಾಕಾರ್ಯಗಳಿಗಾಗಿ ಸಾವಿರಾರು ರೂಪಾಯಿಗಳನ್ನು ವಸೂಲಿ ಮಾಡುತ್ತೀರಿ. ಹಾಲು ಮೊಸರು ತುಪ್ಪಗಳಿಗಾಗಿ ಏಕೆ ಕೈ ಚಿಕ್ಕದು ಮಾಡುತ್ತೀರಿ. ಅವರು ಹಾಗೆ ಹೇಳಿದ ಮೇಲೆ ಮಾರನೆಯ ದಿನ ಭಾರಿ ವೈಭವದಿಂದ ಅಭಿಷೇಕ ಮಾಡಲಾಯಿತು. ಅದನ್ನು ಬಹಳ ಲಕ್ಷವಿಟ್ಟು ನೋಡಿದರು.

ಒಂದು ವೇಳೆ ಪಂಚಾಮೃತ ಅಭಿಷೇಕ ಆಗಮೋಕ್ತವಲ್ಲದಿದ್ದರೆ ಅಂತಹ ಕ್ಷೀಣ ದೆಶೆಯಲ್ಲಿ ಅದನ್ನು ಏಕೆ ಶ್ರದ್ಧೆ ಇಟ್ಟು ನೋಡುತ್ತಿದ್ದರು?